ಹಂಪಿ ಕನ್ನಡ ವಿಶ್ವವಿದ್ಯಾಲಯ

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

ವಿಷಯ:

ಬಿ.ಟಿ.ಜಾಹ್ನವಿಯವರ ಕತೆಗಳು: ಸ್ತ್ರೀ ಸಂವೇದನೆಯ ನೆಲೆಗಳು

ಸಂಶೋಧನಾ ವಿದ್ಯಾರ್ಥಿ

ಡಿ.ರಾಜೇಶ್ವರಿ

ಎಂ.ಫಿಲ್. ವಿದ್ಯಾರ್ಥಿನಿ,

ಹಂಪಿ ವಿಶ್ವವಿದ್ಯಾಲಯ

ಮಾರ್ಗದರ್ಶಕರು

ಡಾ.ಶೀಲಾದೇವಿ ಎಸ್. ಮಳೀಮಠ

ಕನ್ನಡ ವಿಭಾಗದ ಮುಖ್ಯಸ್ಥರು

ಬಿ.ಎಂ.ಎಸ್. ಮಹಿಳಾ ವಿದ್ಯಾಲಯ,

ಬಸವನಗುಡಿ, ಬೆಂಗಳೂರು – 560 004.

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು,

'ಸಂಶೋಧನಾ ಕೇಂದ್ರ',

ಚಾಮರಾಜಪೇಟೆ, ಬೆಂಗಳೂರು – 560 018.

1224

1224

ಹಂಪಿ ಕನ್ನಡ ವಿಶ್ವವಿದ್ಯಾಲಯ

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

ವಿಷಯ:

ಬಿ.ಟಿ.ಜಾಹ್ನವಿಯವರ ಕತೆಗಳು: ಸ್ತ್ರೀ ಸಂವೇದನೆಯ ನೆಲೆಗಳು

ಸಂಶೋಧನಾ ವಿದ್ಯಾರ್ಥಿ

ಡಿ.ರಾಜೇಶ್ವರಿ

ಎಂ.ಫಿಲ್. ವಿದ್ಯಾರ್ಥಿನಿ,

ಹಂಪಿ ವಿಶ್ವವಿದ್ಯಾಲಯ

ಮಾರ್ಗದರ್ಶಕರು

ಡಾ.ಶೀಲಾದೇವಿ ಎಸ್. ಮಳೀಮಠ

ಕನ್ನಡ ವಿಭಾಗದ ಮುಖ್ಯಸ್ಥರು

ಬಿ.ಎಂ.ಎಸ್. ಮಹಿಳಾ ವಿದ್ಯಾಲಯ,

ಬಸವನಗುಡಿ, ಬೆಂಗಳೂರು – 560 004.

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು,

'ಸಂಶೋಧನಾ ಕೇಂದ್ರ',

ಚಾಮರಾಜಪೇಟೆ, ಬೆಂಗಳೂರು – 560 018.

ಬಿ.ಟಿ.ಜಾಹ್ನವಿಯವರ ಕತೆಗಳು: ಸ್ತ್ರೀ ಸಂವೇದನೆಯ ನೆಲೆಗಳು

ಡಿ.ರಾಜೇಶ್ವರಿ



ಬಿ.ಟಿ.ಜಾಹ್ನವಿ

(ಜನನ: 26–11–1963)

ಪ್ರಮಾಣ ಪತ್ರ

'ಬಿ.ಟಿ.ಜಾಹ್ನವಿಯವರ ಕತೆಗಳು: ಸ್ತ್ರೀ ಸಂವೇದನೆಯ ನೆಲೆಗಳು' ಎಂಬ ನಿಬಂಧವನ್ನು ಎಂಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸಲ್ಲಿಸಲು ಡಾ.ಶೀಲಾದೇವಿ ಎಸ್. ಮಳೀಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವಾಗಿ ಇದುವರೆವಿಗೂ ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: ಜುಲೈ 24, 2015

ಸ್ಥಳ: ಬೆಂಗಳೂರು

ಸಹಿ/–

ಡಿ.ರಾಜೇಶ್ವರಿ

ಸಂಶೋಧನಾ ವಿದ್ಯಾರ್ಥಿ

ಬೆಂಗಳೂರು.

ದೃಢೀಕರಣ ಪತ್ರ

ಡಿ.ರಾಜೇಶ್ವರಿರವರು ಎಂಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ **'ಬಿ.ಟಿ.ಜಾಹ್ನವಿಯವರ ಕತೆಗಳು: ಸ್ತ್ರೀ ಸಂವೇದನೆಯ ನೆಲೆಗಳು'** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ ಪರ ಸಲ್ಲಿಸಲು ನನ್ನ ಮಾರ್ಗದರ್ಶನಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವಾಗಿ ಇದುವರೆವಿಗೂ ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: ಜುಲೈ 24, 2015

ಸ್ಥಳ: ಬೆಂಗಳೂರು

ಸಹಿ/–

ಮಾರ್ಗದರ್ಶಕರು

ಡಾ.ಶೀಲಾದೇವಿ ಎಸ್. ಮಳೀಮಠ

ಮುಖ್ಯಸ್ಥರು

ಬಿ.ಎಂ.ಎಸ್. ಮಹಿಳಾ ವಿದ್ಯಾಲಯ,

ಬಸವನಗುಡಿ,

ಬೆಂಗಳೂರು – 560 004.

ಪರಿವಿಡಿ

ಅಧ್ಯಾಯ – 1

ಅಧ್ಯಯನದ ಪೀಠಿಕೆ, ಉದ್ದೇಶ ಮತ್ತು ವ್ಯಾಪ್ತಿ / 1 –2

ಅಧ್ಯಾಯ – 2

ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆ ನಡೆದುಬಂದ ಹಾದಿ / 3 –6

ಅಧ್ಯಾಯ – 3

ಕನ್ನಡದ ಮಹಿಳಾ ಕತೆಗಾರ್ತಿಯರು; ಒಂದು ಪಕ್ಷಿನೋಟ / 7 –11

ಅಧ್ಯಾಯ – 4

ಸ್ತ್ರೀ ಸಂವೇದನೆ: ಸಂವಹನ / 12 – 24

ಅಧ್ಯಾಯ – 5

ಬಿ.ಟಿ.ಜಾಹ್ನವಿಯರ ಸಣ್ಣಕತೆಗಳು:

ವಸ್ತು–ವಿನ್ಯಾಸ; ಸ್ತ್ರೀ ಸಂವೇದನೆಗಳ ನಿರೀಕ್ಷೆ 25 – 55

ಅಧ್ಯಾಯ – 6

ಸಮಾರೋಪ / 52

ಅನುಬಂಧ / 53 – 55

ಅಧ್ಯಾಯ – 1

ಅಧ್ಯಯನದ ಪೀಠಿಕೆ, ಉದ್ದೇಶ ಮತ್ತು ವ್ಯಾಪ್ತಿ

ಅಕ್ಷರ ಸಂಸ್ಕೃತಿ ಅನೇಕ ಸಂಘರ್ಷಗಳಿಗೆ ಎಡೆ ಮಾಡಿಕೊಟ್ಟಿದೆ. 'ಮಹಿಳಾ ಜಾಗೃತಿ' ಸ್ತ್ರೀ ವಿದ್ಯಾಭ್ಯಾಸದ ಉತ್ಪನ್ನ. ಪ್ರಸ್ತುತ ಸಂದರ್ಭದಲ್ಲಿ ಮಹಿಳಾ ವಿವೇಚನೆ ಬಹುಮುಖಿ ವಿಚಾರ ನೆಲೆಗಳಲ್ಲಿ ಕವಲೊಡೆಯುತ್ತಿದೆ. 'ಸಾಹಿತ್ಯವನ್ನು ಓದುವ ಕ್ರಮವೂ ಅದನ್ನು ಒಪ್ಪಿಕೊಳ್ಳುವ ವಿಧಾನದಲ್ಲೂ ನಮ್ಮ ಗ್ರಹಿಕೆಯಲ್ಲಿನ ತಾತ್ವಿಕತೆಯನ್ನು ಪ್ರಚೋದಿಸುತ್ತದೆ.' ಮಹಿಳೆ ತನ್ನತ್ತ ತಾನು ಆತ್ಮಗ್ರಹಿಕೆ ಮಾಡಿಕೊಳ್ಳುವ ಮತ್ತು ಇಡೀ ಸಮಾಜ ಅವಳನ್ನು ಪರಿಭಾವಿಸುವ ಕೋನಗಳನ್ನು ರೂಪಾಂತರಗೊಳಿಸಿದೆ. 'ಸ್ತ್ರೀ' ಸಾಧ್ಯತೆಗಳಿಗೆ ಪುರುಷ ಸಮಾಜ ಸಹಮತ ನೀಡಲೇಬೇಕಾದ ಒತ್ತಡವೊಂದು ಸೃಷ್ಟಿಯಾಗಿದೆ. ಸ್ತ್ರೀ ಸಾಹಿತ್ಯ ಮತ್ತು ಚಿಂತನೆ, ಸಾಹಿತ್ಯ ಲೋಕವನ್ನು ಪುನರ್ ಮೌಲ್ಯೀಕರಣ ಮಾಡುವ ಸನ್ನಿವೇಶವನ್ನು ಸೃಷ್ಟಿಸಿದೆ. ಕಾಲಾಂತರದಿಂದ ರಚಿತಗೊಳ್ಳುತ್ತಿರುವ ಅವಳ ಅಭಿವ್ಯಕ್ತಿಗಳಲ್ಲಿ ಭಿನ್ನ ಭಿನ್ನ ಸಂವೇದನೆಗಳು ಭಿನ್ನ ಕೋನಗಳಿಂದಲೇ ಅದನ್ನು ಅಧ್ಯಯನ ಮಾಡುವ ಕುತೂಹಲವನ್ನು ಮುಂದಿಟ್ಟಿದೆ. ಸ್ತ್ರೀ ಪ್ರಿಯವಾದ ಏಕಾಂತವಾದ ಬದಲುಗೊಂಡು ಬಹುರೂಪಿ ಸಿದ್ಧಾಂತಗಳನ್ನು ಸೃಷ್ಟಿಸುತ್ತಿದೆ. ಮಂದ್ರಸ್ಥಾಯಿಯಲ್ಲೇ ಬದುಕಿನ 'ಸಂಕೀರ್ಣತೆ ಪದರುಗಳನ್ನು ಬಿಚ್ಚಿಡುವ ಸ್ತ್ರೀವಾದಿ ಚಿಂತನೆ ಮತ್ತು ಅದರ ಬಗೆಗಿನ ಸೈದ್ಧಾಂತಿಕ ಅಧ್ಯಯನ ಪ್ರಸ್ತುತ ವಿಮರ್ಶಾ ಪ್ರಪಂಚದಲ್ಲಿ ಭಿನ್ನ ಪರಿಕಲ್ಪನೆಗಳಾಗಿ ಮೂಡುತ್ತಿದೆ. ಸ್ತ್ರೀ ಸಾಹಿತ್ಯದ ನಿರಂತರ ಓದುವಿಕೆ ನನ್ನ ಬರೆಯುವಿಕೆಯಾಗಿ ಪರಿಣಾಮವಾಯಿತು. ಸ್ತ್ರೀವಾದಿ ಸಂವೇದನೆಗಳಷ್ಟೇ ಆಗಿರದೆ ಸಮಾಜದ ಬಹುಮುಖಿ ಪ್ರಜ್ಞೆಯನ್ನು ಹುಡುಕುತ್ತಿರುವ ಎಷ್ಟೋ ಲೇಖಕಿಯರ ಕತೆಗಳು ನನ್ನ ಆಸಕ್ತಿಯ ಮೂಲಗಳು. ಪ್ರಸ್ತುತ ಆಧುನಿಕ ಸಂದರ್ಭದಲ್ಲಿ ಸ್ತ್ರೀ ಸಾಹಿತ್ಯದ ಮರುಚಿಂತನೆ ಅವಶ್ಯವಾಗಿದೆ.

ಈ ಕಥಾಗುಚ್ಛಗಳಲ್ಲಿ 'ಏಕರೂಪ' ಸೂತ್ರವೊಂದು ಕಂಡುಬರುವುದರಿಂದ ನನ್ನ ಆಯ್ಕೆ ಅಧ್ಯಯನಗಹನತೆಗೆ ಸಾಕ್ಷಿಯಾಗಿದೆ. ನಾನು ಹುಡುಕುತ್ತಿರುವ ಆಂಶಿಕ ಸತ್ಯಗಳು ಈ ಕತೆಗಳನ್ನು ನೆಲೆಗೊಂಡಿವೆ. ತಾನು ಹೇಳಬೇಕಾದ ವಿಚಾರಗಳನ್ನು ಖಚಿತವಾಗಿ ನಿರ್ಣಾಯಕವಾಗಿ ಹೇಳುವುದು ಸಂಶೋಧನೆಯ ಮುಖ್ಯ ಲಕ್ಷಣವೂ ಆಗಿದೆ.

ಕಥಾ ಬಾಹುಳ್ಯತೆಗಳು ಬಹುಮುಖಿ ವಿಚಾರಗಳಿಂದ ಅಧ್ಯಯನದ ಚೌಕಟ್ಟು ಅತಿ ವಿಸ್ತಾರಗೊಳ್ಳುತ್ತಿರುವ ಸಂಭವವಿದೆ. ಹೀಗಾಗಿ ಜಾಹ್ನವಿಯವರ ಸಣ್ಣ ಕತೆಗಳಿಗೆ ನನ್ನ ಸಂಶೋಧನಕಾರ್ಯವನ್ನು ಪರಿಮಿತಿಗೊಳಿಸಿಕೊಂಡಿದ್ದೇನೆ.

'ಸಣ್ಣಕತೆ' ಅರ್ಥವ್ಯಾಪ್ತಿ:–

'ಕಾವೇಷು ನಾಟಕಂ ರಮ್ಯಂ' ಎಂಬ ಉಕ್ತಿಯನ್ನು ಸುಳ್ಳು ಮಾಡಿರುವ ಪ್ರಾಕಾರ 'ಸಣ್ಣ

ಕತೆ'. ಗದ್ಯಂ ಹೃದ್ಯಂ ಆಗಿದ್ದರೂ, ಸಣ್ಣಕತೆಗಳು ಕಾದಂಬರಿ ಪ್ರಪಂಚವನ್ನು ಮೀರಿ ಜನಪ್ರಿಯತೆಯನ್ನು ಗಿಟ್ಟಿಸಿಕೊಂಡಿದೆ. ಅವಸರದ ಗಡಿಬಿಡಿಯ ಜೀವನದಲ್ಲಿ ಸಮಯದ ಅಭಾವದ ಪರಿಣಾಮವಾಗಿ ಅತಿ ದೀರ್ಘ ಕಾವ್ಯ ಕಾದಂಬರಿಗಳನ್ನು ಓದುವ ತಾಳ್ಮೆ ತಪ್ಪಿಹೋಗಿ 'ಸಣ್ಣಕತೆ' ಜನಪ್ರಿಯವಾಗಲು ಕಾರಣವಾಯಿತು. ಎಡ್ಗರ್ ಅಲನ್ ಪೋ ಹೇಳಿಕೆಯಂತೆ, 'ಒಂದೇ ಸಲಕ್ಕೆ ಓದಿ ಮುಗಿಸಬಹುದಾದುದೇ ನಿಜವಾದ 'ಸಣ್ಣ ಕತೆ'. ಒಂದು ಸಣ್ಣ ಕತೆಯ ಲಕ್ಷಣವೆಂದರೆ ಇನ್ನೊಂದು ಸಣ್ಣ ಕತೆಯನ್ನು ಓದುವಂತೆ ಪ್ರೇರೇಪಿಸುವುದು. ಇದು ಹೊಸಹೊಸ ರೂಪ ತಂತ್ರ ಸಂವಿಧಾನಗಳ ಅನ್ವೇಷಣಾ ಭೂಮಿಕೆಯಾಗಿದೆ. ಕಾದಂಬರಿಯಿಂದ ವಿಶಾಲ ಹರಹನ್ನು ಮೊಟಕುಗೊಳಿಸಿ, ನಿರ್ದಿಷ್ಟ ಸನ್ನಿವೇಷ, ಕಿರುಸಂದರ್ಭ ಕೆಲವೇ ಪಾತ್ರಗಳನ್ನು ಮಾತ್ರವೇ ತನ್ನ ಒಡಲಲ್ಲಿ ಧರಿಸಿ, ಹೇಳಬೇಕಾದ ವಿಷಯವನ್ನು ಅಷ್ಟೇ ಪರಿಣಾಮಕಾರಿಯಾಗಿ ಮುಟ್ಟಿಸುತ್ತದೆ. ಕತೆ ಹೇಳುವ ನೀತಿಯೇ ವಿಶೇಷ ವಿಶಿಷ್ಟವಾದದ್ದು. ಕೈಗಾರಿಕಾ ಕ್ರಾಂತಿಯ ನಂತರದ ದಿನಗಳಲ್ಲಿ ಅತಿವೇಗ ಪಡೆದ ಬದುಕಿನ ವಾಹಿನಿಯಲ್ಲಿ ಸಣ್ಣಕತೆ ತೀಕ್ಷ್ಣವಾಗಿ ಮತ್ತು ರಸಾತ್ಮಕವಾಗಿ ಸಾಹಿತ್ಯ ಪ್ರಪಂಚದಲ್ಲಿ ತನ್ನ ಸ್ಥಾನವನ್ನು ಗಟ್ಟಿಯಾಗಿಸಿಕೊಂಡಿದೆ. ಪುಟ್ಟಕತೆ ತನ್ನ ಜನಾಂಗಕ್ಕೆ ಅತಿದೊಡ್ಡ ಸಂದೇಶವನ್ನು ತಲುಪಿಸುತ್ತದೆ. ಕಿರುಹಂದರದಲ್ಲಿ ಕತೆಗಾರ ತನ್ನ ಅನುಭವಗಳನ್ನು ಸಮಾಜದ ಆಶಯಗಳನ್ನು ಜನಾಂಗದ ಕಾಳಜಿಯನ್ನು ತೀಕ್ಷ್ಣವಾಗಿ ಅಭಿವ್ಯಕ್ತಿಸಬಲ್ಲ. ಸಣ್ಣ ಕತೆಯನ್ನು ಓದುವ ಉದ್ದೇಶ ಯಾಂತ್ರಿಕ ಬದುಕಿನಲ್ಲಿ ಮನೋರಂಜನೆ ಪಡೆಯುವುದೊಂದೇ ಅಲ್ಲದೆ, ಕತೆಯ ಸಂದರ್ಭ ಸನ್ನಿವೇಶಗಳೊಂದಿಗೆ ಓದುಗ ತನ್ನ ಅನುಭವಗಳನ್ನು ಆತ್ಮಾವಲೋಕನ ಮಾಡಿಕೊಳ್ಳಬಹುದಾಗಿದೆ. ನಮ್ಮ ಬದುಕಿನ ಯಾವುದೇ ಪುಟವನ್ನು ತಿರುವಿ ಹಾಕಿದಂತೆ ಸಣ್ಣ ಕತೆಗಳು ನಮ್ಮ ಅನುಭವಗಳ ಮರುಕಳಿಕೆ ಆಗಿರುವುದರಿಂದ ನಮ್ಮ ಜೀವನದ ಆದರ್ಶವೂ ಆಗಿದೆ. ಸಮಾಜದ ಪ್ರತಿಬಿಂಬವೇ ಕತೆ ಆಗಿರುವುದರಿಂದ ವ್ಯಕ್ತಿ ಪರಿಶೋಧಕರ ಜೊತೆಗೆ ಸಾಮಾಜಿಕ ದುರಂತಗಳಿಂದ, ವಿಘಟನೆಗಳಿಂದ, ಅಪಾಯಗಳಿಂದ ಕಾಪಾಡುವ ಜವಾಬ್ದಾರಿಯನ್ನು ತನ್ನ ಪುಟ್ಟ ಹೆಗಲ ಮೇಲೆ ಹೊತ್ತುಕೊಂಡಿದೆ. ಸಣ್ಣ ಕತೆ ಆ ಕ್ಷಣ ಹುಟ್ಟಿ ಮರುಕ್ಷಣವೇ ಸತ್ತು ಹೋಗುವುದಿಲ್ಲ. ದೀರ್ಘ ಕಾಲಕ್ಕೂ ತನ್ನ ಪರಿಣಾಮವನ್ನು ಉಳಿಸಿಕೊಳ್ಳುತ್ತದೆ. ಕಥಾ ಪ್ರಾಕಾರವು ಕನ್ನಡ ಭಾಷಿಕರ ಪ್ರಪಂಚವನ್ನು ವಿಸ್ತರಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಭಾಷಣ ಕೇಳುವುದಕ್ಕಿಂತ ಕತೆ ಓದುವುದರಲ್ಲಿ ಕತೆ ಕೇಳುವಲ್ಲಿ ಆಕರ್ಷಣಾ ಗುಣ ಇರುವುದರಿಂದ ಕನ್ನಡಿಗರ ಸಂಖ್ಯೆ ವಿಸ್ತಾರಗೊಳ್ಳುತ್ತಿದೆ. ಇದೇ ಕಥಾಪ್ರಾಕಾರ ಕನ್ನಡ ಭಾಷೆಗೆ ಸಲ್ಲಿಸುತ್ತಿರುವ ನವೀನ ಮಾದರಿ ಕತೆಗಾರರ ಸಂಖ್ಯೆಯೂ ಹೆಚ್ಚಳಗೊಂಡಿದೆ. ಪತ್ರಿಕೆಗಳಲ್ಲಿ ದೂರದರ್ಶನದಲ್ಲಿ, ಅಂತರ್ಜಾಲದಲ್ಲೂ ಕತೆಗಳು ಮೈ ತಳೆದಿವೆ.

ಅಧ್ಯಾಯ – 2

ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆ ನಡೆದು ಬಂದ ಹಾದಿ

ನವೋದಯ ಸಂದರ್ಭದಲ್ಲಿ ಇಂಗ್ಲಿಷ್ ಸಾಹಿತ್ಯ ಪ್ರಭಾವದಿಂದ ಕನ್ನಡಕ್ಕೆ ಪ್ರವೇಶ ಮಾಡಿದ ಹೊಸ ಸಾಹಿತ್ಯ ಪ್ರಕಾರವೇ ಸಣ್ಣಕತೆ. 1900ರಿಂದ ಸುಮಾರಿಗೆ ಪ್ರಕಟವಾದ ಪಂಜೆ ಮಂಗೇಶರಾಯರ ಹಾಸ್ಯಪ್ರಧಾನ ಕತೆ 'ಕಮಲಾಪುರದ ಹೋಟ್ಲಿನಲ್ಲಿ' ಕನ್ನಡದ ಮೊದಲ ಸಣ್ಣಕತೆ.

ಮುಂದಿನ ದಶಕದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎಸ್.ಕಾಮತ್ ಮತ್ತು ಕೆರೂರು ವಾಸುದೇವಾಚಾರ್ಯರು ಕಥಾರಚನೆ ಮಾಡತೊಡಗಿದರು. ಮಾಸ್ತಿಯವರ 'ರಂಗನ ಮದುವೆ' 1911ರಲ್ಲಿ ಪ್ರಕಟವಾಗಿ ಕನ್ನಡದ ಮೊದಲ ಕಥಾ ಸಂಕಲನವಾಗಿ ಅವರ 'ಕೆಲವು ಸಣ್ಣಕತೆಗಳು' 1920ರಲ್ಲಿ ಹೊರಬಂದಿತು. ಈ ಹೊಸ ಪ್ರಕಾರಕ್ಕೆ ಪೂರ್ಣ ಆಧುನಿಕ ರೂಪವನ್ನು ಕೊಟ್ಟು ಅದನ್ನು ಒಂದು ಸಮಗ್ರ ಜೀವನದರ್ಶನದ ಮಾಧ್ಯಮವನ್ನಾಗಿ ಮಾಡಿಕೊಂಡು ಕನ್ನಡದಲ್ಲಿ ಅದರ ಒಂದು ಪರಂಪರೆಯನ್ನು ಕಟ್ಟಿಕೊಟ್ಟ ಮಾಸ್ತಿಯವರನ್ನು 'ಕನ್ನಡ ಸಣ್ಣಕತೆಯ ಜನಕ' ಎಂದು ಸಹಜವಾಗಿಯೇ ನಾವು ಗುರುತಿಸುತ್ತೇವೆ.

ಕಥೆಯ ಮೌಖಿಕ ಪರಂಪರೆಯನ್ನೇ ಹೊಸ ಕಲಾತ್ಮಕ ಅಗತ್ಯಕ್ಕೆ ಮಾಸ್ತಿ ಬಳಸಿಕೊಂಡರು. ಕಥೆಯ ಕ್ರಿಯೆಯನ್ನು ದೂರದಲ್ಲಿಟ್ಟು ವಸ್ತುನಿಷ್ಠವಾಗಿ ಅದನ್ನು ಪರಿಭಾವಿಸಲೂ, ಅದನ್ನು ಬೆಲೆಗಟ್ಟಲು ಬೇರೆ ದೃಷ್ಟಿಕೋನಗಳನ್ನು ಒದಗಿಸಲೂ ಅದು ಅವರಿಗೆ ನೆರವಾಯಿತು. ಮಾಸ್ತಿಯವರದು ವಾಸ್ತವಿಕ ಮಾರ್ಗ. ಬದುಕನ್ನು ಯಥಾವತ್ತಾಗಿ ಚಿತ್ರಿಸಲು ಅವರು ಬದ್ಧ. ಅವರದು ನೇರ ನಿರೂಪಣೆ. ಅವರ ಶೈಲಿ ಸರ, ಪಾರದರ್ಶಕ. ತೀರಾ ಅವಶ್ಯಕವೆನಿಸಿದ ಸಂದರ್ಭಗಳಲ್ಲಿ ಸಂಕೇತ ಪ್ರತಿಮೆಗಳು ಬಳಕೆಯಾಗಿ ಬರವಣಿಗೆ ಕಾವ್ಯಮಯವಾಗುವುದೂ ಉಂಟು. ಅದರ ಪಾತ್ರಗಳು ಹೆಚ್ಚಾಗಿ ಸಮಾಜದ ಬೇರೆಬೇರೆ ಸ್ತರಗಳಲ್ಲಿನ ಸಾಮಾನ್ಯರು. ಚಾರಿತ್ರಿಕ, ಪೌರಾಣಿಕ ವ್ಯಕ್ತಿಗಳೂ, ಸಾಹಿತಿಗಳೂ ಅಷ್ಟೇ ಸಾಹಿತ್ಯದ ಪಾತ್ರಗಳೂ ಅವರ ಕೆಲವು ಕಥೆಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಕತೆಗಳನ್ನು ಬರೆಯುವುದರಲ್ಲಿ ತಮ್ಮ ಉದ್ದೇಶ ಜೀವನ ತಮಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದೆಂದೂ ಇಂಥ ಜೀವನದ ದಿಟವಾದ ಚಿತ್ರಗಳಿಂದ ಭಾವೋದಯವಾಗುವುದು ಸಹಜವೆಂದೂ ಅವರು ಹೇಳಿದ್ದಾರೆ. ತಾವು ಕಂಡುಕೊಂಡ ಜೀವನ ಮೌಲ್ಯಗಳನ್ನು ಅನುಭವ ನಿಕಷಕ್ಕೊಡ್ಡಿ ಶೋಧಿಸಿ ಪ್ರಕಟಿಸುತ್ತಾ ತಮ್ಮ ನೂರೊಂದು ಕಥೆಗಳಲ್ಲಿ ಅವರು ಸುಸಂಗತ ಅಖಂಡ ಅನುಭವ ಪ್ರಪಂಚವನ್ನು ಸೃಷ್ಟಿಸಿಕೊಟ್ಟಿದ್ದಾರೆ.

ಅವರ ಪರಂಪರೆಯ ವಾಸ್ತವಿಕತೆ, ನೇರ ನಿರೂಪಣೆ, ಸರಳಶೈಲಿ, ಸ್ವಲ್ಪಮಟ್ಟಿನ ಭಾವನಾಮಯತೆ, ಆದರ್ಶೀಕರಣ ಮುಂತಾದ ಲಕ್ಷಣಗಳನ್ನು ಮುಂದಿನ ಕಥೆಗಾರರಲ್ಲಿ

ಕಾಣಬಹುದಾಗಿದೆ. ಆದರೂ ಒಬ್ಬೊಬ್ಬರೂ ತಮ್ಮ ವ್ಯಕ್ತಿ ವೈಶಿಷ್ಟ್ಯವನ್ನು ಮೆರೆದಿದ್ದಾರೆ. ಶ್ರೀಪತಿಯವರಲ್ಲಿ ಸಮ್ಯಗ್ ದರ್ಶನ, ಕುವೆಂಪು ಅವರಲ್ಲಿ ಕ್ರಾಂತಿಕಾರಿ ದರ್ಶನ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಲ್ಲಿ ಹಳ್ಳಿ ಜೀವನದ ಸೊಗಡು ಹಾಗೂ ಹಾಸ್ಯ, ಆನಂದರಲ್ಲಿ ಶೃಂಗಾರ, ಆನಂದಕಂದರಲ್ಲಿ ಜಾನಪದ ಪ್ರಜ್ಞೆ, ಅಶ್ವತ್ಥರಲ್ಲಿ ಸಾಮಾಜಿಕ ವಿಸಂಗತಿಗಳತ್ತ ನೇರನೋಟ, ಭಾರತೀಪ್ರಿಯರಲ್ಲಿ ಆತ್ಮೀಯ ಸಹಾನುಭೂತಿ, ವ್ಯಾಸರಾಯ ಬಲ್ಲಾಳರಲ್ಲಿ ನಗರ ಜೀವನದ ಒತ್ತಡ, ಬಾಗಲೋಡಿ ದೇವರಾಯರಲ್ಲಿ ಅರ್ಥಗರ್ಭಿತ ವ್ಯಂಗ್ಯ ಮತ್ತು ತ್ರಿವೇಣಿಯವರಲ್ಲಿ ಮನೋವೈಜ್ಞಾನಿಕ ದೃಷ್ಟಿ ಹಾಗೂ ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧ ಸ್ತ್ರೀಪರವಾದ ಅವರ ಕೃತಿಗಳನ್ನು ಅನನ್ಯವಾಗಿಸಿವೆ. ಮಾಸ್ತಿಯವರು ಇಂದಿಗೂ ಕನ್ನಡದ ಅತ್ಯಂತ ಮಹತ್ವದ ಕಥೆಗಾರರಾಗಿರುವಂತೆ ಅವರ ಪರಂಪರೆಯೂ ಕನ್ನಡ ಸಣ್ಣ ಕತೆಯನ್ನು ಹಲವು ಶ್ರೇಷ್ಠ ಕೃತಿಗಳಿಂದ ಶ್ರೀಮಂತಗೊಳಿಸಿದೆ.

ಮೂವತ್ತರ ದಶಕದಲ್ಲಿ ಜಾಗತಿಕವಾಗಿಯೇ ಚಾಲನೆಗೊಂಡ ಎಡಪಂಥೀಯ ಪ್ರಗತಿಶೀಲ ಚಳುವಳಿ ನಲವತ್ತರ ದಶಕದಲ್ಲಿ ಕನ್ನಡದಲ್ಲಿಯೂ ಪಸರಿಸಿತು. ಮಾಸ್ತಿಯವರ ಪರಂಪರೆಯಲ್ಲಿಯೇ ಬೆಳೆದ ಅ.ನ.ಕೃಷ್ಣರಾಯರೇ ಇದರ ನೇತಾರರಾದರು. ನಿರಂಜನರು ಸೈದ್ಧಾಂತಿಕ ವಕ್ತಾರರೂ, ಬಸವರಾಜ ಕಟ್ಟಿಮನಿ, ತ.ರಾ.ಸು., ಚದುರಂಗಗೊಡನೆ ಈ ಚಳುವಳಿಯ ಮಂಚೂಣಿಯ ಮುಖ್ಯ ಕಥೆಗಾರರೂ ಆದರು. ಆರ್ಥಿಕ ಅಸಮಾನತೆ ಮತ್ತು ಶೋಷಣೆಗಳ ಸಾಮಾಜಿಕ ನೆಲೆಯ ದರ್ಶನ ಹಾಗೂ ಸ್ಥಿತ್ಯಂತರಕ್ಕೆ ಆಗ್ರಹ ಇವರ ಕಥೆಗಳ ಮೂಲಸ್ಫೂರ್ತಿ. ಮಾಸ್ತಿ ಪರಂಪರೆಯ ವೈಯಕ್ತಿಕ ನೆಲೆಯ ಸಹಾನುಭೂತಿ ಸಾಮಾಜಿಕ ನೆಲೆ ಆಕ್ರೋಶ ಪ್ರತಿಭಟನೆಗಳಿಗೆ ಎಡಮಾಡಿಕೊಟ್ಟಿತು. ಆ ಪರಂಪರೆಯ ನೇರ ನಿರೂಪಣೆ, ಸರಳ ಶೈಲಿಗಳು ಮುಂದುವರೆದು ಸಂವಹನ ಸೌಲಭ್ಯಕ್ಕೆ ಎರವಾಗಲಿಲ್ಲ. ಶೋಷಕ–ಶೋಷಿತ ದ್ವಂದ್ವೀಯತಾವಾದವು ಕಪ್ಪು–ಬಿಳುಪು ತೀವ್ರ ಅಭಿವ್ಯಕ್ತಿಯಲ್ಲಿ ವ್ಯಕ್ತಿತ್ವದ ಸಂಕೀರ್ಣತೆಗೆ ಧಕ್ಕೆಯುಂಟಾಯಿತು. ನವ್ಯ ಮನೋಧರ್ಮದ ಮುನ್ಸೂಚನೆ ಕೊಡುವಂತಹಾ ಈ ಚಳುವಳಿಯ ಮುಖ್ಯ ಕಥೆಗಾರರ ಕೆಲವು ಸಣ್ಣ ಕಥೆಗಳನ್ನುಳಿದು ಈ ಚಳುವಳಿ ಸಾಮಾಜಿಕ ಅರಿವನ್ನು ಹೆಚ್ಚಿಸಿದರೂ ಸಾಹಿತ್ಯಕ್ಕೆ ವಿಶೇಷ ಕೊಡುಗೆಗಳನ್ನು ನೀಡಲಿಲ್ಲ.

ಸಾಹಿತ್ಯಕ ಗುಣದ ವಿಶಿಷ್ಟತೆಯನ್ನು ಎತ್ತಿ ಹಿಡಿಯುವ ಪ್ರತಿಕ್ರಿಯೆಯೂ ಕಾಣಿಸಿಕೊಳ್ಳಲು ತಡವಾಗಲಿಲ್ಲ. ಸ್ವಾತಂತ್ರ್ಯೋತ್ತರ ಕಾಲದ ಭ್ರಮನಿರಸನದ ವಾತಾವರಣದಲ್ಲಿ ಇಂಗ್ಲಿಷ್ ನವ್ಯ ಕಾವ್ಯದ ಪ್ರಭಾವಕ್ಕೆ ತಕ್ಕ ಅವಕಾಶ ದೊರೆತು, ಕನ್ನಡದಲ್ಲಿ ಸೆಲೆಯೊಡೆದ ನವ್ಯಕಾವ್ಯದ ಆಧುನಿಕ ಸಂವೇದನೆ ನವ್ಯಕಥೆಯನ್ನು ಹುಟ್ಟುಹಾಕಿತು. ಅಸ್ತಿತ್ವವಾದ ಮುಂತಾದ ಆಧುನಿಕ ಪಾಶ್ಚಾತ್ಯ ವಿಚಾರಗಳೂ ಪಾಶ್ಚಾತ್ಯ ನವ್ಯ ಕಥೆ, ಕಾದಂಬರಿಕಾರರ ಕೃತಿಗಳೂ ಪ್ರಭಾವ ಬೀರಿದವು. ಮನೋವಿಜ್ಞಾನದ ಹಿನ್ನೆಲೆಯಲ್ಲಿ ಮನುಸ್ಸ್ವಭಾವದ ಗ್ರಹಿಕೆ ಮಾರ್ಪಾಟಾದುದಲ್ಲದೆ 'ಪ್ರಜ್ಞಾಪ್ರವಾಹ'ದಂತ ತಂತ್ರ ಕರಗತವಾಯಿತು. ಸಾಮಾಜಿಕ ಪ್ರಗತಿಯ ವಿಶೇಷ ಆಶೋತ್ತರಗಳ ಅಸಾಫಲ್ಯದ ಭಾವನೆಯಿಂದ ದೃಷ್ಟಿ ಹೊರಳಿ ಅಂತರ್ಮುಖಿಯಾಯಿತು. ಬದುಕಿನ

ಮೂಲಭೂತ ಪ್ರಶ್ನೆಗಳತ್ತ ಗಮನ ಹರಿಯಿತು. ಸುಪ್ತಪ್ರಜ್ಞೆಯ ನಿಗೂಢಗಳ ಹಾಗೂ ಅನುಭವದ ಸಂಕೀರ್ಣತೆಯ ಅಭಿವ್ಯಕ್ತಿಗಾಗಿ ಸಂಕೇತ ಪ್ರತಿಮೆಗಳ ಬಳಕೆ ಹೆಚ್ಚಾಗಿ ಕೃತಿನಿಷ್ಠತೆ, ಬಿಗಿಯಾದ ಬಂಧ, ವ್ಯಂಜಕ ಭಾಷಾಶೈಲಿ ನವ್ಯಕತೆಯನ್ನು ಭಾವಗೀತೆಗೆ ಸಮೀಪ ಮಾಡಿದವು. ಅಷ್ಟರಮಟ್ಟಿಗೆ ನವ್ಯ ಸಂಪ್ರದಾಯ ಸಮಾಜ ಸಮ್ಮುಖತೆ, ಸಂವಹನ ಸೌಲಭ್ಯಗಳನ್ನು ಬಿಟ್ಟುಕೊಡುವಂತಾಯಿತು.

ನವ್ಯ ಸಂಪ್ರದಾಯದ ಆದ್ಯ ಪ್ರವರ್ತಕರಲ್ಲಿ ರಾಮಚಂದ್ರಶರ್ಮ, ಅನಂತಮೂರ್ತಿ, ಕೆ. ಸದಾಶಿವ ಮತ್ತು ರಾಜಲಕ್ಷ್ಮೀ ಎಸ್. ರಾವ್ ಅವರನ್ನು ಹೆಸರಿಸಬೇಕು. ಇವರನ್ನು ಶೀಘ್ರದಲ್ಲಿಯೇ ಕೂಡಿಕೊಂಡವರು ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ವೀಣಾ ಶಾಂತೇಶ್ವರ ಮತ್ತು ಈಚೆಗೆ ಜಯಂತ ಕಾಯ್ಕಿಣಿ, ವೈದೇಹಿ, ದಿವಾಕರ ಹಾಗೂ ನೇಮಿಚಂದ್ರರು.

ನವ್ಯ ಸಂಪ್ರದಾಯವನ್ನು ಹೆಚ್ಚು ಪ್ರಭಾವಶಾಲಿಯಾಗಿ ಬೆಳೆಸಿದವರು ಅನಂತಮೂರ್ತಿ. ಅವರ ಜಾಗತಿಕ ವೈಚಾರಿಕ ಪ್ರಜ್ಞೆ ಮತ್ತು ವಿವಿಧ ಕಥಾ ವಿನ್ಯಾಸಗಳು ಹಲವರಿಗೆ ಮಾದರಿಯಾದವು. ಸುಮಾರು ಅಷ್ಟೇ ಪ್ರಭಾವ ಬೀರಿದವರೆಂದರೆ, ಶರ್ಮರ ಸುಪ್ತಪ್ರಜ್ಞೆಯ ವ್ಯಾಪಾರವನ್ನು ಬಿಂಬಿಸುವ ನಾಟಕೀಯ ಕೃತಿಗಳು. ನವ್ಯಕಥೆಗಳಲ್ಲಿ ಸಾಮಾನ್ಯವಾಗಿ 'ಕಾಮ' ಜೀವನೋತ್ಕರ್ಷಕ್ಕೆ ಕಾರಣವಾದ ಬಂಧವಿಮೋಚಕ ಚೈತನ್ಯದಾಯಿಶಕ್ತಿಯಾಗಿ ಅಭಿವ್ಯಕ್ತಿಯಾಗುತ್ತದೆ. ಅನಂತಮೂರ್ತಿ-ಶರ್ಮರಲ್ಲಿ ಹೆಚ್ಚಾಗಿ ಸಾಂಕೇತಿಕವಾಗಿ ಕಂಡುಬರುವ ಈ ಮೌಲ್ಯ ದೇಸಾಯಿಯವರಲ್ಲಿ ವಾಸ್ತವದ ನೆಲೆಯಲ್ಲಿಯೇ ವ್ಯಕ್ತವಾಗುತ್ತದೆ. ಲಂಕೇಶರ ಕಥೆಗಳು ಸುಶಿಕ್ಷಿತ ಮಧ್ಯಮವರ್ಗದ ಜನರ ಆಂತರಿಕ ಕ್ಷುದ್ರತೆಯನ್ನು ಬಯಲಿಗೆಳೆಯುತ್ತದೆ. ಸಾವು ಮತ್ತು ಕಾಮ ಚಿತ್ತಾಲರ ಕಥೆಗಳನ್ನು ಕಾಡುತ್ತದೆ. ಈಚೆಗೆ ಅವರು ತುಳಿಯುತ್ತಿರುವುದು ಹೃದಯವುಳ್ಳ ಹಾದಿ. ಸ್ವತಂತ್ರ ಮನೋಧರ್ಮದ ಹೆಣ್ಣಿನ ನಿಸ್ಸಂಕೋಚ ಚಿತ್ರಗಳು ವೀಣಾ ಅವರ ಕೃತಿಗಳನ್ನು ವಿಶಿಷ್ಟಗೊಳಿಸಿದರೆ, ವೈದೇಹಿಯವರ ಈಚಿನ ಕಥೆಗಳು ವಿಕ್ಷಿಪ್ತ ಮನೋವೃತ್ತಿಗಳನ್ನು ಶೋಧಿಸತೊಡಗಿವೆ.

ನವ್ಯಕತೆಗಳ ಇತ್ತೀಚಿನ ಬೆಳವಣಿಗೆ ವೈಯಕ್ತಿಕ ಒತ್ತನ್ನು ಬಿಟ್ಟುಕೊಡದೆ ಹೆಚ್ಚು ಸಮಾಜ ಸಮ್ಮುಖವಾಗುತ್ತಿರುವುದು ಹಾಗೂ ಸಂವಹನ ಕ್ಲಿಷ್ಟತೆ ಕಡಿಮೆಯಾಗದಂತೆ ಬಂಧವನ್ನು ಆದಷ್ಟು ಸಡಿಲಗೊಳಿಸುತ್ತಿರುವುದು ಒಂದು ದೃಷ್ಟಿಯಲ್ಲಿ ಇದು ಸಹಜ ಬೆಳವಣಿಗೆಯಾದರೂ ಇನ್ನೊಂದು ದೃಷ್ಟಿಯಲ್ಲಿ ಎಪ್ಪತ್ತರ ದಶಕದಲ್ಲಿ ನವ್ಯತೆಯ ವಿರುದ್ಧ ನವ್ಯೋತ್ತರ ಲೇಖಕರಿಂದ ಎದ್ದ ಪ್ರತಿಭಟನೆಗೆ ಪ್ರತಿಕ್ರಿಯೆಯೂ ಆಗಿದೆ. ಇಂಥ ಪ್ರತಿಭಟನೆಯ ನೇತಾರರು ನವ್ಯರಾಗಿಯೇ ಆರಂಭಿಸಿದ ತೇಜಸ್ವಿಯವರು. ಆಧುನಿಕ ವಿಚಾರವಂತಿಕೆಯ ಅಗತ್ಯವನ್ನು ಹೇಳುತ್ತಲೇ ಅಧಿಕಾರಶಾಹಿಯ ಭೀಕರ ಸ್ವರೂಪವನ್ನು ಆಧುನಿಕತೆಯ ಪ್ರವೇಶದಿಂದ ಗ್ರಾಮೀಣ ಜೀವನದಲ್ಲಿ ಅನಿರೀಕ್ಷಿತವಾಗಿ ಆಗುವ ಅವಾಂತರವನ್ನು ಅವರು ನೇರ ನಿರೂಪಣೆಯ ಸರಳ ಶೈಲಿಯ ಕಥೆಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ.

ನಮ್ಮ ಮೊದಲ ದಲಿತ ಕಥೆಗಾರರು ದೇವನೂರ ಮಹಾದೇವರು. ಮೊಟ್ಟಮೊದಲ ಕಥೆಗಳಲ್ಲಿ ನವ್ಯಪ್ರಜ್ಞೆಯನ್ನು ಅಭಿವ್ಯಕ್ತಿಸಿದವರು ಮುಂದಿನ ಕಥೆಗಳಲ್ಲಿಯೂ ನವ್ಯ ವಿನ್ಯಾಸಗಳನ್ನು ಸಾಧಿಸಿದ್ದಾರೆ. ತಮ್ಮ ಕಡೆಯ ತಮ್ಮ ಜನದ ಪ್ರಾದೇಶಿಕ ಭಾಷೆಯನ್ನೇ ಅವರು ತಮ್ಮ ಅಭಿವ್ಯಕ್ತಿಗೆ ಹದಮಾಡಿಕೊಂಡಿರುವ ರೀತಿ ಅಚ್ಚರಿಪಡಿಸುವಂಥ ಸಾಧನೆ. ಅವರು ಶೋಷಣೆ ಎಂಬ ಶಬ್ದವನ್ನು ಉಚ್ಚರಿಸಿದೆಯೇ ವಸ್ತುನಿಷ್ಠ ವಾಸ್ತವಿಕ ಸಂಯೋಗದಿಂದ ನಿರುದ್ವಿಗ್ನ ಧ್ವನಿಯಲ್ಲಿ ದಲಿತರ ಶೋಷಿತ ಪರಿಸ್ಥಿತಿಯನ್ನು ದಟ್ಟ ವಿವರಗಳೊಂದಿಗೆ ಆತ್ಮೀಯವಾಗಿ ನಾಟಕೀಯವಾಗಿ ಕಣ್ಣಿಗೆ ಕಟ್ಟುವಂತೆ, ಹೃದಯ ಆರ್ದ್ರವಾಗುವಂತೆ ಚಿತ್ರಿಸುತ್ತಾರೆ.

ಬಂಡಾಯ – ದಲಿತ ಬರವಣಿಗೆ ಕಳೆದ ದಶಕದ ಕಥಾ ಕ್ಷೇತ್ರದ ಹೊಚ್ಚ ಹೊಸ ಬೆಳವಣಿಗೆ. ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್‌ವಾದಗಳು ಮುಪ್ಪುರಿಗೊಂಡು ಬೆಳೆಯುತ್ತಿರುವ ಈ ಚಳುವಳಿಯಲ್ಲಿ ಕೆಳಸ್ತರದ ಜಾತಿವರ್ಗಗಳ ಶೋಷಿತ ಜನರ ಪ್ರತಿಭಟನೆಯ ಧ್ವನಿ ಉಗ್ಗಡಿಸುತ್ತದೆ. ಇದರ ಮುಖ್ಯ ಕಥೆಗಾರರು ಬೆಸಗರಹಳ್ಳಿ ರಾಮಣ್ಣ, ಕಾಳೆಗೌಡ ನಾಗವಾರ, ಕುಂ.ವೀರಭದ್ರಪ್ಪ, ಬರಗೂರು ರಾಮಚಂದ್ರಪ್ಪ, ಸುಧಾಕರ, ಶಾಂತರಸ, ಚೆನ್ನಣ್ಣ ವಾಲೀಕಾರರು– ಮಾನವತೆಯನ್ನು ಕುಂಠಿಸುವ ವ್ಯವಸ್ಥೆಯ ವಿರುದ್ಧ ಬೆಸಗರಹಳ್ಳಿಯವರ ಕಥೆಗಳು ಸಿಡಿಯುತ್ತವೆ. ಅಂತರ್ಜಾತೀಯ ಪ್ರೇಮದಿಂದ ಸ್ಥಿತ್ಯಂತರದ ಸಾಧ್ಯತೆಯ ಭವಿಷ್ಯವನ್ನು ನಾಗವಾರರು ಕಾಣುತ್ತಾರೆ. ವೀರಭದ್ರಪ್ಪನವ ಪ್ರತಿಭಟನೆಯ ಪ್ರಚಂಡ ಶಕ್ತಿ ಒಮ್ಮೊಮ್ಮೆ ಪ್ರತಿಹಿಂಸೆಯವರೆಗೂ ಪ್ರಸರಿಸುತ್ತದೆ. ಇದೇ ದಿಕ್ಕಿನಲ್ಲಿ ಇನ್ನೊಂದು ಬೆಳವಣಿಗೆ ಎಂದರೆ ಮುಸ್ಲಿಂ ಸಮಾಜವನ್ನು ಮೊದಲ ಬಾರಿಗೆ ನಮ್ಮ ಕಣ್ಣೆದುರು ತರುವ ಮುಸ್ಲಿಂ ಕಥೆಗಾರ – ಕತೆಗಾರ್ತಿಯವರ ಉದಯ. ಬೋಳುವಾರು ಮಹಮ್ಮದ್ ಕುಂಞ, ಫಕೀರ ಮಹಮ್ಮದ ಕಟ್ಪಾಡಿ, ಅಬ್ದುಲ್ ರಶೀದ್, ಭಾನುಮುಷ್ತಾಕ್ ಮತ್ತು ಸಾರಾ ಅಬೂಬಕ್ಕರ್ ತಮ್ಮ ಸಮಾಜದಲ್ಲಿ ತಾವು ಕಂಡ ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಾರೆ. ಅಲ್ಲಿ ತಾವು ಕಂಡ ಮೌಢ್ಯವನ್ನು ಕುರಿತು ಎಚ್ಚರಿಸುತ್ತಾರೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯರು ಪಡುತ್ತಿರುವ ಸಂಕಷ್ಟಗಳು ವಿಶೇಷವಾಗಿ ಕತೆಗಾರ್ತಿಯರಲ್ಲಿ ಅಭಿವ್ಯಕ್ತಿ ಪಡೆಯುತ್ತದೆ.

ಇತ್ತೀಚಿಗೆ ಇನ್ನೂ ಮೊಳಕೆಯೊಡೆಯುತ್ತಿರುವ ಹೊಸ ಬೆಳವಣಿಗೆ ಫ್ಯಾಂಟಸಿ ತಂತ್ರದ ಬಳಕೆ. ಇದನ್ನು ಪ್ರಚುರಗೊಳಿಸುತ್ತಿರುವವರಲ್ಲಿ ಎಂ.ಎಸ್.ಕೆ. ಪ್ರಭು ಪ್ರಮುಖರು. ನವೋದಯ, ಪ್ರಗತಿಶೀಲ, ನವ್ಯ ಬಂಡಾಯ – ದಲಿತ ಈ ನಾಲ್ಕು ಆಂದೋಲನಗಳು ಕನ್ನಡ ಸಣ್ಣಕಥೆ ಕಾಲಕ್ಕನುಗುಣವಾಗಿ ಬದಲಿಸುತ್ತಾ ವಿವರಿಸುತ್ತಾ ಶ್ರೀಮಂತವಾಗಿ ಬೆಳೆಯುತ್ತಾ ಬರುತ್ತಿರುವುದಕ್ಕೆ ಸಾಕ್ಷಿಗಲ್ಲುಗಳಾಗಿವೆ.

ಅಧ್ಯಾಯ – 3

ಕನ್ನಡದ ಮಹಿಳಾ ಕತೆಗಾರ್ತಿಯರು : ಒಂದು ಪಕ್ಷಿನೋಟ

ಕನ್ನಡ ಸಾಹಿತ್ಯದುದ್ದಕ್ಕೂ ಕಣ್ಣು ಹಾಯಿಸಿದಾಗ ಹನ್ನೆರಡನೆಯ ಶತಮಾನದಷ್ಟು ಹಿಂದಿನಿಂದಲೇ ಮಹಿಳೆಯರ ಸಾಹಿತ್ಯ ರಚನೆಯಲ್ಲಿ ತೊಡಗಿದ್ದದು ಕಂಡುಬರುತ್ತದೆ. ಇತ್ತೀಚಿನ ವರ್ಷಗಳಲ್ಲಿಯೂ ಮಹಿಳಾ ಸಾಹಿತ್ಯ ನಿಂತ ನೀರಾಗಿಲ್ಲ. ಅದು ಸಮೃದ್ಧವೂ, ವೈವಿಧ್ಯಪೂರ್ಣವೂ ಆಗಿದೆಯಲ್ಲದೆ ಪರಿಮಿತಿಗಳ ಕೊರತೆಯನ್ನು ದಾಟಿ ಬೆಳೆದಿದೆ. ಈ ಸಾಧನೆಯ ಹಿಂದೆ ನಿರಂತರ ಪರಿಶ್ರಮವಿದೆ.

ಕನ್ನಡ ಸಾಹಿತ್ಯಕ್ಕೆ 1500 ವರ್ಷಗಳಿಗೂ ಮೀರಿದ ಅವಿಚ್ಛಿನ್ನ ಇತಿಹಾಸವಿದೆ. ಕನ್ನಡ ಸಾಹಿತ್ಯ ಪರಂಪರೆಯ ಸಮೃದ್ಧಿಗೆ ಲೇಖಕಿಯರ ಕೊಡುಗೆಯೂ ಇದೆ. ಭಾರತೀಯ ಪರಂಪರೆಯಲ್ಲಿ ಕಥೆಗೆ ನಾಟಕಕ್ಕಿಂತ ದೈವೀ ನೆಲೆಯನ್ನು ಕಲ್ಪಿಸಲಾಗಿದೆ. ಹೀಗಿದ್ದರೂ ಒಂದು ಗಂಭೀರ ಸಾಹಿತ್ಯ ಪ್ರಕಾರವೆಂದು ಕಥೆ ಕನ್ನಡದಲ್ಲಿ ನೆಲೆಗೊಂಡಿದ್ದು ಇಪ್ಪತ್ತನೆಯ ಶತಮಾನದಲ್ಲಿಯೇ ಎನ್ನುವುದು ನಿರ್ವಿವಾದ ಸಂಗತಿಯಾಗಿದೆ.

'ಹೆಣ್ಣಿನ ಒಡಲು ಕಥೆಗಳ ಕಡಲು' ಎನ್ನುವ ಉಕ್ತಿಯೊಂದಿದೆ. ಸ್ವಭಾವತಃ ಸಹಜವಾಗಿ ಮಹಿಳೆ ಮಕ್ಕಳಿಗೆ ಕಥೆ ಹೇಳುವುನ್ನೂ ರೂಢಿಸಿಕೊಂಡು ಬಂದಿದ್ದಾಳೆ. ಹೀಗಾಗಿ ಹೊಸಗನ್ನಡ ಸಣ್ಣ ಕಥೆಯ ಪ್ರಕಾರ ಬಹುಬೇಗನೆ ಅವಳನ್ನು ಆಕರ್ಷಿಸಿತು. ಮಹಿಳೆಯಲ್ಲಿ ಸೀಮಿತವಾಗಿ ಹೇಳುವುದಾದರೆ ಸಣ್ಣಕಥೆಯು ಪ್ರಾರಂಭವಾದದ್ದು ಈ ಶತಮಾನದ ಮೂರನೆಯ ದಶಕದಲ್ಲಿ. ಉತ್ತರ ಕರ್ನಾಟಕದಲ್ಲಿ ಶ್ಯಾಮಲಾದೇವಿ ಬೆಳಗಾಂಕರ, ಕೊಡಗಿನ ಗೌರಮ್ಮ ಹಾಗೂ ದಕ್ಷಿಣ ಕನ್ನಡದ ಸರಸ್ವತಿಬಾಯಿ ರಾಜವಾಡೆ ಇವರನ್ನು ಮಹಿಳಾ ಸಣ್ಣಕಥೆಯ ಆದ್ಯರು ಎಂದು ಗುರುತಿಸಲಾಗುತ್ತದೆ.

ಕಳೆದ ಆರು ದಶಕಗಳಲ್ಲಿ ಮಹಿಳಾ ಕಥಾ ಸಾಹಿತ್ಯಕ್ಕೂ ಒಂದು ಪರಂಪರೆ ನಿರ್ಮಿತವಾಗಿದೆ. ಈ ಕಥಾ ಸಾಹಿತ್ಯದ ಅವಲೋಕನವನ್ನು ಹೀಗೆ ವಿಭಾಗಿಸಿಕೊಳ್ಳಬಹುದು:

1900–1950ರ ಅವಧಿಯಲ್ಲಿನ ಲೇಖಕಿಯರು ಮೊದಲ ತಲೆಮಾರಿನವರು ಎಂದು ಗುರುತಿಸಿಕೊಂಡರೆ, 1950–70ರ ಅವಧಿಯಲ್ಲಿ ಬರೆಯುತ್ತಿದ್ದ ಲೇಖಕಿಯರು ಎರಡನೇ ತಲೆಮಾರಿನವರು ಎಂದು ಗುರುತಿಸಿಕೊಳ್ಳಬಹುದು. ಇನ್ನು 1970ರಿಂದ ಇತ್ತೀಚಿನ ಲೇಖಕಿಯರನ್ನು ಮೂರನೇ ತಲೆಮಾರಿನವರೆಂದು ಸ್ಥೂಲವಾಗಿ ಗುರುತಿಸಿಕೊಳ್ಳಬಹುದು.

ಮೊದಲ ತಲೆಮಾರಿನ ಸ್ವಾತಂತ್ರ್ಯಪೂರ್ವದ ಬರಹಗಾರ್ತಿಯರಲ್ಲಿ ಅದರಲ್ಲೂ ಕತೆಗಾರ್ತಿಯರಲ್ಲಿ ದಿ.ಕೊಡಗಿನ ಗೌರಮ್ಮನವರ ಹೆಸರು ಎದ್ದು ಕಾಣುವಂಥದ್ದು. 1921ರಿಂದಲೇ

ಗೌರಮ್ಮನವರು ಕಥೆಗಳನ್ನು ಬರೆಯಲು ಪ್ರಾರಂಭಿಸಿದರು. 'ಕಂಬನಿ', 'ಚಿಗುರು' ಇವು ಅವರ ಕಥಾ ಸಂಕಲನಗಳು. ಗೌರಮ್ಮನವರು ತಮ್ಮ ಕಥೆಗಳಲ್ಲಿ ದಾಂಪತ್ಯ ಜೀವನದ ಸುಖ-ದುಃಖಗಳನ್ನು ಸ್ತ್ರೀಯ ಕೋಮಲವಾದ ಭಾವನೆಗಳನ್ನು ನವಿರಾಗಿ, ಸರಳವಾಗಿ ಚಿಡಿಸಿದ್ದಾರೆ. ಇವರು ಒಳ್ಳೆಯ ಕತೆಗಾರ್ತಿ ಎಂದು ತಮ್ಮ ಬರವಣಿಗೆಯ ಪ್ರಾರಂಭದ ಹಂತದಲ್ಲಿಯೇ ಹೆಸರು ಗಳಿಸಿದ್ದರು.

ಗೌರಮ್ಮನವರ ನಂತರದಲ್ಲಿ ಕಂಡುಬರುವ ಶ್ರೀಮತಿ ಜಯಲಕ್ಷ್ಮೀ ಶ್ರೀನಿವಾಸನ್ ಅವರ 'ಮೊಗ್ಗು' ಎಂದ ಕಥಾ ಸಂಕಲನವನ್ನು ಸರಸ್ವತಿಬಾಯಿ ರಾಜವಾಡೆಯವರ 'ಆಹುತಿ ಇತ್ಯಾದಿ ಕತೆಗಳು', 'ಕದಂಬ', 'ಪ್ರೇಮವಿವಾಹ' ಎಂಬಂಥ ಕಥಾ ಸಂಕಲನಗಳನ್ನು ಶಾಂತಾದೇವಿ ಮಾಳವಾಡರವರ 'ಮೊಗ್ಗೆಯ ಮಾಲೆ' ಕಥಾ ಸಂಕಲನವನ್ನು ಹಾಗೆಯೇ ಮತ್ತೊಬ್ಬ ಲೇಖಕಿ ವಾಣಿಯವರ 'ಕಸ್ತೂರಿ' ಎಂಬ ಕಥಾ ಸಂಕಲನಗಳನ್ನು ಇನ್ನೂ ಅನೇಕ ಲೇಖಕಿಯರ ಕಥೆಗಳನ್ನು ನಾವು ಮೊದಲನೆಯ ತಲೆಮಾರಿನಲ್ಲಿ ಗುರುತಿಸಬಹುದಾಗಿದೆ.

ಹೀಗೆ ಮೊದಲನೆಯ ಪೀಳಿಗೆಯಲ್ಲಿ ಪ್ರಮುಖರಾಗಿ ಎದ್ದು ಕಾಣುವ ಕೊಡಗಿನ ಗೌರಮ್ಮ, ಜಯಲಕ್ಷ್ಮೀ, ಸರಸ್ವತಿಬಾಯಿ ರಾಜವಾಡೆ, ಶ್ಯಾಮಲದೇವಿ ಮಾಳವಾಡ ಮೊದಲಾದ ಲೇಖಕಿಯರು ಎದುರಿಸಿದ ಮುಖ್ಯ ಪ್ರಶ್ನೆಯ ಸ್ವರೂಪ ಸಾಮಾಜಿಕವಾದದ್ದು. ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀ ಒಬ್ಬ ವ್ಯಕ್ತಿಯಾಗಿ ಗುರುತಿಸಲ್ಪಡದೆ, ಪುಟ್ಟ ವಿಧವೆ, ವೇಶ್ಯೆ ಹೀಗೆ ಪುರುಷ ಸಂಬಂಧದಲ್ಲಿಯೇ ಗುರುತಿಸಲ್ಪಟ್ಟಿದ್ದರಿಂದ ಅವಳಿಗೆ ಸ್ವತಂತ್ರವಾದ ಅಸ್ತಿತ್ವವಾಗಲಿ, ಅದರ ಪರಿಕಲ್ಪನೆಯಾಗಲಿ ಇರಲಿಲ್ಲ. ಇವರ ಕಥೆಗಳಲ್ಲಿ ಬರುವ ಸ್ತ್ರೀ ಪ್ರತಿಮೆಗಳೆಲ್ಲ ಈ ವ್ಯವಸ್ಥೆಯ ಸಂಕೇತಗಳಾಗಿ ಬರುತ್ತವೆ. ಈ ಸಂಕೇತಗಳನ್ನು ಭಾಷೆಯಲ್ಲಿ ಸೃಷ್ಟಿಸುವ ಕೃತಿಯ ಸ್ವರೂಪವೇ ಮೂಲತಃ ಪ್ರತಿಭಟನಾತ್ಮಕವಾದದ್ದು. ಇವು ಸಮಾಜದಲ್ಲಿ ಕಂಡು, ಅನುಭವಿಸಿದ ಚಿತ್ರಗಳನ್ನು ಈ ಲೇಖಕಿಯರು ಕೊಡುತ್ತಿದ್ದದ್ದರಿಂದ ವಾಸ್ತವ ಮಾರ್ಗದ ಅನುಕರಣೆ ಅವರಿಗೆ ಅವಶ್ಯಕವೆನಿಸಿತು. ಮಾಧ್ಯಮಗಳ ಸಾಧ್ಯತೆಗಳ ಬಗ್ಗೆ ಅವರು ವಿಶೇಷತೆ ಸಾಧಿಸಿದ ಉದಾಹರಣೆಗಳು ಸಹ ಕಡಿಮೆ ಎಂದೇ ಹೇಳಬಹುದು.

ಎರಡನೆಯ ತಲೆಮಾರಿನವರು ಎಂದು ಗುರುತಿಸಿಕೊಳ್ಳುವ ಲೇಖಕಿಯರು ಆ ಅವಧಿಗಾಗಲೇ ಆಧುನಿಕ ಶಿಕ್ಷಣ ಪಡೆದ ಮಹಿಳೆಯರಾಗಿದ್ದು, ಆ ಮೂಲಕ ಬದುಕಿನಲ್ಲಿ ಉಂಟಾದ ಸಂಕೀರ್ಣತೆಯ ಕಡೆಗೆ ಗಮನ ಹರಿಸಿದ್ದರು. ಈ ಪೀಳಿಗೆಯ ಲೇಖಕಿಯರಲ್ಲಿ ತ್ರಿವೇಣಿ ಅತ್ಯಂತ ಪ್ರಮುಖರು. 'ಹೆಂಡತಿಯ ಹೆಸರು', 'ಸಮಸ್ಯೆಯ ಮಗು' ಇವರ ಮಹತ್ವದ ಕಥಾ ಸಂಕಲನಗಳಾಗಿವೆ. ಮತ್ತೊಬ್ಬ ಪ್ರಮುಖ ಲೇಖಕಿಯೆಂದರೆ ಅನುಪಮಾ ನಿರಂಜನ. ಇವರ ಪ್ರಸಿದ್ಧ ಕಥಾಸಂಕಲನಗಳೆಂದರೆ 'ಕಣ್ಮಣಿ', 'ರೂವಾರಿಯ ಲಕ್ಷ್ಮಿ', 'ನೀರಿಗೆನ್ನೈದಿಲೆ ಶೃಂಗಾರ', 'ಏಳು ಸುತ್ತಿನ ಮಲ್ಲಿಗೆ' ಇತ್ಯಾದಿ. ಗೀತಾ ಕುಲಕರ್ಣಿ, ಆರಾಂಬ್ಯ ಪಟ್ಟಾಭಿ ಮೊದಲಾದ ಕತೆಗಾರ್ತಿಯರನ್ನು ಈ ತಲೆಮಾರಿನಲ್ಲಿಯೇ ಕಾಣಬಹುದಾಗಿದೆ.

ಈ ಪೀಳಿಗೆಯಲ್ಲಿ ಕಂಡುಬರುವ ಮಹಿಳೆಯರಲ್ಲೂ ಕೂಡ ಕ್ರಾಂತಿಕಾರಕ ಬದಲಾವಣೆಗಳು ಇರದೇ ಹೋದರು ಅವರಲ್ಲಿ ತಮ್ಮ ಅರಿವು ಜಾಗೃತವಾಗಿದ್ದುದರಿಂದ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತುವುದು, ಪ್ರತಿಭಟನೆಯನ್ನು ಕೃತಿಗಿಳಿಸುವುದು ಅವಶ್ಯವೆನ್ನಿಸಿತು. ಈ ಕಾಲಘಟ್ಟದ ಪ್ರಮುಖ ಲೇಖಕಿಯರಾದ ಅನುಪಮಾ ನಿರಂಜನ, ತ್ರಿವೇಣಿಯವರಂತಹಾ ಕತೆಗಾರ್ತಿಯರಲ್ಲ ಈ ಬೆಳವಣಿಗೆಯನ್ನು ಕಾಣಬಹುದು. ವೈಜ್ಞಾನಿಕ ತಿಳಿವು ಹಾಗೂ ಮನೋವೈಜ್ಞಾನಿಕ ಒಳನೋಟಗಳನ್ನು ಈ ಬೆಳವಣಿಗೆಯಲ್ಲಿ ಕಾಣಬಹುದು.

ವೈಜ್ಞಾನಿಕ ತಿಳಿವು ಹಾಗೂ ಮನೋವೈಜ್ಞಾನಿಕ ಒಳನೋಟಗಳನ್ನು ಹೊಂದಿದ ಈ ಲೇಖಕಿಯರು ಸಣ್ಣಕಥೆಯ ಮಾಧ್ಯಮಕ್ಕೆ ಒಳ–ಆಳ ವಿಸ್ತಾರಗಳನ್ನು ಒದಗಿಸಿದರು. ಸ್ತ್ರೀಯರು ಕೇವಲ ಬಲಿಪಶುವನ್ನಾಗಿ ಕಾಣದೆ ಅವಳಲ್ಲಿ ಕರ್ತವ್ಯಶಕ್ತಿಯನ್ನು ಗುರುತಿಸುವ ಮೂಲಕ ಅವಳ ಹೊಸ ಪ್ರತಿಮೆಗಳನ್ನು ಸೃಷ್ಟಿಸುವಲ್ಲಿಯೂ ಅವರು ಶಕ್ತರಾದರು. ಅವರ ಕಥೆಗಳಲ್ಲಿ ಆಶಾವಾದವೂ ಸೀಮಿತವಾಗಿ ಕಾಣಿಸಿಕೊಂಡಿತು.

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಬರೆಯತೊಡಗಿದ ಲೇಖಕಿಯರು ಬಲವಾದ ತಾತ್ವಿಕ ಆಸೆಗಳನ್ನು ಬೆಳೆಸಿಕೊಂಡು ಬದುಕಿನ ಸಂಕೀರ್ಣತೆಯನ್ನು ತಮ್ಮ ಕಥೆಗಳಲ್ಲಿ ಮೂಡಿಸುವಲ್ಲಿ ಆಸಕ್ತಿ ತೋರಿಸಿದರು. ಈ ತಲೆಮಾರಿನ ಲೇಖಕಿಯರಲ್ಲಿ ಪ್ರಮುಖರಾದ ರಾಜಲಕ್ಷ್ಮಿ ಎನ್.ರಾವ್ ಹಾಗೂ ವೀಣಾಶಾಂತೇಶ್ವರರ ಕಥೆಗಳಲ್ಲಿ ನಾವು ನೋಡುವ ಅಂತರ್ಮುಖತೆ, ಆತ್ಮಪ್ರಜ್ಞೆ, ದ್ವಂದ್ವಗಳ ಅರಿವು ನಮ್ಮ ಮನೋಧರ್ಮದ ಆವಿಷ್ಕಾರಗಳನ್ನು ಪ್ರತಿನಿಧಿಸುತ್ತದೆ. ಕತೆಗಳನ್ನು ಕೇವಲ ಮನೋರಂಜನೆಗಾಗಲಿ, ಸಾಮಾಜಿಕ ಜಾಗೃತಿಗಾಗಲಿ ಬಳಸದೆ ಇವರು ಅದನ್ನು ಸತ್ಯದ ಶೋಧದ ಗಂಭೀರ ಪ್ರಯತ್ನಗಳಲ್ಲಿ ತೊಡಗಿಸಿದವರು ಹಾಗೂ ಅದನ್ನು ಒಂದು ಪ್ರಬುದ್ಧ ಸಾಹಿತ್ಯ ಮಾಧ್ಯಮವನ್ನಾಗಿ ಬಳಸಿಕೊಂಡರು.

1070ರ ನಂತರ ಬರೆಯತೊಡಗಿದ ಲೇಖಕಿಯರು ಒಂದಿಲ್ಲೊಂದು ರೀತಿಯಿಂದ ಜಾಗತಿಕ ಸ್ವರೂಪದ ಸ್ತ್ರೀ ಮುಕ್ತಿ ಚಳುವಳಿಗಳಿಂದ ಪ್ರಭಾವಿತರಾದವರು. ಇವರು ಬರೆಯುತ್ತಿರುವ ವೇಳೆಗೆ ಸಮಾಜದಲ್ಲಿಯೂ ಸಾಕಷ್ಟು ಸ್ಥಿತ್ಯಂತರಗಳಿದ್ದವು. ಮಹಿಳೆಗೆ ಇಂದು ಎಲ್ಲ ಕಾರ್ಯಕ್ಷೇತ್ರಗಳೂ ಮುಕ್ತವಾಗಿವೆಯಲ್ಲದೆ, ಶಿಕ್ಷಣದ ಎಲ್ಲ ಪ್ರಕಾರಗಳೂ ಲಭ್ಯವಿವೆ. ಹೀಗಾಗಿ ಅವಳ ಅನುಭವ ಹಿಂದೆ ಎಂದೂ ಇಲ್ಲದ ವ್ಯಾಪ್ತಿ ವೈವಿಧ್ಯಗಳನ್ನು ಹೊಂದಿದೆ. ಅದರ ಜೊತೆಗೆ ಸಮಾನತೆ, ಸ್ವಾತಂತ್ರ್ಯಗಳು ಹೊಸ ಸಮಸ್ಯೆಗಳಿಗೆ ಎಡೆಮಾಡಿಕೊಟ್ಟಿವೆ.

ಗಂಡು–ಹೆಣ್ಣಿನ ಸಂಬಂಧಗಳಲ್ಲಿಯೂ ಬಿಕ್ಕಟ್ಟು ತಲೆದೋರಿದೆ. ಪುರುಷ ಕೇಂದ್ರೀಯ ವ್ಯವಸ್ಥೆಯ ಅಂಗಗಳಾದ ಅವಿಭಕ್ತ ಕುಟುಂಬ ಹಾಗೂ ವಿವಾಹಗಳಿಂದ ಸಂಸ್ಥೆಗಳು ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಆದರೆ ಸಾಮಾಜಿಕ ಧೋರಣೆಗಳಲ್ಲಿ ಬದಲಾವಣೆಯಾಗಿದ್ದರೂ ಮನೋಧರ್ಮಗಳಲ್ಲಿ ಸಾಂಪ್ರದಾಯಿಕ ಜಾಡ್ಯ ಇನ್ನೂ ಉಳಿದುಕೊಂಡಿರುವುದರಿಂದ ಘರ್ಷಣೆಗಳು ನಡೆಯುತ್ತಲೇ ಇವೆ. ವೈದೇಹಿ, ಸಾರಾ ಅಬೂಬಕ್ಕರ್, ಗೀತಾ ನಾಗಭೂಷಣ,

ದೇಸಾಯಿ. ಬಿ.ಟಿ.ಲಲಿತಾನಾಯಕ್, ಭಾನು ಮುಷ್ತಾಕ್, ನೇಮಿಚಂದ್ರರಂತಹಾ ಹೊಸ ತಲೆಮಾರಿನ ಲೇಖಕಿಯರಿಗೆ ತಮ್ಮ ಪರಿಸರದ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಸ್ವರೂಪದ ಅರಿವು ಇರುವುದರಿಂದ ಅವರು ಬರೆಯುತ್ತಿರುವ ಕತೆಗಳು ಮೊದಲಿನವರ ಕಥೆಗಳಿಗಿಂತ ಭಿನ್ನವಾಗಿವೆ. ಈ ಕಾಲದಲ್ಲಿ ಸಾಂಪ್ರದಾಯಿಕ ಕಥನ ಕ್ರಮಕ್ಕಿಂತ ಭಿನ್ನವಾಗಿ ಸಂಕೇತ ಪ್ರತಿಮೆಗಳನ್ನು ಲೇಖಕಿಯರು ದುಡಿಸಿಕೊಂಡಿದ್ದಾರೆ. ಹೆಣ್ಣಿನ ಅಗೋಚರ ಲೋಕವು ಕಥೆಗಳಲ್ಲಿ ತೆರೆದುಕೊಂಡಿದೆ, ಕುಟುಂಬವೇ ಅಂತಿಮವೆಂದು ಭಾವಿಸಿದ್ದ ನಿಲುವು ಹೋಗಿ ಹೆಣ್ಣಿನ ವ್ಯಕ್ತಿತ್ವದ ಹುಡುಕಾಟದತ್ತ ಸಾಗಿದೆ, ಆಯಾ ಸಮಾಜಗಳ ನಂಬಿಕೆ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ಆಗುವ ಶೋಷಣೆಗಳನ್ನು ಬಯಲಿಗೆಳೆದು, ಪ್ರತಿಭಟಿಸುವ ಗುಣ ಕಾಣಿಸುತ್ತದೆ, ಕುಟುಂಬದೊಳಗಿನ ಹೆಣ್ಣಿನ ನೋವು ನಲಿವುಗಳ ಚಿತ್ರಣಗಳೊಂದಿಗೆ ಯಜಮಾನ ಸಂಸ್ಕೃತಿಯ ದೋಷಗಳು, ಉದ್ಯೋಗಸ್ಥ ಹೆಣ್ಣಿನ ಸ್ಥಿತಿ–ಗತಿ ಮುಂತಾದವು ಕಥೆಯ ವಸ್ತುಗಳಾಗಿವೆ.

ಪೋಷಕ ವಿಮರ್ಶೆಯ ಅಭಾವ ಮಹಿಳಾ ಸಾಹಿತ್ಯದ ಆರೋಗ್ಯಕರ ಬೆಳವಣಿಗೆಗೆ ಮಾರಕವಾಗಿದೆ ಎಂಬ ಮಾತೊಂದಿದೆ. ಮಹಿಳೆಯರು ಬರೆದ ಕಥೆಗಳು ಗಂಭೀರವಾದ ವಿಮರ್ಶೆಗೆ ಒಳಗಾಗಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕು. ಆದರೆ ಮೊದಲಿನಿಂದಲೂ ಉದಯೋನ್ಮುಖ ಕತೆಗಾರ್ತಿಯರಿಗೆ ಹಿರಿಯ ಸಾಹಿತಿಗಳಿಂದ ಪ್ರೋತ್ಸಾಹ ಹಾಗೂ ತಕ್ಕಮಟ್ಟಿನ ಮಾರ್ಗದರ್ಶನ ದೊರೆಯುತ್ತಲೇ ಬಂದಿದೆ ಎನ್ನುವ ಮಾತು ಅಷ್ಟೇ ನಿಜವಾದದ್ದು. ಒಂದೆರಡು ಉದಾಹರಣೆಗಳಿಂದ ಈ ಮಾತನ್ನು ಕೆಳಗಿನಂತೆ ಸ್ಪಷ್ಟಪಡಿಸಬಹುದು:

ಮೊಟ್ಟಮೊದಲ ಮಹಿಳಾ ಕಥಾ ಸಂಗ್ರಹ 'ರಂಗವಲ್ಲಿ'ಗೆ ಬಂದ ಪ್ರತಿಕ್ರಿಯೆ ಗೌರಮ್ಮ ಅವರ ನಿರಾಶೆಗೆ ಕಾರಣವಾಗಿತ್ತು. ಇದು ಹೆಣ್ಣುಮಕ್ಕಳ ಕೃತಿ ಎಂಬ ಪೊಳ್ಳು ಸಹಾನುಭೂತಿಯ ಹೊರೆಯನ್ನು ನಾವೆಷ್ಟು ದಿನ ಹೊತ್ತಿರಬೇಕು? ಇದರಿಂದ ಗಂಡಸರು ನಮ್ಮ ಸಾಹಿತ್ಯವನ್ನು ತೃಪ್ತಿದಾಯಕವಾಗಿ ಒಪ್ಪಿದಂತಾಯಿತೆ? ಅವರು ನಮ್ಮ ಸಾಹಿತ್ಯವನ್ನು ಗಂಡಸರು ಬರೆಯುವ ಸಾಹಿತ್ಯವನ್ನು ನೋಡುವ ದೃಷ್ಟಿಯಲ್ಲಿ ಒಮ್ಮೆ ನೋಡಲಿ, ಇಲ್ಲ ನೋಡಲಾರರು ಎಂಬ ತಮ್ಮ ಅಭಿಪ್ರಾಯವನ್ನು ಬಿಚ್ಚು ಮನಸ್ಸಿನಿಂದ ಹೇಳಿಕೊಂಡಿದ್ದಾರೆ. ನಿರ್ಭಾಗ್ಯ 'ರಂಗವಲ್ಲಿ'ಯ ಅದೃಷ್ಟಕ್ಕೆ ಒಂದು ಸರಿಯಾದ ವಿಮರ್ಶೆ ಬರೆಯುವ ಪುಣ್ಯಾತ್ಮರು ಅವರ ಪಾಲಿಗೆ ಇಲ್ಲವಾದರು. ದುರ್ದೈವದಿಂದ ಅದರ ಪ್ರಥಮ ಕಥಾಸಂಕಲನ 'ಕಂಬನಿ' ಹೊರಬರುವ ಮೊದಲೇ ಅವರು ತೀರಿಹೋದುದರಿಂದ ಈ ಪುಸ್ತಕಕ್ಕೆ ದ.ರಾ.ಬೇಂದ್ರೆಯವರು ಬರೆದ ಉತ್ಕೃಷ್ಟ ಮುನ್ನುಡಿಯನ್ನು ನೋಡುವ ಸಂತೋಷದಿಂದ ಅವರು ವಂಚಿತರಾದರು.

ಗೌರಮ್ಮ ಹಾಗೂ ಶ್ಯಾಮಲಾದೇವಿಯರ ನಂತರದ ಪೀಳಿಗೆಯ ಮಂಚೂಣಿಯಲ್ಲಿದ್ದ ಅನುಪಮಾ ಅವರಿಗೂ ಇದೇ ರೀತಿಯ ವಿಮರ್ಶಾತ್ಮಕ ಪ್ರೋತ್ಸಾಹ ಚದುರಂಗರಿಂದ ದೊರೆಯಿತು.

ಈ ರೀತಿಯಾಗಿ ಕಾಲಕಾಲಕ್ಕೆ ಮಹಿಳಾ ಕಥಾ ಸಾಹಿತ್ಯಕ್ಕೆ ಹೊಸ ತಿರುವು ದೊರೆತು

ಇತ್ತೀಚಿನ ದಶಕಗಳಲ್ಲಿ ಅವು ಉನ್ನತ ಮಟ್ಟಕ್ಕೇರಿದೆ ಎಂದು ಗುರುತಿಸಬಹುದಾಗಿದೆ.

ಹೀಗೆ ಆರಂಭಕಾಲದ ಕೊಡಗಿನ ಗೌರಮ್ಮನವರಿಂದ ಇಂದಿನ ಯುವ ಪೀಳಿಗೆಯ ಬರಹಗಾರ್ತಿಯರಾದ ನೇಮಿಚಂದ್ರರವರಿಗೆ ಅನೇಕ ಮಹಿಳೆಯರು ವೈವಿಧ್ಯಮಯವಾದ ವಸ್ತು, ವಿಷಯ ಸಂಗತಿಗಳನ್ನಿಟ್ಟುಕೊಂಡು ಕಥೆ ಬರೆದಿದ್ದಾರೆ. ನವೋದಯದಿಂದ ಪ್ರಾರಂಭಿಸಿ ಇಂದಿನ ದಲಿತ-ಬಂಡಾಯದವರೆಗೂ ಸಾಗಿಬಂದಿದ್ದಾರೆ. ಒಟ್ಟಿನಲ್ಲಿ ಇಂದು ಮಹಿಳಾ ಕಥಾಸಾಹಿತ್ಯ ಎಲ್ಲ ವರ್ಗದ ಮಹಿಳೆಯರನ್ನು ಒಳಗೊಂಡ ಗಂಭೀರವಾದ ಕಲಾಮಾಧ್ಯಮವಾಗಿ ರೂಪುಗೊಂಡಿದೆ.



ಅಧ್ಯಾಯ – 4

ಸ್ತ್ರೀ ಸಂವೇದನೆ: ಸಂವಹನ

'ಪ್ರಪಂಚದ ಮಹಾಯುದ್ಧಗಳಂತೆ ಹೆಣ್ಣಿನ ಮನದ ಪುಟ್ಟ ಆಸ್ಫೋಟವೂ ಮುಖ್ಯ.'

'ಲಿಂಗ ಅಸಮಾನತೆ–ಜ್ವಲಂತ ಸಾಮಾಜಿಕ ಸಮಸ್ಯೆ. ಸಂಸ್ಕೃತಿ ವಿಘಟನೆಯ ದುರಂತ. ನಾಗರಿಕತೆಯ ಸಂದರ್ಭದಲ್ಲಿ ಸ್ತ್ರೀ ಸಬಲೀಕರಣದ ಮಾತನ್ನಾಡುತ್ತಿರುವುದು ವೈಚಾರಿಕತೆಯ ಸೋಗು' ಆಗಿದೆ.

ಪುರಾಣದಿಂದ ಚರಿತ್ರೆಯವರೆಗೆ, ಚರಿತ್ರೆಯಿಂದ ಪ್ರಸ್ತುತದೆಡೆಗೆ ಲಿಂಗ ತಾರತಮ್ಯ ಹೆಚ್ಚಾಗಿದೆಯೇ ಹೊರತು ಅದರ ಸಿಕ್ಕುಗಳನ್ನು ಬಿಡಿಸಿಕೊಳ್ಳಲಾಗಿಲ್ಲ. ಅನಾದಿಯಿಂದಲೂ ಸ್ತ್ರೀಯನ್ನು ಶರಣಾಗತ ಸ್ಥಿತಿಯಲ್ಲಿರಿಸಿದೆ. ಪುರಾಣ ಕಾಲದಿಂದಲೂ ಯುದ್ಧ, ಕ್ರಾಂತಿ, ನಾಗರಿಕತೆ, ಜಾಗತೀಕರಣ ಎಲ್ಲ ಸಂದರ್ಭದಲ್ಲೂ ಪುರುಷ ಪ್ರಧಾನ ಸಮಾಜ ಸ್ತ್ರೀಯನ್ನು ಬಳಸಿಕೊಂಡಿದೆ ಮತ್ತು ಕಡೆಗಣಿಸಿದೆ. ಪುರುಷ ಯಜಮಾನಿಕೆಯೇ ಪುರಾಣ ಚರಿತ್ರೆಗಳಲ್ಲಿ ತುಂಬಿಹೋಗಿದೆ. ಸೀತೆ ದ್ರೌಪದಿಯ ಅವಮಾನ ಸಂಕಟಗಳನ್ನು ಚಿತ್ರಿಸಿರುವ ಮಹಾಕವಿಗಳ ಮಹಾ ಗ್ರಂಥಗಳಲ್ಲಿಯೂ ಪುರುಷ ಪ್ರಧಾನ ಪ್ರಾಧಾನ್ಯತೆಯೇ ಅಂತಿಮತೆ ಪಡೆದಿದೆ. ಹೆಣ್ಣನ್ನು ಚಿತ್ರಿಸಿರುವುದೂ ಗಂಡಿನ ಭಾಷೆ ಮತ್ತು ದೃಷ್ಟಿಯಲ್ಲಿಯೇ. ಸ್ತ್ರೀ ಕುಲಕ್ಕೆ ಸಂಕಟಗಳು ಅನಿವಾರ್ಯ ಎಂಬಂತೆಯೇ ಪುರಾಣ ಕತೆಗಳು, ಚರಿತ್ರೆಗಳು ತೀರ್ಮಾನಿಸಿಬಿಟ್ಟಿದೆ. ಯಯಾತಿ, ಶ್ರೀರಾಮ, ಕೃಷ್ಣ, ಗೌತಮ, ಹರಿಶ್ಚಂದ್ರ ಹೆಣ್ಣನ್ನು ಆತ್ಮನಾಶ ಮಾಡಿದರೂ ಲೋಕ ಮೆಚ್ಚುವ ಮಹಾತ್ಮರಾಗಿಯೇ ಉಳಿದಿದ್ದಾರೆ. ಪುರುಷನನ್ನು ಬಿಟ್ಟು ಸ್ತ್ರೀಗೆ ಉಳಿಗಾಲವಿಲ್ಲ ಎಂಬಂತೆ ಬಿಂಬಿಸಿ ಹೆಣ್ಣನ್ನು ತನ್ನ ಅಧೀನವಾಗಿಯೇ ಉಳಿಸಿದ್ದಾನೆ. ದುರಪತಿಯ ಛಲ, ಅಂಬೆಯ ಹಠ, ಸೀತೆಯ ನಿಯತ್ತಯ ಪುರಾಣಗಳ ಪುರಾಣಕಂತೆ ಆಗಿವೆ. ಮಹಾಯುದ್ಧಗಳು ನಡೆದಿರುವುದು ಸ್ತ್ರೀಗಾಗಿ ಎಂಬ ಸನ್ನಿವೇಷ ಸೃಷ್ಟಿಸಿರುವುದೂ ಪುರುಷನೇ. ಗಂಡನ್ನು ಎದುರು ಹಾಕಿಕೊಂಡ ಅಂಬೆ ಬಾಳಿನುದ್ದಕ್ಕೂ ವ್ಯಥೆಪಡುವ ಕತೆಯೇ ಆಗಿದೆ. ಅಗಸನ ಮಾತಿಗಿರುವ ಬೆಲೆ, ಸೀತೆಯ ಮೇಲೆ ನಂಬಿಕೆ ರಾಮನಿಗಿಲ್ಲ. ಸುಂದರ ಹೆಣ್ಣು ತನ್ನ ಹಕ್ಕು ಎಂದು ರಾವಣ ಅಟ್ಟಹಾಸದಿಂದ ಮೆರೆದಿದ್ದಾನೆ. ಹೆಣ್ಣನ್ನು ಪಗಡೆಯ ಪಣಕ್ಕಿಡಲಾಗಿದೆ. ದಾಸಿಯಂತೆ ಅವಮಾನ ಮಾಡಲಾಗಿದೆ. ರಾಜಕೀಯ ಕುತಂತ್ರಗಳಿಗಾಗಿ ಐದು ಪುರುಷರನ್ನು ದ್ರೌಪದಿಯ ಕೊರಳಿಗೆ ಕಟ್ಟಲಾಗಿದೆ. ವ್ಯಾಸ, ವಾಲ್ಮೀಕಿಯರು ಸಾಮಾಜಿಕ ಕಟ್ಟಳೆಗಳಿಗೆ ಒಳಪಟ್ಟೆ ರಾಮಾಯಣ, ಭಾರತವನ್ನು ರಚಿಸಿದ್ದಾರೆ. ಸ್ತ್ರೀ ಸಂವೇದನೆಗಾಗಿ ಅಲ್ಲ. ಹೆಣ್ಣಿನ ಕಷ್ಟಗಳನ್ನು ಚಿತ್ರಿಸಿದ್ದಾರೆ ಹೊರತು ಪರಿಹಾರ ಅಲ್ಲ. ಹೆಣ್ಣಿನ ಆತ್ಮಚರಿತ್ರೆಯನ್ನು ಯಾರೂ ಪುರಾಣವಾಗಿಸಿಲ್ಲ. ಪುರುಷನ ಪುಟ್ಟ ಸಂಗತಿಯೂ ದೊಡ್ಡ ಪುರಾಣಗಳಾಗಿಬಿಟ್ಟಿವೆ. ಸ್ತ್ರೀ ಸ್ವಂತಿಕೆಗಳನ್ನು ಬಚ್ಚಿಡಲಾಗಿದೆ. ಪವಿತ್ರತೆಯ ಹೆಸರಿನಲ್ಲಿ ಶೋಷಣೆಗಳು ನಡೆದಿವೆ.

ಪುರುಷ ಹೆಮ್ಮೆಯ ಸಂಕೇತ, ಅವನದು ವೀರಗುಣ. ಹೆಣ್ಣು ಕರುಣೆಯ ಸಂಕೇತ, ಸಹನೆ ವಿನಯ ಇದ್ದರಷ್ಟೇ ಹೆಣ್ಣು. ಇಲ್ಲವಾದಡೆ ಗಂಡುಬೀರಿ ಎಂದು ಪುರುಷಶಾಸನಗಳಲ್ಲಿ ಕೆತ್ತಲ್ಪಟ್ಟಿದೆ. ಹೆಚ್ಚು ಮಾತಾಡದಂತೆ ಎಲ್ಲ ಹಕ್ಕುಗಳ ಜೊತೆ ಮಾತಿನ ಹಕ್ಕನ್ನೂ ಕಸಿಯಲಾಗಿದೆ. ಹೆಣ್ಣು ತನಗಾಗಿ ಅಲ್ಲ, ಪರರಿಗಾಗಿ ಬದುಕುತ್ತಿದ್ದಾಳೆ. ಚರಿತ್ರೆಯ ಪುಟಗಳಲ್ಲಿ ರಾಜರಿಂದ ರಾಜರಿಗೆ ಕಪ್ಪಕಾಣಿಕೆಯಂತೆ ಹಸ್ತಾಂತರಗೊಂಡಿದ್ದಾಳೆ. ಸಹಗಮನದಂತಹಾ ವೀರಮರಣ ಪಡೆದು ಮಾಸ್ತಿಗಲ್ಲುಗಳಲ್ಲಿ ಕಲ್ಲಾಗಿದ್ದಾಳೆ. ಹೆಣ್ಣಿನ ಖಾಸಗಿತನವನ್ನು ಕಸಿದುಕೊಳ್ಳಲಾಗಿದೆ. ಪರ ಪೂರೈಕೆಗಳಲ್ಲಿ ಸುಖಿಸುತ್ತಾ ಅದು ತನ್ನ ಜೀವನದ ಧನ್ಯತೆ ಎಂದು ನಂಬಿದ್ದಾಳೆ ಅಥವಾ ಬಾಲ್ಯದಿಂದಲೂ ಅದನ್ನು ನಂಬಿಸಲಾಗಿದೆ.

ಕುಟುಂಬ ಎಂಬ ಪುಟ್ಟ ಅಂಗಸಂಸ್ಥೆಯಿಂದ ಹಿಡಿದು ಸಮಾಜದ ಎಲ್ಲ ಹಂತದಲ್ಲೂ ಸ್ತ್ರೀ ಶೋಷಣೆ ನಿರಂತರವಾಗಿದೆ. ಅವಳನ್ನು ಶರಣಾಗತ ಸ್ಥಿತಿಯಲ್ಲಿಡಲು ಅತ್ಯಾಚಾರ ಎಂಬ ಮಹಾಸ್ತ್ರ ಪ್ರಯೋಗವಾಗುತ್ತಿದೆ. ರಕ್ಷಕ ವ್ಯವಸ್ಥೆಯೇ ಶೋಷಣಾ ವ್ಯವಸ್ಥೆಯಾಗಿರುವುದೇ ವಿಪರ್ಯಾಸ. ಇವೆಲ್ಲದರ ಆಚೆಗೆ ತನಗೊಂದು ಅಸ್ತಿತ್ವವಿದೆ ಎಂದು ಹೆಣ್ಣು ಯೋಚಿಸಲೂ ಆಗದಂತೆ ನಿರ್ಬಂಧ ಹೇರಲಾಗಿದೆ. ಅದನ್ನು ಭಾರತೀಯ ಪರಂಪರೆ, ಸಾಂಸ್ಕೃತಿಕ ಜವಾಬ್ದಾರಿಯ ನೈತಿಕಪ್ರಜ್ಞೆ ಎಂದು ಪ್ರತಿಬಿಂಬಿಸಲಾಗಿದೆ, ಆತ್ಮಪ್ರಜ್ಞೆಯನ್ನು ಮೀರಿ, ಅಧೀನತೆಯನ್ನು ಪ್ರತ್ಯಕ್ಷದಲ್ಲಿ ಒಪ್ಪಿಕೊಂಡಿದ್ದಾಳೆ.

ಸ್ತ್ರೀ ಸಂವೇದನೆ ಎಂಬ ಪದದ ಅರ್ಥ ಇದೇ ಆಗಿದೆ. ಶರೀರದಷ್ಟೇ ಅವಳ ಭಾವನೆಗಳೂ ಸೂಕ್ಷ್ಮ ಆರ್ದ್ರತೆ ಉಳ್ಳದ್ದು. ಸಹಿಷ್ಣುತೆ, ತಾಳ್ಮೆ, ವಿನಯ, ದುಡಿತ, ಉಪಕಾರ, ಸೌಜನ್ಯ ಎಂಬ ನೊಗ ಕಟ್ಟಲಾಗಿದೆ. ಪಾರಂಪರಿಕ ಬೋಧನೆಯಲ್ಲದೆ ಆತ್ಮಗತವಾಗಿಯೇ ಸೇರಿಹೋಗಿದೆ. ಅವಳ ಭಾವನೆಗಳು ಅಸ್ಪಷ್ಟವಾಗಿ ಉಳಿಯುತ್ತದೆ. ಅತಿ ಸ್ಪಷ್ಟತೆ ಅವಳ ಸ್ವಭಾವಕ್ಕೆ ವಿರುದ್ಧವಾದುದು.

'ಸ್ತ್ರೀ ಪ್ರಾಬಲ್ಯತೆ ಎಂಬ ಪದ ಅದರ ಅರ್ಥದಷ್ಟೇ ವಿಚಿತ್ರವಾದ ಮರೀಚಿಕೆ. ಅದರ ಸನಿಹಕ್ಕೆ ಹೆಜ್ಜೆ ಇಟ್ಟಂತೆಲ್ಲಾ ಅದು ಹಿಂದಕ್ಕೆ ಸರಿಯುತ್ತಿದೆ. ಆದರೂ ಅದಯ ಹಚ್ಚಿದ ಆಶಾವಾದದಿಂದ ಮಹಿಳೆಯರಾದ ನಾವು ಪಡೆಯಲು ಓಡುತ್ತಲೇ ಇದ್ದೇವೆ.' (ಎಚ್.ಎಸ್.ಅನುಪಮಾ)

ಅಕ್ಷರಕ್ರಾಂತಿ ಅನೇಕ ಪಲ್ಲಟಗಳಿಗೆ ಎಡೆಮಾಡಿತು. ಮಹಿಳಾ ಜಾಗೃತಿ ಎಂಬುದು ಸ್ತ್ರೀ ಶಿಕ್ಷಣದ ಪರಿಣಾಮ. ಲಿಂಗ ತಾರತಮ್ಯದ ಭೀಕರತೆಯನ್ನು ಪ್ರಕೃತಿ ನಿಯಮ ಎಂಬ ಭಕ್ತಿ ಎಂದು ಸ್ತ್ರೀ ವರ್ಗವನ್ನು ನಂಬಿಸಲಾಗಿತ್ತು. ಕೇವಲ ಭಾಷಣ, ಲೇಖನಗಳಲ್ಲಿ ಮಾತ್ರ ಸ್ತ್ರೀ ಸಮಾನತೆಯ ಕೂಗು ಕೇಳಿಬರುತ್ತಿದೆ. ಪ್ರತ್ಯಕ್ಷವೇ ಬೇರೆ. ಕೌಟುಂಬಿಕವಾಗಿ ಮಹಿಳಾ ಸ್ಥಿತಿಗತಿಗಳು ಹಾಗೆಹಾಗೆ ಉಳಿದಿದೆ. ವಿಚಾರವಾದಿ ಪುರುಷರೂ ಇದಕ್ಕೆ ಹೊರತಲ್ಲ. ವಿದ್ಯಾವಂತ, ಉದ್ಯೋಗಶೀಲ ಮಹಿಳೆಯೂ ಕುಟುಂಬದ ಎಲ್ಲ ಕರ್ತವ್ಯಗಳನ್ನು ನಿರ್ವಿವಾದವಾಗಿ ಒಪ್ಪಿದ್ದಾಳೆ.

ಆಧುನಿಕ ಸಂದರ್ಭದಲ್ಲೂ, ನಾಗರಿಕ ಸಮಾಜವೂ ಇದಕ್ಕೆ ಹೊರತಲ್ಲ. ಕಾರ್ಮಿಕ ಸ್ತ್ರೀ ವರ್ಗ, ದಿನಗೂಲಿ ಸ್ತ್ರೀ ಪಾಡು ನಿತ್ಯ ಶೋಷಣೆಗೆ ಗುರಿಯಾಗಿವೆ. ಹೆಣ್ಣಿನ ದೈಹಿಕ ದೌರ್ಬಲ್ಯತೆ, ಅಸಮಾನತೆಯ ಲಿಂಗ ತಾರತಮ್ಯದ ಗೋಡೆ ಎಬ್ಬಿಸಿದೆ. ಮನೆಯಿಂದ ಮೊದಲ್ಗೊಂಡು ಇಡೀ ಸಮಾಜವೇ ಸಿಂಪಲ್ ಇಂಪ್ರೆಷನ್.

ಪುರುಷ ಸಮಾಜವೇ ಮಹಿಳಾ ಮನಸು ಅರ್ಥವಾಗಬೇಕು. ಮಹಿಳೆಯ ಕಲ್ಪನೆಗಳು ಕ್ರಿಯೆಗಳಾಗಿ ಪರಿವರ್ತನೆ ಆಗಬೇಕು. ವರ್ತನಶೀಲ ಬದುಕಿನಲ್ಲಿ ಸಾಧ್ಯವಾಗದ ಪ್ರಕಟಗಳು ಅಕ್ಷರಕ್ರಾಂತಿಯಲ್ಲಿ ಹೊರನುಗ್ಗುತ್ತಿದೆ. ದೈನಂದಿನದಲ್ಲಿ ಮೂಡಿಸಲಾಗದ ಸತ್ಯಗಳು ಅಕ್ಷರಗಳಾಗಿ ಮೂಡುತ್ತಿದೆ. ಸಾಹಿತ್ಯದ ಪದರುಗಳಲ್ಲಿ ಇಣುಕುತ್ತಿರುತ್ತದೆ. ಸ್ತ್ರೀಯರ ಮಟ್ಟಿಗೆ ಇದೇ ಮಹತ್ವಪೂರ್ಣ ಪ್ರತಿಭಟನೆ. ಅಕ್ಷರಕ್ರಾಂತಿ, ವೈಚಾರಿಕಕ್ರಾಂತಿಗೆ ಆಹ್ವಾನವಾಯಿತು. ಇಂತಹಾ ಮಹತ್ವರ ಪರಿವರ್ತನೆಗೆ ಶತಮಾನಗಳೇ ಬೇಕಾಯಿತು.

ಸ್ತ್ರೀ ಆತ್ಮಪ್ರಜ್ಞೆ ಅನುಭವವನ್ನು ಸಾಣೆ ಹಿಡಿದು ಬರೆಯುದ ದಾರಿ ತೆರೆಯುತ್ತಿದೆ. ಸ್ತ್ರೀ ಬರಹಗಳು ಸಮಾಜದ ದಿವ್ಯ ಪರಿಣಾಮಕ್ಕೆ ನಾಂದಿಯಾಗುತ್ತದೆ. ಈ ಸುಧಾರಣೆಗಳ ನಡುವೆ ತನ್ನ ಮೂಲ ಜವಾಬ್ದಾರಿಯನ್ನು ಹೆಣ್ಣು ಬಿಡಲಿಲ್ಲ. ಕುಟುಂಬಪಾಲನೆ ಪೋಷಣೆಗೆ ಅಷ್ಟೇ ಆದ್ಯತೆಯನ್ನು ನೀಡಿದಳು. ತೊಟ್ಟಿಲಿನ ಜೊತೆಗೆ ಜಗತ್ತನ್ನೂ ತೂಗಬಲ್ಲ ಅದಮ್ಯ ಕಾರ್ಯಶಕ್ತಿ ಸ್ತ್ರೀಯರ ಧೀಮಂತಿಕೆಗೆ ಸಾಕ್ಷಿ. ಸ್ತ್ರೀ ಪುರುಷರು ಪಂಚಭೂತ ಪ್ರಪಂಚದಲ್ಲೇ ಇದ್ದರೂ ಅದನ್ನು ಸ್ವೀಕರಿಸುವ, ಅಭಿವ್ಯಕ್ತಿಸುವ ಸಂವೇದನೆಗಳಲ್ಲಿ ಕವಲೊಡೆಯುತ್ತದೆ. ಕಬಳಿಸುವ ಆಕ್ರಮಣಕಾರಿ ಪ್ರವೃತ್ತಿ ಪುರುಷನದಾದರೆ, ನೀಡುವ ಉದಾರತ್ವ, ತುಸುಮಟ್ಟಿಗೆ ಅಧೀನತೆಗೆ ಒಳಗಾಗುವ ಮನಸ್ಥಿತಿ ಸ್ತ್ರೀ ಪ್ರವೃತ್ತಿ. ಅಧೀನತೆ ಎಂದರೆ ಅಭಿಮಾನವನ್ನು ತೊರೆಯುವುದು ಎಂದರ್ಥವಲ್ಲ, ಇದೊಂದು ರೀತಿಯ ಬಿಡುಗಡೆಯ ಸ್ಥಿತಿ. ಸುಪ್ತತೆಯನ್ನು ಹೊರಚೆಲ್ಲುವ ಮುಕ್ತಸ್ಥಿತಿ.

ಸ್ತ್ರೀ ಸಂವೇದನೆಯ ಅಭಿವ್ಯಕ್ತಿ ಮಾರ್ಗ ತಿರುವು ಪಡೆಯುತ್ತಿದೆ. ಶತಮಾನಗಳ ಹಿಂದೆ ಬಸವನ ಹುಳುವಿನಂತೆ ಮುಚ್ಚಿಟ್ಟುಕೊಳ್ಳುತ್ತಿದ್ದ ಸ್ತ್ರೀ ಮುಕ್ತವಾಗಿ ತನ್ನ ಮನಸ್ಸಿನ ಕೊರಕಲುಗಳನ್ನು ಅನಾವರಣಗೊಳಿಸುತ್ತಾ, ಸ್ತ್ರೀ ಒಳಗನ್ನು ಪ್ರಪಂಚಕ್ಕೆ ದಿಟ್ಟವಾಗಿ ತೋರಿಸುತ್ತಿದ್ದಾಳೆ. ಮಹಿಳೆಯ ಅಂತರಂಗದ ತಲ್ಲಣಗಳು ಬಾಹ್ಯ ಬದುಕು ತದ್ದಿರುದ್ಧವಾಗಿದೆ. ತನ್ನ ಭಾವನೆಗಳನ್ನು ಯಥಾವತ್ತಾಗಿ ಪರಿಪೂರ್ಣವಾಗಿ ಅಭಿವ್ಯಕ್ತಿಗೊಳಿಸುತ್ತಾಳೆಯೇ? ಅರ್ಧಭಾಗ ಮುಚ್ಚಿಡುತ್ತಾಳೆ; ಉಳಿದರ್ಧ ಮಿಥ್ಯವನ್ನು ನುಡಿಯುತ್ತಾಳೆ; ಸತ್ಯವನ್ನು ಹೇಳುವಾಗ ಮೌನಿಯಾಗುತ್ತಾಳೆ. ಕೆಲವು ಭಾವನೆಗಳು ವರ್ತನೆಗಳಲ್ಲಿ ಅಪರೋಕ್ಷವಾಗಿ ತೋರಿಕೆ ಪಡೆಯುತ್ತದೆ. ಮಾತಿನಲ್ಲಿ ಬರಲಾಗದ ಭಾವಗಳು ಬರವಣಿಗೆಯಲ್ಲಿ ಅನಾವರಣಗೊಂಡವು.

ಚರಿತ್ರೆ ಪುರಾಣಗಳ ರಚನೆಯ ಕಾಲಕ್ಕೂ ಪುರುಷ ತನ್ನ ಅಹಮಿಕೆಯನ್ನು ಗೆಲ್ಲಲು, ಮಹಿಳೆಯನ್ನು ಚೌಕಟ್ಟಿನಿಂದ ಹೊರದೂಡಿದ್ದಾನೆ. ಆ ಕಾಲಕ್ಕೇ ಬಹುಷ ಮಹಿಳೆಗೆ ವಿದ್ಯೆ

ಮತ್ತು ಸ್ವಾತಂತ್ರ್ಯ ದೊರೆತಿದ್ದರೆ, ಇಂದು ಸ್ತ್ರೀ ಸಾಧ್ಯತೆಗಳು ಬೇರೆ ಮಜಲು ಪಡೆಯುತ್ತಿತ್ತು. ಪುರುಷ ಪ್ರಭುತ್ವ ಸಾಧಿಸುವುದೇ ಪುರಾಣಗಳ ಮೂಲೋದ್ದೇಶ. ಜನಪದ ಸಾಹಿತ್ಯದಿಂದ ಹಿಡಿದು ತೀರ ಇತ್ತೀಚಿನ ತ್ರಿವೇಣಿಯವರೆಗೆ ಕುಟುಂಬ ಗಂಡ ಮಕ್ಕಳನ್ನು ಪೋಷಿಸುವ ಪಾಲಕಿಯಾಗಿಯೇ ಸ್ತ್ರೀ ಪಾತ್ರಗಳು ಉಳಿದುಹೋಗಿವೆ. ಕೌಟುಂಬಿಕ ಚೌಕಟ್ಟಿನಲ್ಲಿ ಭಾವನೆಗಳೂ ಸೆರೆಯಾಗಿವೆ. 14ನೇ ಶತಮಾನ ಭಕ್ತಿಪಂಥ ಮಹಿಳಾ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡ, ಸ್ತ್ರೀ ಭಾವನೆಗಳಲ್ಲಿ ಎರಡನೆಯದಾಗಿ ಕಾಣುವುದು ದೈವಭಕ್ತಿ. ದೈವಸ್ತುತಿ ಆರಾಧನೆ ಒಂದೆಡೆಯಾದರೆ ಹೆಣ್ಣನ್ನು ಹೆಣ್ಣಾಗಿ ಹುಟ್ಟಿಸಿದ್ದಕ್ಕಾಗಿ ದೈವ ನಿಂದನೆಯೂ ಆಗಿಹೋಗಿದೆ. ಭಕ್ತಿ ಪಾರಾಯಣವೇ ಎಂದರೆ ಪತಿ ಭಕ್ತಿಯೂ ಸೇರಿಹೋಗಿದೆ. ಹೆಳವನಕಟ್ಟೆ ಗಿರಿಯಮ್ಮ, ಸಂಚಿಹೊನ್ನಮ್ಮ ಮಹಿಳಾ ಸಾಹಿತ್ಯದಲ್ಲಿ ದೈವಭಕ್ತಿ, ಪತಿಭಕ್ತಿಯನ್ನು ಸಮರಸಗೊಳಿಸಿ, ಇದೇ ಹೆಣ್ಣಿನ ನೀತಿ ಎಂದು ಆ ಕಾಲದ ಮೌಲ್ಯಗಳು, ಯುಗಪ್ರಜ್ಞೆಯನ್ನು ದಾಖಲಿಸಲಾಗಿದೆ. ಮಹಿಳೆ ಏಕಾಂತವಾಗಿರಲೂ ಪ್ರತ್ಯೇಕತೆಯನ್ನು ಆಲೋಚಿಸಲೂ ಸಾಧ್ಯವಿಲ್ಲದಂತೆ ಅಡುಗೆಕೋಣೆಗಳಲ್ಲಿ ಬಂಧಿಸಲಾಗಿತ್ತು. ಹೆಣ್ಣು ಸಾಧಿಸಲಾರದವಲೂ, ವಿಚಾರರಹಿತಳೂ ಎಂದು ಅಸಡ್ಡೆ ತೋರಲಾಗಿದೆ. ತಮ್ಮ ಸಂವೇದನೆಗಳನ್ನು ಲೋಕಾನುಭವ ಪ್ರಕಟಗೊಳಿಸತ್ತಲೇ ಸ್ವಂತಿಕೆಯನ್ನು ಪ್ರತಿಪಾದಿಸಿದರು.

ಅಕ್ಷರಕ್ರಾಂತಿ ವೈಚಾರಿಕ ಕ್ರಾಂತಿಗೆ ಆಹ್ವಾನ ನೀಡಿರುವ ವೈದೇಹಿಯವರ, 'ಅಡುಗೆಮನೆ ಹುಡುಗಿ' ಕವಿತೆಯಲ್ಲಿ ಪ್ರಸ್ತುತತೆಯಿಂದಿ ಬಿಡಿಸಿಕೊಂಡು ಯಾವುದೋ ಲೋಕಕ್ಕೆ ಮುನ್ನುಗ್ಗುವ ತವಕವಿದೆ. ಸ್ವಾತಂತ್ರ್ಯ ಸಿಗುವುದಾದರೆ ರಾವಣಲೋಕವಾದರೂ ಸೈ, ತಪ್ತಗೊಂಡ ಹೆಣ್ಣಿನ ಮನಸ್ಸಿನ ಸಂವೇದನೆಗಳನ್ನು ಅಡುಗೆ ಕೋಣೆಗಳಲ್ಲಿ ಅದುಮಿಡಲಾಗಿತ್ತು. ಜನಪದ ಸಾಹಿತ್ಯದಲ್ಲಿ ಮನೆತನದ ಮತ್ತು ಸಂಬಂಧಗಳ ನಿಭಾಯಿಸುವಿಕೆ ಇದ್ದರೂ, ಹೆಣ್ಣಾಗಿ ಹುಟ್ಟೋದಕ್ಕಿಂತ ಮಣ್ಣಾಗಿ ಹುಟ್ಟುವ ತೀವ್ರ ಪ್ರತಿಭಟನೆ ಇದೆ. ಸೀತೆ ರಾವಣನೊಂದಿಗೆ, ಸಾವಿತ್ರಿ ಯಮನೊಂದಿಗೆ, ದ್ರೌಪದಿ ದುಶ್ಯಾಸನನೊಂದಿಗೆ, ಶಕುಂತಲೆ ದಮಯಂತಿ ಪರಿಸ್ಥಿತಿಯೊಂದಗೆ ಪುರಾಣ ಕಾಲದಿಂದಲೂ ಪ್ರತಿಭಟಿಸುತ್ತಲೇ ಇದ್ದಾರೆ. ಒಲ್ಲದ ಗಂಡನನ್ನು ಧಿಕ್ಕರಿಸಿದ ಮಹದೇವಿ ಅಕ್ಕ, ಸಹಗಮನವನ್ನು ಒಪ್ಪಿಕೊಂಡ ವೀರಸೈನಿಕರ ಮಡದಿಯರು ಎರಡೂ ಮನಸ್ಥಿತಿಯ ಸ್ತ್ರೀಯರಲ್ಲೂ ಮೂಲವಾಗಿ ಅಡಗಿರುವುದು ಪ್ರತಿಭಟನೆಯೇ.

ಆಧುನಿಕ ಸಮಾಜದಲ್ಲಿ ಶಿಕ್ಷಣ, ಮೀಸಲಾತಿ, ಪ್ರಾತಿನಿಧ್ಯ ಹೊರತಾಗಿಯೂ ಮಹಿಳಾ ಸುರಕ್ಷತೆ ಬಾಕಿ ಉಳಿದಿದೆ ಎಂದು ಸ್ತ್ರೀವಾದಿ ಅನುಪಮಾ ನುಡಿದಿದ್ದಾರೆ.

'ಹಿಂಸೆ ನಿಲ್ಲಲಿ ಎಂದು ಹಕ್ಕಿಗಾಗಿ ಜಾಥಾ ನಡೆಸುತ್ತಿದ್ದೇವೆ' ಅಷ್ಟೇ.

ಪ್ರಕಟಿಸುವ ಪತ್ರಿಕೆಗಳೇ ಕಂಪಿಸುವಷ್ಟು ಅತ್ಯಾಚಾರ ಈ ದಿನಗಳಲ್ಲಿ ನಡೆದಿವೆ. ಅದು ಕೇವಲ ಸುದ್ದಿಗಳಾಗಿ ಮರೆಯಾಗುತ್ತಿದೆ. ಇದೇ ನಾಗರಿಕ ಸಮಾಜದ ಮುಖವಾಡ. ಸ್ತ್ರೀಯರಿಗೆ ವಸ್ತ್ರಸಂಹಿತೆ ಬೋಧಿಸುತ್ತಿದೆ, ನಗ್ನಚಿತ್ರಗಳಿಗೆ ಪಾರಿತೋಷಕ ನೀಡುತ್ತದೆ, ಪ್ರಚಾರ ಮಾಧ್ಯಮಗಳಲ್ಲಿ

ಸ್ತ್ರೀಯರನ್ನು ಅಶ್ಲೀಲವಾಗಿ ಬಿಂಬಿಸಲಾಗುತ್ತಿದೆ. ಪುರುಷಸಮಾಜದ ಹುನ್ನಾರಗಳು ಹೆಣ್ಣಿನ ಜನ್ಮದ ಹಕ್ಕನ್ನೂ ಕಸಿಯುತ್ತಿದೆ. ಹೆಣ್ಣು ಭ್ರೂಣಗಳು ಭೂಮಿಗೆ ಬರುವುದರಲ್ಲೇ ಜೀವಹತ್ಯೆ ನಡೆದಿದೆ. ವಿಜ್ಞಾನ ನೈತಿಕ ತಾಟಸ್ಥ್ಯ ತಳೆದಿದೆ. ಕಾನೂನು ಮೂರ್ಖ ವ್ಯವಸ್ಥೆಗೆ ಕೈಗೊಂಬೆಯಾಗಿದೆ.

ರೊಮ್ಯಾಂಟಿಕ್ ಆಗಿ ವರ್ಣಿಸುವ ಕಾಮಕ್ಕೂ, ಭೀಭತ್ಸ ಎನ್ನುವ ಅತ್ಯಾಚಾರಕ್ಕೂ ನಡುವಿನ ಗೆರೆ ತುಂಬ ತೆಳುವಾಗಿದೆ, ಆ ಗೆರೆ ಒಪ್ಪಿಗೆ ಎಂಬ ಮೋಸಗಾರ ಪದವನ್ನೊಳಗೊಂಡಿದೆ ಎಂದು ಅನುಪಮಾ ಹೇಳುತ್ತಾರೆ.

'ಲೈಂಗಿಕ ಕಾರ್ಯಕರ್ತೆಯರು' ಎಂಬ ಸ್ತ್ರೀ ವರ್ಗವನ್ನೇ ಈ ಸಮಾಜ ಕಾನೂನುಬದ್ಧವಾಗಿಯೇ ಸೃಷ್ಟಿ ಮಾಡಿದೆ. ಅವರು ಅನುಭವಿಸುವ ನರಕಯಾತನೆಗೆ ಸಮಾಜ ಕುರುಡಾಗಿದೆ. ಸ್ತ್ರೀ ಶೋಷಣೆಗೆ ಇದಕ್ಕಿಂತ ಬೇರೆ ದೃಷ್ಟಾಂತ ಭೂಗೋಳದ ಇನ್ಯಾವ ಜೀವ ಸಂಕುಲವೂ ತನ್ನ ಸ್ತ್ರೀ ಪ್ರಬೇಧವನ್ನು ನಡೆಸಿಕೊಳ್ಳದಷ್ಟು ದುಷ್ಟವಾಗಿ ಮಾನವ ನಡೆದುಕೊಳ್ಳುತ್ತಿದ್ದಾನೆ.

ಲಿಂಗಸಮಾನತೆಯ ಪಾಠಗಳು ಕುಟುಂಬದಿಂದಲೇ ಪ್ರಾರಂಭವಾಗಬೇಕು. ದೇಹಕ್ಕೆ ಮೀರಿದ ಒಂದು ವ್ಯಕ್ತಿತ್ವವಿದೆ; ಅದುವೇ ನಿಜವಾದ ಅಸ್ತಿತ್ವ; ಎಂಬ ಅರಿವು ಮೂಡುವಂತೆ ಆತ್ಮವಿಶ್ವಾಸದ (ಸಮಾನತೆಯ) ಶಿಕ್ಷಣ ನೀಡಬೇಕು. ಸಮಾಜಕ್ಕೆ ಮಹಿಳಾ ಪರ ಕಾಳಜಿ ಮೂಡಿಸಬೇಕಾಗಿದೆ.

(ಮಹಿಳಾ ಪ್ರಾತಿನಿಧ್ಯವನ್ನು ಸರ್ಕಾರ ನಗಣ್ಯವಾಗಿಸಿದೆ. ರಾಜಕೀಯ ಪ್ರಾತಿನಿಧ್ಯ ಇಲ್ಲದಿರುವುದರಿಂದ ಮಹಿಳಾ ಹಕ್ಕು ಮತ್ತು ಸವಲತ್ತುಗಳು ಲುಪ್ತವಾಗಿದೆ.) ಮಹಿಳಾ ಧನಿಗೆ ಸಮಾಜ ಮತ್ತು ಸಂವಿಧಾನ, ನ್ಯಾಯಾಲಯ ಕುರುಡಾಗಿದೆ. ಮಹಿಳೆಯ ಅನ್ಯಾಯಗಳನ್ನು ಕಾನೂನಿನ ಮೂಲಕ ಸರಿಪಡಿಸಲು ಅಸಾಧ್ಯವಾಗಿದೆ. ವಿಚಾರಪ್ರಜ್ಞೆಯ ಜೊತೆಗೆ ಇಂದು ಸ್ತ್ರೀ ರಾಜಕೀಯ ಪ್ರಜ್ಞೆಯನ್ನು ಪಡೆಯುವುದು ಅನಿವಾರ್ಯವಾಗಿದೆ.

ಭಿತ್ತಿಚಿತ್ರಗಳಲ್ಲಿ, ದೂರದರ್ಶನ, ಜಾಹಿರಾತುಗಳಲ್ಲಿ ಸ್ತ್ರೀಯರನ್ನು ಅಶ್ಲೀಲವಾಗಿ ಬಳಸಿಕೊಳ್ಳಲಾಗುತ್ತಿದೆ. ಹೆಣ್ಣು ಭ್ರೂಣಗಳು ಭೂಮಿಗೆ ಬರುವುದರಲ್ಲೇ ಜೀವಹತ್ಯೆ ನಡೆದಿದೆ. ವಿಜ್ಞಾನ ನೈತಿಕ ತಾಟಸ್ಥ್ಯ ತಳೆದಿದೆ.

ಅಂತಿಮವಾಗಿ ಆಳದಲ್ಲಿ ವ್ಯವಸ್ಥೆ ಯಾವಾಗಲೂ ಬಲಿಷ್ಠರ ಪರವಾಗಿಯೇ ರೂಪುಗೊಳ್ಳುತ್ತದೆ. ಬಲೆಗೆ ಸಿಲುಕಿರುವ ಮಹಿಳೆ ನಿಧಾನವಾಗಿ ತನ್ನನ್ನು ಬಿಡಿಸಿಕೊಂಡರೆ ಇಡೀ ಸಮುದಾಯಕ್ಕೆ ವಿಮೋಚನೆಯ ಹಾದಿ ಒದಗಬಲ್ಲದು.

ರಾಜಕೀಯ ಪಕ್ಷಗಳು ತಾಳಿಭಾಗ್ಯ, ಸೀರೆಭಾಗ್ಯ ನೀಡಿದರೆ ಸಾಲದು, ಸಮಾನತೆಯ ಸೌಭಾಗ್ಯ ಒದಗಿಸಬೇಕಾಗಿದೆ. ಧರ್ಮಗ್ರಂಥಗಳಲ್ಲಿ ಮಹಿಳೆಯನ್ನು ಶಕ್ತಿದೇವತೆ ಎಂದರೂ,

ಸಹಗಮನ, ವಿಧವಾಪದ್ಧತಿ, ವರದಕ್ಷಿಣೆ, ವಧುದಹನ ಸ್ತ್ರೀ ಭ್ರೂಣಹತ್ಯೆ, ದೈಹಿಕ ಹಿಂಸೆ, ದೌರ್ಜನ್ಯ ಬರ್ಬರಶೋಷಣೆ ನಡೆಯುತ್ತಲೇ ಇದೆ.

ಧರ್ಮ ಎಂದರೆ ಸಾಮಾಜಿಕ ಮತ್ತು ಮಾನವತಾ ನ್ಯಾಯ ಒದಗಿಸುವ ನಿಯವ ಎಂದರ್ಥ, ಎಷ್ಟೋ ರಾಷ್ಟ್ರಗಳಲ್ಲಿ, 'ಮಹಿಳಾ ಹಕ್ಕುಗಳು ಧಾರ್ಮಿಕ ವಿರೋಧ' ಎಂಬ ಪೊಳ್ಳು ಹೇಳಿಕೆ ನೀಡಿ ನುಣುಚಿಕೊಳ್ಳುತ್ತಿದೆ. ಮಹಿಳಾ ಹಕ್ಕು ಪಡೆಯುವಲ್ಲಿ ಮಾನವ ನಿರ್ಮಿತ ಕಾನೂನುಗಳನ್ನು ಧಾರ್ಮಿಕ ಕಾನೂನುಗಳಾಗಿ ಪರಿವರ್ತಿಸಲಾಗುತ್ತಿದೆ. ಸಂತಾನೋತ್ಪತ್ತಿ ವಿಚಾರದಲ್ಲೂ ಮಹಿಳೆಯ ಅಭಿಪ್ರಾಯ ಕೇಳುವವರು ಯಾರು?

ಧರ್ಮ, ಕಾನೂನು, ಆಡಳಿತ, ಅರ್ಥವ್ಯವಸ್ಥೆ ಸಮಾಜದ ಎಲ್ಲ ಕ್ಷೇತ್ರಗಳನ್ನು ಹಿಡಿದಿರುವನು ಪುರುಷ. ಕಾನೂನುಗಳಷ್ಟೇ ಅಲಿಖಿತ ನೀತಿ ಸಂಹಿತೆಗಳೂ ಸ್ತ್ರೀ ಶೋಷಣೆಗೆ ಮುಖ್ಯ ಕಾರಣವಾಗಿದೆ.

ಉದ್ಯೋಗವಂತ ಮಹಿಳೆಯರಿಗೂ ಆರ್ಥಿಕ ಸ್ವಾತಂತ್ರ್ಯ ದಕ್ಕದಂತೆ ಪುರುಷ ಯಜಮಾನಿಕೆ ನಡೆಸಿದೆ. ಆದಿವಾಸಿ ಜನಾಂಗಗಳ ಹಟ್ಟಿಯಲ್ಲಿ ಹೆಣ್ಣುಮಕ್ಕಳಿಗೆ ಅವೈಜ್ಞಾನಿಕ ಅಮಾನವೀಯ, ಆರೋಗ್ಯಕರ ಮೈಲಿಗೆ ಸಂಪ್ರದಾಯವನ್ನು ಹಾಕಿ ಕೊಡಲಾಗಿದೆ. ನೈಸರ್ಗಿಕ ಕ್ರಿಯೆಗಳಿಗೆ ಸಾಂಪ್ರದಾಯಿಕ ಕಟ್ಟುಪಾಡುಗಳ ಕವಚ ನೀಡಿ, ಉಪಚರಿಸಬೇಕಾದ ಹೆಣ್ಣುಮಕ್ಕಳಿಗೆ ಹಟ್ಟಿಯಿಂದ ಹೊರದೂಡಲಾಗಿದೆ. ತಿಳುವಳಿಕೆ ಇದ್ದರೂ ಆಧುನಿಕ ಸಮಾಜ ಮೌನಿಯಾಗಿದೆ. ಇಂತಹಾ ಮೌಢ್ಯಗಳಿಗೆ ಬಲಿಯಾಗುವವಳು ಮಹಿಳೆ. ಇಂತಹಾ ಸಾಮಾಜಿಕ ಅನ್ಯಾಯಗಳಿಂದ ಸ್ತ್ರೀಯರು ಪ್ರಾಣ ಕಳೆದುಕೊಳ್ಳುವಂತಾಗಿದೆ.

ಮಹಿಳೆಗೆ ಕುಟುಂಬದಲ್ಲಿ ಪ್ರೀತಿ, ಆಸ್ತಿ, ಹಕ್ಕು ಎಲ್ಲಕ್ಕೂ ಕೊರತೆಯಾಗಿದೆ. ಸಮಾಜದಲ್ಲಿ ಸ್ಥಾನಮಾನಕ್ಕೆ ಒದ್ದಾಡುತ್ತಿರುವ ಮಹಿಳೆ, ಇಡೀ ಜೀವಸಂಕುಲವನ್ನು ಪೊರೆಯುವ ಸೃಷ್ಟಿ ಮಾತೆಯಾಗಿದ್ದಾಳೆ. ಮನೆಯಿಂದ ಶಾಲೆಯಿಂದ ಹಿಡಿದು ಕಛೇರಿಗಳಲ್ಲಿ ಕಡೆಗೆ ಮಹಿಳಾ ಜೈಲುಗಳಲ್ಲಿ, ಮಹಿಳಾ ಆಶ್ರಮಗಳಲ್ಲಿ ಹಿಂಸಾಚಾರ ಅವಿರತವಾಗಿ ನಡೆದಿದೆ.

ಆತ್ಮಗೌರವಕ್ಕಾಗಿ ಕೂಗುತ್ತಿರುವ ಸ್ತ್ರೀ;

ಆಕ್ರಮಣ ಮಾಡುತ್ತಿರುವ ಪುರುಷ.

ಎರಡು ಸಮಾನಾಂತರ ರೇಖೆಗಳಂತೆ ಸಾಗುತ್ತಲೇ ಇದೆ. ದೈಹಿಕ ಬಲಿಷ್ಟತೆ ಹೊಂದಿರುವ ಪುರುಷ ಸೂಕ್ಷ್ಮ ಪ್ರವೃತ್ತಿಯ ಸ್ತ್ರೀಯರನ್ನು ಶೋಷಣೆಯ ವಸ್ತುವಾಗಿಸಿಕೊಂಡಿದ್ದಾರೆ.

ಶ್ರಮಿಕ ವರ್ಗದ ಸ್ತ್ರೀ, ಆದಿವಾಸಿ ಸ್ತ್ರೀ, ಗ್ರಾಮೀಣ ಸ್ತ್ರೀಯರು ಮುಸಲ್ಮಾನ ಮಹಿಳೆಯರು, ಬಡ ಕುಟುಂಬದವರು, ಉದ್ಯೋಗವಂತ ಸ್ತ್ರೀಯರು, ತಳಸಮುದಾಯದ ಸ್ತ್ರೀ ಇವರನ್ನೆಲ್ಲ ಕಾನೂನು, ಸಂವಿಧಾನ, ಪತ್ರಿಕೆ ಮತ್ತು ಧಾರ್ಮಿಕ ಸಂಹಿತೆಗಳು ಹಾಗೂ ರಕ್ಷಣಾ ವ್ಯವಸ್ಥೆ ಕಾಪಾಡುತ್ತದೆಯೇ?

ಆಧುನಿಕ ಸಮಾಜ ಹೆಣ್ಣುಮಕ್ಕಳಿಗೆ ಶಿಕ್ಷಣ, ಸ್ವಾತಂತ್ರ್ಯ, ಆಸ್ತಿಹಕ್ಕು, ವಿಚ್ಛೇದನ ಹಕ್ಕು, ಜೀವನಾಂಶ ರಕ್ಷಣೆ ನೀಡುತ್ತದೆಯೇ? ಜಾತಿವಾದಿ ಮೂಲಭೂತವಾದಿಗಳ ಅಡಕತ್ತರಿನಲ್ಲಿ ಸ್ತ್ರೀ ಸಿಲುಕಿಕೊಂಡಿದ್ದಾಳೆ.

ನಿರಂತರ ಶೋಷಣೆಯಿಂದ ಸ್ತ್ರೀಯರು ಮಾನಸಿಕಖಿನ್ನತೆ ಆತ್ಮಹತ್ಯೆಗಳಿಗೆ ಗುರಿಯಾಗುತ್ತಿದ್ದಾಳೆ. ಶಿಕ್ಷಣ, ಉದ್ಯೋಗ, ಕ್ರೀಡಾ ಕ್ಷೇತ್ರಗಳಲ್ಲೂ ಸ್ತ್ರೀ ಶೋಷಣೆ ನಿರಂತರವಾಗಿ ನಡೆಯುತ್ತಲೇ ಇದೆ. ಗಾಂಧಿ, ಅಂಬೇಡ್ಕರ್, ಮಾರ್ಕ್ಸ್‌ವಾದಿಗಳು ಅಸಮಾನತೆಯನ್ನು ಹೋಗಲಾಡಿಸಲಾರರು. ವೈದ್ಯಕೀಯ ಸಂಶೋಧನೆಗಳು ಹೆಣ್ಣಿನ ನೈಸರ್ಗಿಕ ಸೂಕ್ಷ್ಮತೆಗಳಿಗೆ ಉತ್ತರಿಸಬಲ್ಲದೇ? ಮಾಸ್ತಿಕಲ್ಲುಗಳನ್ನು ಪೂಜಿಸುವ ಅರ್ಥವೇನು? ಆಧುನಿಕ ಜಗತ್ತ ಇದಕ್ಕೆ ಉತ್ತರಿಸಬೇಕಿದೆ. ಮಹಿಳಾ ಸ್ಥಾನಮಾನಗಳೇನು? ಮಹಿಳಾ ಬರವಣಿಗೆಗೆ ಒಂದು ಸಾಂಸ್ಕೃತಿಕ ಮಹತ್ವವಿದೆ. ಮಹಿಳಾ ಸಾಹಿತ್ಯ ಸ್ತ್ರೀ ಲೋಕದ ಸಂಕೇತಗಳಂತೆ ಅವರ ಅಂತಸ್ಥ ಚಿತ್ತಭಿತ್ತಿಗಳು ಅನಾವರಣಗೊಳ್ಳುತ್ತವೆ.

ಆಧುನಿಕ ಸ್ತ್ರೀ ಸಾಹಿತ್ಯ ತನ್ನ ಅಸ್ತಿತ್ವವನ್ನು ಸಾರುವ, ಸ್ಥಾಪಿಸುವ ವಿಮೋಚನೆಗಾಗಿ ಒತ್ತಾಯಿಸುವ ಮಾದರಿಗಳಂತೆ ಕಾಣುತ್ತಿದೆ. ಪುರಾಣ, ಚರಿತ್ರೆಗಳಲ್ಲಿ ಪುರುಷ ಕವಿಗಳೇ ಸ್ತ್ರೀ ಭಾವನೆಯನ್ನು ವಿವರಿಸುವ ಕಾಲ ಹೊಂದಿತು. ಮಹಿಳೆ ಆಧುನಿಕ ಸಂದರ್ಭದಲ್ಲಿ ಮಹಿಳೆ ತಾನೇ ತನ್ನ ಭಾವನೆಗಳಿಗೆ ಬೆಲೆಗಟ್ಟುತ್ತಿದ್ದಾಳೆ. ಆದಾಗಲೇ ಆಪ್ತತೆ, ಆರ್ದ್ರತೆ, ತನ್ನದೇ ನ್ಯಾಯ ತುಂಬಲು ಸಾಧ್ಯ. ಲೇಖಕರಷ್ಟೇ ತೀವ್ರವಾಗಿ ಪ್ರೌಢವಾಗಿ ವೈಚಾರಿಕವಾಗಿ ಮಹಿಳೆ ಸೃಜನಶೀಲ ರೂಪವರಾಗುತ್ತಿದ್ದಾಳೆ. 'ಸಾಮಾಜಿಕ ಮೌಲ್ಯಗಳಿಗೆ ಅನಿಷ್ಟ ಬಡಿದಿದೆ, ಅದನ್ನು ಸುಧಾರಿಸಬೇಕಾದರೆ ಇಲ್ಲಿರುವ ಘರ್ಷಣೆಗಳನ್ನು ಹೋಗಲಾಡಿಸಬೇಕು. ಕ್ರಾಂತಿಗೆ ಮುಖಾಮುಖಿಯಾಗಬೇಕು. ಕ್ರಾಂತಿ ಎಂದರೆ ಸಮಸ್ಯೆಯನ್ನು ಸಂಪೂರ್ಣವಾಗಿ ಅರಿಯುವುದು ಅದರ ಪರಿಹಾರಕ್ಕೆ ಸಿದ್ಧರಾಗುವುದು. ವರ್ತನಶೀಲ ಬದುಕಿನಲ್ಲಿ ಕಾರ್ಯಗತಗೊಳಿಸಲಾರದ್ದನ್ನು ಸೃಜನಶೀಲತೆಯಲ್ಲಿ ಪ್ರತಿಕ್ರಿಯೆ ನೀಡಿದ ಮಹಿಳೆಯರ ಮಟ್ಟಿಗೆ ಅದೇ ಕ್ರಾಂತಿಯ ಮೊದಲ ಹೆಜ್ಜೆ, ಆದರ್ಶಗಳ ವಿರೋಧಿಯಾಗದೆ, ತನ್ನ ತನವನ್ನು ಉಳಿಸಿಕೊಂಡು ವಿರೋಧಿಶಕ್ತಿಗಳನ್ನು ಪ್ರಶ್ನಿಸುತ್ತಿದ್ದಾಳೆ. ಪ್ರತಿಭಟನೆ ಕ್ರೌರ್ಯಕ್ಕೆ ಹೊರಳದೇ ಇತ್ಯಾತ್ಮಕ ಗುಣಗಳನ್ನು ಉಳಿಸಿಕೊಳ್ಳುವುದೇ ಮಹಿಳಾ ಸಾಹಿತ್ಯದ ಮೂಲಸ್ವಭಾವ. ಸೂಕ್ಷ್ಮತೆಗಳ ದಾಖಲಾತಿ, ಬಿಡುಗಡೆಯ ಹಂಬಲ, ತಾತ್ವಿಕ ಬೆರಗು, ಲಿಂಗ ಸಮಾನತೆಯ ಪ್ರಶ್ನೆ, ತರ್ಕಶುದ್ಧಕ್ಕಿಂತ ಭಾವಶುದ್ಧವಾದದ್ದು.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮಹಿಳಾ ಸಾಹಿತಿಗಳ ಸಂಖ್ಯೆ ಕಡಿಮೆ ಎನಿಸಿದರೂ, ಅವರು ಎತ್ತಿದ ಧ್ವನಿ, ಧಾಟಿ, ಸ್ವರೂಪ ಧೋರಣೆ ಶಕ್ತಿಯುತವಾದದ್ದು. ತನ್ನ ಶೋಷಣೆಗಳ ಆಚೆಗೆ ಆತ್ಮವಿಶ್ವಾಸದ ಸಾಧನೆಗಾಗಿ ಆತ್ಮತೃಪ್ತಿಗಾಗಿ, ಸಮಾನತೆಗಾಗಿ, ಸಾಹಿತ್ಯಶಕ್ತಿಯನ್ನು ಅಸ್ತ್ರವನ್ನಾಗಿ ಮಾಡಿಕೊಂಡಿದ್ದಾಳೆ.

ಪರಂಪರೆಯಿಂದ ಮೂಡಿಬಂದ ಸಂವೇದನೆಗಳು ಗ್ರಾಮ್ಯ ಪರಿಸರದಲ್ಲಿ ಜಾನಪದ ಕಾಲಕ್ಕಾಗಲೇ ರೂಪುಗೊಳ್ಳುತ್ತಿತ್ತು. ಗ್ರಾಮೀಣ ವನಿತೆಯರು ಮುಕ್ತವಾಗಿ ತಮ್ಮ ಭಾಗವನ್ನು

ಹಾಡಿಕೊಳ್ಳುತ್ತಿದ್ದರು. ಜೋಗುಳದಿಂದ ಒಡಿದು ಜೋಳದಾಳಿಯವರೆಗೆ ತಮ್ಮ ಶ್ರಮಿಕ ಬದುಕನ್ನು ಸಾಹಿತ್ಯ ರೂಪವಾಗಿ ಸಾಕಾರಗೊಳಿಸಿದ್ದಾರೆ. ಮೌಖಿಕ ಪರಂಪರೆಯ ಹಾಡು, ಕತೆಗಳು ಸ್ತ್ರೀ ಬದುಕಿನ ಸಂವೇದನೆಯೊಂದಿಗೆ ಬೆರೆತು ಬಂದವು. ಹೆಣ್ಣಿನ ಬದುಕು, ನೀತಿ, ಕಾರ್ಯ, ನಡಾವಳಿ, ಶ್ರಮ, ಸುಖ ದುಃಖ ಎಲ್ಲವೂ ಬೆರೆತುಹೋಗಿದೆ. ಇಚ್ಛಾಶಕ್ತಿ ಮತ್ತು ಕಲ್ಪನಾಶಕ್ತಿ ಮಿಳಿತವಾಗಿ ಜನಪದ ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿದೆ. ಸ್ತ್ರೀ ಭಾವ ಜಗತ್ತಿನ ಮೂಲತನವನ್ನು ಜಾನಪದ ಲೋಕದಲ್ಲಿ ಕಾಣಬಹುದಾಗಿದೆ.

ಶ್ರಮಿಕ ಬದುಕಿನ ಸಾರಸಂಗತಿಗಳು ಧ್ವನಿತವಾಗಿ ವಚನ ಯುಗದಲ್ಲೂ ನಸುಳಿತು. ವಚನಕಾರ್ತಿಯರು ಆಶಯಗಳು ವೃತ್ತಿ, ಭಕ್ತಿ, ಜ್ಞಾನ ಸಮನ್ವಯಗೊಂಡು ವಚನ ಸಾಹಿತ್ಯವಾಗಿ ಮೈತಳೆಯಿತು. ಸ್ತ್ರೀ ಸಮಾನತೆಯ ಮೊದಲ ಕಹಳೆ ಉದ್ಘೋಷ ಮಾಡಿದ ಕಾಲ ವಚನ ಯುಗ, ಸ್ತ್ರೀ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಪರಿಪೂರ್ಣವಾಗಿ ದಕ್ಕಿದ ಮಹಿಳಾ ಸಾಹಿತ್ಯ ವಚನ ಪರಂಪರೆಯಲ್ಲಿ ಬಹುಮುಖ್ಯ ಬೆಳವಣಿಗೆ ಪಡೆಯಿತು. ಹೆಣ್ಣಿನ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸುವಲ್ಲಿ ಧನಿಯಾದರು. ಆತ್ಮಸಿದ್ಧಿ, ಕಾಯಕ ಸಿದ್ಧಿಯನ್ನು ಸಾಧಿಸಿದರು. ಹೆಣ್ಣನ್ನು ಮಾಯೆ ಎಂದ ಪುರುಷ ವಚನಕಾರರನ್ನು ಖಂಡಿಸಿ, ಸ್ತ್ರೀ ವಚನಕಾರ್ತಿಯರನ್ನು ಹೆಣ್ಣು ಸಾಧನೆಗೆ ಮೋಕ್ಷಕ್ಕೆ ಅರ್ಹಳು ಎಂದು ಭಕ್ತಿಮಾರ್ಗದಲ್ಲಿ ಪ್ರತಿಪಾದಿಸಿದರು. ಪುರುಷನಂತೆಯೇ ಆಸೆ, ಅರಿಷಡ್ವರ್ಗಗಳನ್ನು ಗೆದ್ದು ಆಧ್ಯಾತ್ಮ ಸಾಧನೆಯನ್ನು ದಕ್ಕಿಸಿಕೊಂಡರು.

ಅಮುಗೆ ರಾಯಮ್ಮ, ಆಯ್ದಕ್ಕಿಲಕ್ಕಮ್ಮ, ಮುಕ್ತಾಯಕ್ಕ, ಮಹದೇವಿಯಕ್ಕ, ನೀಲವ್ವೆ, ಸಂಕವ್ವೆ ವೃತ್ತಿ ಬದುಕಿನೊಂದಿಗೆ ಸಾಹಿತ್ಯ ಅಭಿವ್ಯಕ್ತಿ ಸಾಧಿಸಿದರು. ಆಧ್ಯಾತ್ಮಸಿದ್ಧಿ, ಅಂತರಂಗ ಶೋಧ, ಪಾರಮಾರ್ಥಿಕ ಹುಡುಕಾಟ ಕಂಡುಬಂದರೂ ರೂಢಿಗತ ಸಾಂಪ್ರದಾಯಿಕ ಕಟ್ಟಳೆಗಳನ್ನು ಕಿತ್ತೊಗೆಯುವ ಧೋರಣೆ, ಪ್ರತಿಭಟನೆ ಸ್ಪಷ್ಟವಾಗಿ ಆಸ್ಫೋಟಗೊಂಡಿತು. ಅಕ್ಕಮಹಾದೇವಿಯ ವಚನಗಳಲ್ಲಿ ಸತಿಪತಿ ಭಾವ ವಿಚಿತ್ರ ಗತಿ ಪಡೆಯಿತು. 12ನೇ ಶತಮಾನಕ್ಕಾಗಲೇ ನಿರ್ಭೀತ ಭಾವದಿಂದ ಸಂಸಾರವನ್ನು ಧಿಕ್ಕರಿಸಿ, ಮಾನಸಿಕ ಪತಿಯನ್ನು ಸೇರುವ ದಿಟ್ಟ ತೀರ್ಮಾನ ಕೈಗೊಳ್ಳುತ್ತಾಳೆ. ಸಾಂಸಾರಿಕ ಬದುಕಿನಿಂದ ಅಲೌಕಿಕತೆಯ ಕಡೆ ಸಾಗುವ ಭಕ್ತಿಯ ನಿರ್ಭಯತೆ ಕಾಣಬಹುದು.

ಭಕ್ತಿಪಂಥದ ಮೌಲ್ಯಗಳನ್ನು ಸ್ವೀಕರಿಸಿದ ಸಂಚಿಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮನವರ ಸಾಹಿತ್ಯದಲ್ಲಿ ದೈವಭಕ್ತಿ ಮೇಲುನೋಟಕ್ಕೆ ಕಂಡುಬಂದರೂ, ಹೆಣ್ಣಿನ ಜೀವನದ ಒಳಗುದಿಗಳನ್ನು ಅಂತಸ್ಥವಾಗಿ ಸಾಹಿತ್ಯದಲ್ಲಿ ಬಿಂಬಿಸಿದ್ದಾರೆ. ಸ್ತ್ರೀ ಸಂಹಿತೆಗಳನ್ನು ಸ್ತ್ರೀಯರಿಗಾಗಿಯೇ ವಿಧಿಸಿದ ಕಟ್ಟಳೆಗಳನ್ನು ಮೌನವಾಗಿ ಒಪ್ಪಿಕೊಳ್ಳುವ ಧ್ವನಿ ಕಾಣುತ್ತೇವೆ. ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ, ಹೆಣ್ಣು ನಿರ್ವಹಿಸಬೇಕಾಗಿರುವ ನೀತಿಸಂಹಿತೆಗಳು ವ್ಯಕ್ತವಾಗಿದೆ. ಸತಿಧರ್ಮದಲ್ಲಿ ಪತಿ ಮತ್ತು ಕುಟುಂಬ ನಿರ್ವಹಣೆಯ ಅನಿವಾರ್ಯತೆಯನ್ನು ಈ ಯುಗದ ಸಾಹಿತ್ಯ ಕೇಂದ್ರ ಪ್ರಶ್ನೆಯಾಗಿ ಒಳಗೊಂಡಿದೆ.

ಪ್ರಸ್ತುತ, ಸಂದರ್ಭದಲ್ಲಿ ಪ್ರಗತಿಪರ ಪರಿಧಿಯೊಳಗೆ ಸಮಾಜದ ವಿಸ್ತರಣೆಗಳನ್ನು ಹೊಸ ಮೌಲ್ಯಗಳನ್ನು ತನ್ನೊಳಗೆ ಸೇರಿಸಿಕೊಳ್ಳುತ್ತಾ 'ಆಧುನಿಕ ಸಾಹಿತ್ಯ' ಎಂಬ ಹೆಸರು ನೀಡಿತು. ಪಾಶ್ಚಾತ್ಯರ ಆಗಮನದಿಂದ ಭಾರತೀಯ ಸಂಸ್ಕೃತಿಯ ಮೇಲೆ ಉಂಟಾಗುತ್ತಿದ್ದ ಪ್ರಭಾವ ಸ್ಪಷ್ಟವಾಗಿ ಗೋಚರಿಸುತ್ತದೆ. ಸಂಸ್ಕೃತಿಯ ಪಲ್ಲಟಗಳು ಸಹಜವಾಗಿ ಸಾಹಿತ್ಯಿಕ ಪರಿವರ್ತನೆಗೆ ಕಾರಣವಾಯಿತು. ಆ ಘಟ್ಟದ ಕತೆಗಳಲ್ಲಿ ನಿರಾಶ್ರಿತರ ಅಸಹಾಯಕತೆ, ಬಾಲ್ಯ ವಿವಾಹದ ತೊಡಕು. ಸಾಂಪ್ರದಾಯಿಕ ಬೇರುಗಳ ಸಡಿಲಿಕೆ, ವಿಧವಾ ವಿವಾಹದ ಹಂಬಲ, ಸ್ತ್ರೀಯರ ನಿಸ್ಸಹಾಯಕತೆ, ಪತಿಪ್ರೇಮದ ಆಕಾಂಕ್ಷೆ – ಈ ರೀತಿ ಕೌಟುಂಬಿಕ ವಲಯದಲ್ಲಷ್ಟೇ ಒದಗುವ ಸಮಸ್ಯೆಯ ಚಿತ್ರಣ ಮತ್ತು ಅದರಿಂದ ಹೊರಬರುವ ಸಾಧ್ಯತೆಗಳ ಹಂಬಲಗಳ ಕಥಾವಸ್ತುವನ್ನು ಕಾಣಬಹುದು. ಶಿಕ್ಷಣ ಕೊರತೆಯಿಂದ ಹೆಣ್ಣು ನಾಲ್ಕು ಗೋಡೆಗಳ ನಡುವೆ ಅಡುಗೆಮನೆಯ ಹುಡುಗಿ ಆಗಿದ್ದಳು. ಗಂಡನಿಂದ, ತವರಿನಿಂದ, ಬಹಿಷ್ಕೃತಗೊಂಡ ಸ್ತ್ರೀಯರನ್ನು ಸಮಾಜ ನಿಕೃಷ್ಟವಾಗಿ ಕಾಣುತ್ತಿತ್ತು. ಜೀವನೋಪಾಯಕ್ಕಾಗಿ ಯಾವುದೋ ಮಾರ್ಗ ತುಳಿಯಲ್ಪಟ್ಟ ಸ್ತ್ರೀಯರು ಅಪಾಯ ಸ್ಥಿತಿಗೆ ಗುರಿಯಾಗುತ್ತಿದ್ದರು. ಮಥುರಾನಗರದ ಸ್ತ್ರೀಯರು ಅನುಭವಿಸುತ್ತಿರುವ ಧಾರುಣತೆ ಇದಕ್ಕೊಂದು ಸಾಕ್ಷಿ. ಇಂತಹಾ ಸಾಮಾಜಿಕ ಮತ್ತು ಸ್ತ್ರೀ ಸಮಸ್ಯೆಗಳೇ ಆ ಕಾಲದ ಎಲ್ಲ ಸಣ್ಣ ಕಥಾವಸ್ತು ಆಗಿದೆ. ಸ್ತ್ರೀಯರ ಮಾನಸಿಕ ಒಳತೋಟಿಯನ್ನು ಒಂದೆಡೆ ದಾಖಲಿಸುತ್ತಾ ಅದರಿಂದ ಬಿಡುಗಡೆ ಹೊಂದುವ ಪ್ರಯತ್ನವೂ ಅದರ ಆಶಯಗಳಲ್ಲಿ ಅಭಿವ್ಯಕ್ತವಾಗಿದೆ. ಪುರುಷರ ವಿರುದ್ಧ ಪ್ರತೀಕಾರದ ಹಂಬಲ ಹೊತ್ತ ಕೆಲವು ಕತೆಗಳೂ ಇವೆ.

ಎಚ್.ವಿ.ಸಾವಿತ್ರಮ್ಮನವರ ಕತೆಗಳಲ್ಲಿ ಕುಟುಂಬ ಪ್ರಾಧಾನ್ಯತೆ ಮೇಲುನೋಟಕ್ಕೆ ಕಂಡಬಂದರೂ ಆಂತರಿಕವಾಗಿ ಮರುವಿವಾಹದಂತಹಾ ಕ್ರಾಂತಿಯ ಸೂಚನೆ ಆ ಕಾಲಕ್ಕಾಗಲೇ ಹೊಗೆಯಾಡುತ್ತಿತ್ತು. ಪ್ರಾಚೀನ ನವೀನ, ಪರಂಪರೆಯ ತಾಕಲಾಟ ಒಂದು ಬಗೆಯ ದ್ವಂದ್ವ ಮನಸ್ಥಿತಿ, ಕೆಲವು ಕತೆಗಳಲ್ಲಿ ವ್ಯಕ್ತವಾಗಿದೆ.

ತಿರುಮಲಾಂಬ: ಮಹಿಳಾ ಸಾಹಿತ್ಯ ಕ್ಷೇತ್ರದಲ್ಲಿ ಲೇಖಕಿಯಾಗಿ, ಸಂಶೋಧಕಿಯಾಗಿ, ಸಂಪಾದಕಿಯಾಗಿ, ಸ್ತ್ರೀವಾದಿ ಚಿಂತಕಿಯಾಗಿ ಮಹಿಳಾ ಚಳುವಳಿಯ ಹೋರಾಟಗಾರ್ತಿಯಾಗಿ, ಪ್ರಗತಿಪರ ಚಿಂತಕಿಯಾಗಿ ತಿರುಮಲಾಂಬ ಅವರು ವಹಿಸಿದ ಪಾತ್ರ ನಿರ್ವಹಿಸಿದ ಸಾಧನೆ ಹಿರಿದು. ವಿಧವೆಯರ ಪರಿತಾಪ ಸ್ಥಿತಿಗತಿಗಳನ್ನು ಗಮನಿಸಿ ವಿಧವಾತತ್ವ ಎಂಬ ಲೇಖನ, 'ನಭಾ' ಎಂಬ ಕಾದಂಬರಿ ರಚನೆ ಮಾತ್ರವಲ್ಲದೆ, ವಿಧವೆಯರ ಬಾಳಿಗೆ ಊರುಗೋಲಾಗಿ ನಿಂತು, ಜೀವನ ಮಾರ್ಗೋಪಾಯದ ರಹಸ್ಯವನ್ನು ತಿಳಿಸಿ, ಸಮಾಜ ಸುಧಾರಕಿಯಾಗಿ ಹೆಸರುವಾಸಿಯಾಗಿದ್ದಾರೆ. ವಿರಾಗಿಣಿ, ವಿವೇಕೋದಯ, ಸಂದೇಶ, ಹಿತೈಷಿಣಿ ಇವರ ಕೃತಿಗಳು. ತ್ರಿವೇಣಿಯವರ ಕತೆಗಳಲ್ಲಿ ಮಧ್ಯಮವರ್ಗದ ಸ್ತ್ರೀಯರ ಸಮಸ್ಯೆಗಳೇ ಕಥಾ ವಸ್ತುವಾಗಿದೆ. ಹರಯದ ಹೆಂಗಳೆಯರ ಸಂದಿಗ್ಧತೆ, ಸೆಳೆತಕ್ಕೆ ಒಳಗಾಗುವ, ಬದಲಾವಣೆಗಾಗಿ ಕಾಯುವ ಸಮಾಜವನ್ನು ನಿಯಂತ್ರಿಸುವ ಸಂಪ್ರದಾಯ, ಇಂತಹಾ ಬಿಕ್ಕಟ್ಟುಗಳಿಗೆ ಬಲಿಯಾಗುವ ಸ್ತ್ರೀ

ವರ್ಗ, ಕೌಟುಂಬಿಕ ಘರ್ಷಣೆಗಳನ್ನು ಸ್ತ್ರೀ ನೆಲೆಯಲ್ಲಿ ಗ್ರಹೀತವಾಗುವಂತೆ ಚಿತ್ರಿಸಿದ್ದಾರೆ. ಸ್ವಾತಂತ್ರ್ಯದ ಆಸೆ, ಅದನ್ನು ಪಡೆಯದ ಜೀವನವನ್ನು ಮಾಗಿಸಿಕೊಳ್ಳುವ ಅಸಹಾಯಕತೆ ಬಿಂಬಿತವಾಗಿದೆ.

ಪ್ರಗತಿಶೀಲ ಘಟ್ಟದ ಕಾಲಕ್ಕಾಗಲೇ ಬರೆಯಲಾರಂಭಿಸಿದ್ದ ತ್ರಿವೇಣಿಯವರ ಕತೆಗಳಲ್ಲಿ ಸ್ತ್ರೀ ಪುರುಷ ಸಂಬಂಧಗಳು, ಪುರುಷ ಪ್ರಾಧಾನ್ಯತೆಯಿಂದ ಕೌಟುಂಬಿಕವಾಗಿ ಸ್ತ್ರೀಯರು ಅನುಭವಿಸುತ್ತಿದ್ದ ಮೂಕವೇದನೆಗಳು ವ್ಯಕ್ತವಾಗಿವೆ. ಇವರ ಕತೆಗಳಲ್ಲಿ ಈವರೆಗೂ ಇದ್ದ ಮಡಿವಂತಿಕೆ ಮಾಯವಾಗಿ ಸ್ತ್ರೀ ಮನೋವಿಶ್ಲೇಷಣಾತ್ಮಕ ಎಳೆಗಳನ್ನು ಕಾಣಬಹುದು. ಮರಾಠಿಭಾಷಿಕರಾಗಿದ್ದರೂ ಜಯದೇವಿತಾಯಿ ಲಿಗಾಡೆ ಕನ್ನಡ ಭಾಷಾ ಹೋರಾಟಕ್ಕಾಗಿ ಸಲ್ಲಿಸಿದ, ಸಾಧಿಸಿದ ಸೇವೆ ಅಪಾರವಾದದ್ದು. ಅಲಂಕಾರ, ತಂತ್ರ ಇಲ್ಲವೇ ಹೇಳಬೇಕಾದ್ದನ್ನು ನೇರವಾಗಿ ಹೇಳಿರುವ ಕೊಡಗಿನ ಗೌರಮ್ಮನವರು ನೋವು ಅವಮಾನಗಳಿಗೆ ಕಾರಣವಾದ ಪುರುಷರನ್ನು ದ್ವೇಷಿಸುವುದಿಲ್ಲ. ಅವರನ್ನು ಯಥಾವತ್ತಾಗಿ ಬದಲಿಸುವ ಪ್ರಯತ್ನವಿದೆ. ಪ್ರಗತಿಶೀಲ ಬರಹಗಾರರಂತೆ ತೀವ್ರವಾಗಿ ಪರಿಣಾಮಕಾರಿಯಾಗಿ ಮೌಲ್ಯಗಳನ್ನು ದಾಖಲಿಸುತ್ತಾರೆ.

ಸಾರಾ ಅಬೂಬಕ್ಕರ್ ಅವರ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಕತೆಯಲ್ಲಿ ಸ್ತ್ರೀಯರ ಧಾರ್ಮಿಕ ನಿರ್ಬಂಧಗಳನ್ನು ಸ್ಪಷ್ಟವಾಗಿ ಬಿಡಿಬಿಡಿಯಾಗಿ ಚಿತ್ರಿಸುತ್ತಾ ಅಷ್ಟೇ ಸ್ಪಷ್ಟವಾಗಿ ಅದನ್ನು ಪ್ರತಿಭಟಿಸುವ ಆಶಯ ವ್ಯಕ್ತಪಡಿಸುತ್ತದೆ. ಇವರ 'ನಿಯಮ ನಿಯಮಗಳ ನಡುವೆ' ಕತೆಯಲ್ಲಿ ಪ್ರಕೃತಿ ನಿಯಮಗಳ ವಿರುದ್ಧ ಧಾರ್ಮಿಕ ನಿಯಮಗಳನ್ನು ಸೃಷ್ಟಿಸಿರುವ ಪುರುಷ ಸಮಾಜ, ಸ್ತ್ರೀ ಶೋಷಣೆ–ಧಾರ್ಮಿಕ ಹಕ್ಕು ಎಂದು ಕ್ರೂರವಾಗಿ ಶಾಸನ ಬರೆಯಲ್ಪಟ್ಟಿದೆ. ಅದಕ್ಕೆ ಬಲಿಪಶು ಆಗುವವಳು 'ಸ್ತ್ರೀ'. ಇಂತಹಾ ಧಾರ್ಮಿಕ ಉಪಾಯಗಳನ್ನು, ಸಂಚುಗಳನ್ನು ಸಾರಾ ಅವರು ಕತೆಗಳಲ್ಲಿ ಎತ್ತಿ ಹಿಡಿದು, ಪ್ರಶ್ನಿಸಿದ್ದಾರೆ. ಮಾನವೀಯತೆಯ ಕಳಚುವಿಕೆ, ಅಜ್ಞಾನ ಮೂಢನಂಬಿಕೆ ಚರಿತ್ರೆಯ ಅಪರಾಧಗಳು ಅದನ್ನು ಸಡಿಲಿಸುವ ಪ್ರಯತ್ನ ಇವರ ಬರವಣಿಗೆಯ ಆಶಯವಾಗಿದೆ.

ಪ್ರಗತಿಶೀಲ ಘಟ್ಟದಲ್ಲಾಗಲೇ ಸ್ತ್ರೀ ಶಿಕ್ಷಣ, ಉದ್ಯೋಗದ ಅನಿವಾರ್ಯತೆಯನ್ನು ಧ್ವನಿಸಿದ್ದಾರೆ. ನವ್ಯ ಪರಂಪರೆಯಲ್ಲಿ ವಿಜಯಾ ದಬ್ಬೆ, ಹೆಚ್.ಎಸ್. ಶ್ರೀಮತಿ, ಮಲ್ಲಿಕಾ ಘಂಟಿ, ಎಂ.ಆರ್. ಕಮಲ, ಬಿ.ಎನ್.ಸುಮಿತ್ರಾಬಾಯಿ, ಹೆಚ್.ಎಲ್.ಪುಷ್ಪಾ, ಲಲಿತಾ ಸಿದ್ಧಬಸವಯ್ಯ, ಸ್ತ್ರೀವಾದಿ ಲೇಖಕಿಯರನ್ನು ಗುರುತಿಸಬಹುದಾಗಿದೆ.

ರೂಢಿಗತವಾಗಿ ಬಂದ ಮಾದರಿಗಳು ಹೊರಳು ಮಾರ್ಗವನ್ನು ಹಿಡಿದು, ಆಧುನಿಕ ಸಾಹಿತ್ಯ ಪಾಶ್ಚಾತ್ಯೀಕರಣದ ಪ್ರಭಾವವನ್ನು ಸ್ವೀಕರಿಸಿದರು. ಜಾನಪದ ಮಹಿಳೆಯರಿಗೆ ಕಾವ್ಯ ವಸ್ತು ಒಂದು ಸಮಸ್ಯೆಯೇ ಆಗಿರಲಿಲ್ಲ. ಆಧುನಿಕ ಸಾಹಿತಿಗೆ ವಸ್ತುವಿನ ಆಯ್ಕೆ, ತರ್ಕಬದ್ಧ ಅಥವಾ ನೈತಿಕ ಸಾಮಾಜಿಕ ಜವಾಬ್ದಾರಿಯೇ ಆಗಿರುತ್ತದೆ. ಹೀಗಾಗಿ ಆಧುನಿಕ ಸಾಹಿತ್ಯ ವಸ್ತುನಿಷ್ಠ ಪ್ರಾಧಾನ್ಯತೆ ಪಡೆದಿದೆ. ಸಾಮಾಜಿಕ ಪ್ರಜ್ಞೆ ಹೊಂದಿರದ ಸಾಹಿತ್ಯ ಮಹತ್ತರವಾದ

ಏನನ್ನೂ ಹೇಳಲಾರದು. ಸ್ತ್ರೀಭಾಷೆ ಅವಳು ಮುಚ್ಚಿಡ ಬಯಸುವಂತಹಾ ಎಲ್ಲವನ್ನೂ ಬೆಳಕಿಗೆ ತರುತ್ತದೆ. ಜಾನಪದ ಮಹಿಳೆಗೆ ವ್ಯಂಗ್ಯ, ತರ್ಕ ತಿಳಿದಿರಲಿಲ್ಲ. ತಾನು ಕಂಡ ಬದುಕನ್ನು ಯಥಾವತ್ತಾಗಿ ವಿವರಿಸಿದಳು. ಆಧುನಿಕ ಮಹಿಳೆ, ಅಮೂರ್ತವಾದ ವಸ್ತು, ಚಿಂತನೆಗಳನ್ನು ವಿಸ್ತರಿಸುವ ವೈಚಾರಿಕ ಪ್ರಜ್ಞೆ ಹೊಂದಿದ್ದಾಳೆ. ಮಹಿಳಾ ಸಾಹಿತ್ಯ ಕಾವ್ಯಾತ್ಮಕತೆಯ ಜೊತೆಗೆ ತೀವ್ರತೆಯನ್ನೂ ಹೊಂದಿದೆ. 'ಉತ್ತಮ ಸಾಹಿತ್ಯ ಎಂದರೆ, ಅದರ ಬೆಳವಣಿಗೆಯೊಂದಿಗೆ ನಮ್ಮ ಬೆಳವಣಿಗೆಯನ್ನು ಒಳಗೊಂಡಿರುವುದು' ಹೇಮಾ ಪಟ್ಟಣಶೆಟ್ಟಿಯವರ ಈ ಮಾತು ಸಾಹಿತ್ಯ ಕೃಷಿ ಎಂದರೆ 'ಬೌದ್ಧಿಕ ಪ್ರಪಂಚದ ವಿಸ್ತರಣೆ' ಎಂಬ ಅರ್ಥವನ್ನು ಸ್ಪಷ್ಟೀಕರಿಸುತ್ತದೆ. ಅಂತಿಮವಾಗಿ ಸಾಹಿತ್ಯ ಲೋಕ ವಿವರಣೆಯಾಗುತ್ತಾ, ಮಾನವ ವಿಕಾಸದ ಮಾರ್ಗವೇ ಆಗಿದೆ. ಸ್ತ್ರೀ ಅಭಿವ್ಯಕ್ತಿಯಲ್ಲಿ ಬದುಕಿನ ಹೋರಾಟದೊಂದಿಗೆ ಸ್ವಂತದ ಹುಡುಕಾಟವೂ ಇದೆ. 'ಆಧುನಿಕ ಸಂದರ್ಭದಲ್ಲಿ ಸ್ತ್ರೀ ಸ್ವಕೇಂದ್ರಿತವಾದವಳು, ಪುರುಷ ನಿರ್ಮಿತಿ ಅಲ್ಲ' ಎಂದು ಸ್ವಘೋಷಣೆ ಮೂಡಿಸಿದ್ದಾಳೆ, ಸಾಧಿಸಿದ್ದಾಳೆ.

ನಮ್ಮ ಸಮಾಜ ಮಹಿಳಾ ಸಬಲೀಕರಣದ ಬಗ್ಗೆ ಭಾಷಣ ಮಾಡುತ್ತಾ, ಅಂಕಣ ಬರೆಯುತ್ತಾ ಪುಸ್ತಕ ಓದುತ್ತಾ ಇರುತ್ತದೆ. ಮಹಿಳೆಯನ್ನು ದೇವತೆಗೆ ಹೋಲಿಸುತ್ತಾ ಅತ್ಯಾಚಾರ ಎಸಗುತ್ತಿರುವುದು ವಿಪರ್ಯಾಸ. ಪುರಾಣದ ಕತೆಗಳಲ್ಲಿ ಸ್ತ್ರೀ ವೇದನೆ ಹೆಪ್ಪುಗಟ್ಟಿದೆ. ಆ ಕತೆಗಳನ್ನು ಸಂಸ್ಕೃತಿ ಎಂದು ಪ್ರತಿಬಿಂಬಿಸಲಾಗಿದೆ. ಆಧುನಿಕ ಸಂದರ್ಭ, ಪೌರಾಣಿಕ ಮೌಲ್ಯಗಳನ್ನು ಮರುಚಿಂತನೆ ನಡೆಸಿ ಸಾಹಿತ್ಯದ ಪುನರ್ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದೆ. ದುರಂತವೆಂದರೆ ಇಂತಹಾ ಹೊಸ ಮಾದರಿ ಮೌಲ್ಯಗಳು ಜನಜನಿತವಾಗದೇ ಉಳಿದುಬಿಟ್ಟಿದೆ. ಸಾಮಾನ್ಯ ಮತ್ತು ಮಧ್ಯಮವರ್ಗದ ಕುಟುಂಬಗಳಲ್ಲಿ ನೈತಿಕ ಪಾಠಗಳನ್ನು ಎಳೆವೆಯಿಂದಲೇ ಹೆಣ್ಣುಮಕ್ಕಳಿಗೆ ಹೊರಿಸಲಾಗುತ್ತಿದೆ. ಅಂಗಾಂಗಗಳಲ್ಲಿ ಶೀಲವನ್ನು ಕಾಪಾಡಿಕೊಳ್ಳುವುದೇ ಸ್ತ್ರೀ ಕರ್ತವ್ಯ ಎಂಬ ಮಹಾನ್ ಪಾಠವನ್ನು ಎಳವೆಯಿಂದಲೇ ಪರಿಚಯಿಸಲಾಗುತ್ತಿದೆ. ಕ್ರೂರ ಸಮಾಜದಲ್ಲಿ ತೆಹಲ್ಕಾದಂತಹಾ ಪತ್ರಿಕೆಯ ಸಂಪಾದಕ ಉನ್ನತ ವ್ಯಕ್ತಿಗಳೂ ಅತ್ಯಾಚಾರ ಎಸಗುವುದರಲ್ಲಿ ಹೇಸುವುದಿಲ್ಲ. ಶುಶ್ರೂಷಕಿ ಅರುಣಾ ಶಾನಬಾಗ್ ನಲವತ್ತು ವರ್ಷಗಳ ಕಾಲ ದುರಂತ ಸ್ಥಿತಿ ಅನುಭವಿಸಿದರೂ ದಯಾಮರಣ ಕೂಡ ದಯಪಾಲಿಸಲಿಲ್ಲ.

ಪ್ರಸ್ತುತ ಸಂದರ್ಭ ನವನಾಗರಿಕತೆ ಉನ್ನತ ಶೃಂಗಕ್ಕೇರಿದ್ದರೂ ಲಿಂಗ ಅಸಮಾನತೆಯ ಅನಿಷ್ಟ ಸಮಸ್ಯೆ ರೋಗದಂತೆ ಕಾಡುತ್ತಿದೆ. ಸಾಹಿತ್ಯೇತರ ಸವಾಲುಗಳನ್ನು ಸಾಹಿತ್ಯದ ಮೂಲಕ ವಿವರಿಸುವ ಮಹಿಳೆ ತನ್ನ ಅಸ್ತಿತ್ವವಾಗಿ ಪ್ರಯತ್ನಿಸುತ್ತಿದ್ದಾಳೆ. ಮಹಿಳೆಗೆ ಅವಳ ಭಾವನೆಗೆ, ಅಭಿಪ್ರಾಯಗಳಿಗೆ, ಮಾತಿಗೆ, ಶ್ರಮಕ್ಕೆ ಬೆಲೆ ಕೊಡದ ಪುರುಷ, ಹೆಣ್ಣನ್ನು ಮೂಲೆಗುಂಪಾಗಿಸಿದ್ದಾನೆ. ಎಲ್ಲ ಕಾಲಕ್ಕೂ, ಎಲ್ಲ ದೇಶದಲ್ಲೂ ಶೋಷಿತಳಾದವಳು ಹೆಣ್ಣು. ಹೆಣ್ಣು ಉಪ ಸೃಷ್ಟಿ ಮಾತ್ರ, ಪುರುಷನಿಗಾಗಿ ಸೃಷ್ಟಿಯಾದ ಉಪವಸ್ತು ಎಂದು ಕಡೆಗಣಿಸಲ್ಪಟ್ಟಿದ್ದಾಳೆ. 'ಪುರುಷ ಬ್ರೆಡ್ ವಿನ್ನರ್, ಸ್ತ್ರೀ ಬ್ರೆಡ್ ಮೇಕರ್ ಮಾತ್ರ'. ಹಬ್ಬ, ಆಚರಣೆ, ಮದುವೆ ಮುಖ್ಯ ಸಂದರ್ಭಗಳಲ್ಲಿ ಉಪವಾಸ ವ್ರತಕ್ಕೆ ಪ್ರಚೋದಿಸಿ 'ಮೌನ'ಕ್ಕೆ ತಳ್ಳುತ್ತಿದ್ದರು. ಅಸಮಾನತೆಯನ್ನು

ಪ್ರಶ್ನಾಪೂರ್ವಕವಾಗಿ ಆಚರಿಸಲಾಗಿದೆ. ಮನುಧರ್ಮ ಕಾಲದಿಂದಲೂ ಪುರುಷನ ಆಶ್ರಯದಲ್ಲಿ ಬಂಧಿಸಲ್ಪಟ್ಟಿದ್ದಾಳೆ. ಭ್ರಮಾತ್ಮಕ ಸನ್ನಿವೇಷ ನಿರ್ಮಿಸಿದ್ದಾನೆ. ಈ ತಾರತಮ್ಯ ಪುರುಷ ಸೃಷ್ಟಿಯೇ ಹೊರತು ನಿಸರ್ಗಸೃಷ್ಟಿ ಅಲ್ಲ. ಬೇರೆ ಯಾವ ಪ್ರಾಣಿ ಪಕ್ಷಿಗಳೂ ಈ ರೀತಿ ಪ್ರಕೃತಿಯಲ್ಲಿ ವರ್ತಿಸುತ್ತಿಲ್ಲ. ಪ್ರಪಂಚದ ಈವರೆಗಿನ ಎಲ್ಲ ವ್ಯಾಖ್ಯಾನಗಳಲ್ಲಿ ಸಿದ್ಧಾಂತಗಳಲ್ಲಿ, ಶಾಸ್ತ್ರಗಳಲ್ಲಿ 'ಮಾನವ-ಮನುಷ್ಯ' ಎಂಬ ಹೇಳಿಕೆಗಳೇ ವರ್ಣಿತವಾಗಿದೆ. ಈ ಪದದಲ್ಲೇ ಸ್ತ್ರೀ ಅಗೋಚರವಾಗಿದ್ದಾಳೆ. ಬೈಗುಳಗಳಿಗೆ, ಅಪನಂಬಿಕೆ, ಅಪಶಕುನಗಳಿಗೆ ಹೆಣ್ಣನ್ನು ಕೇಂದ್ರವಾಗಿಸಿಕೊಳ್ಳಲಾಗಿದೆ. ಪುರುಷ ವೀರತ್ವದ, ಸಾಹಸದ, ಬುದ್ಧಿ ಲಕ್ಷಣಗಳನ್ನು ತಾನು ಧರಿಸಿ, ಲಜ್ಜೆ, ಭಯಭೀತೆ, ಜಾಳುತನ ಹೆಣ್ಣಿಗೆ ಆರೋಪಿಸಿದ್ದಾನೆ. ಇದು ಅದಲು ಬದಲಾದರೆ ದೋಷ ಎಂದಿದ್ದಾನೆ.

ಸ್ತ್ರೀ ಪರಿಕಲ್ಪನಾಧಾರಿತವಾದ ಇತ್ತೀಚಿಗೆ ಒಂದು ದೊಡ್ಡ ಅಲೆಯನ್ನೇ ಸೃಷ್ಟಿಸಿದೆ. ಸ್ತ್ರೀ ಪರ ಸೈದ್ಧಾಂತಿಕ ವಾದವನ್ನು ವಿಮರ್ಶಕರು ಪ್ರಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಸ್ತ್ರೀ ವಾದದ ಪ್ರಕಾರ ಮನುಷ್ಯ 'ದ್ವಿಲಿಂಗಿ' ಸ್ತ್ರೀ – ಪುರುಷ ಲಿಂಗತಾರಮ್ಯ ಸಲ್ಲದು. ಪುರುಷನಾದವನು ಹೆಣ್ಣನ್ನು ತನಗಿಂತ ಎಲ್ಲದರಲ್ಲೂ ಕೆಳಗಿನವಳು ಕೀಳಾದವಳು ಎಂದು ಭಾವಿಸಿದ್ದಾನೆ. ಈ ಅಹಂ 85%ರಷ್ಟು ಪುರುಷರಲ್ಲಿ, ವಿದ್ಯಾವಂತ ಪುರುಷರಲ್ಲೂ ಅಡಗಿರುತ್ತದೆ. ಬಲಕ್ಕಿಂತ ಮನೋಬಲ ಮುಖ್ಯವೆಂದು ಅವರು ಭಾವಿಸಿಲ್ಲ.

ಸ್ತ್ರೀ ಪರಿಕಲ್ಪನಾಧಾರಿತ ವಿಮರ್ಶೆಯ ಮೂಲಕ ಬೃಹತ್ ಚರ್ಚೆ ಎದ್ದವು. ಹೀಗೆ ಮಹಿಳೆಯನ್ನು ಅರ್ಥೈಸಿಕೊಳ್ಳುವ, ವ್ಯಾಖ್ಯಾನಿಸುವ ಅರ್ಥಪೂರ್ಣ ಪ್ರಯತ್ನ ನಡೆದಿದೆ. 1929ರಲ್ಲೇ ವರ್ಜೀನಿಯಾ ವೂಲ್ಫ್ 'ಎ ರೂಮ್ ಆಫ್ ಒನ್ಸ್ ಒನ್' ಕೃತಿಯಲ್ಲಿ ಮಹಿಳೆಯ ಕಟುಸತ್ಯಗಳನ್ನು ದಿಟ್ಟವಾಗಿ ಹೇಳಿಕೊಂಡಿದ್ದಾಳೆ.

ಅಲಿಸನ್ ಜೌಗರ್, ಜರ್‌ಮೇನ್ ಗ್ರಿಯಲ್, ಕೇಟ್ ಮಿಲ್ಲೆಟ್ ಸ್ತ್ರೀ ವಾದವನ್ನು ಬೆಳೆಸಿದ ಪ್ರಮುಖ ಜಗದ್ವಿಖ್ಯಾತ ಲೇಖಕಿಯರು. ಅಮೃತಾ ಪ್ರೀತಮ್, ಕಮಲಾದಾಸ್, ಶಶಿದೇಶಪಾಂಡೆ ಭಾರತೀಯ ಪ್ರಸಿದ್ಧ ಸಾಹಿತಿಗಳು–ಸ್ತ್ರೀ ಆತ್ಮ ವಿಶ್ಲೇಷಣೆ ಮೂಲಕ ತಮ್ಮತನ ತೋರಿಸಿಕೊಂಡಿದ್ದಾರೆ.

ಸೃಷ್ಟಿಯ ಪ್ರತಿ ತುಣುಕಿಗೂ ಸ್ವಂತ ಗುಣಸ್ವಭಾವವಿದೆ. ಈ ತಾತ್ವಿಕತೆ ಸ್ತ್ರೀ ಸ್ವಭಾವಕ್ಕೂ ಅನ್ವಯಿಸುತ್ತದೆ. ಸ್ತ್ರೀ ಸುಧಾರಣೆಯ ಮೂಲಕ ಸಾಮಾಜಿಕ ಪರಿವರ್ತನೆ ಸಾಧ್ಯ ಎಂದು ಆಧುನಿಕ ಮಹಿಳಾ ಲೇಖಕಿಯರ ವಾದ. ಸಾಹಿತ್ಯ ಕೃತಿಗಳನ್ನು ಓದುವ, ಗ್ರಹಿಸುವ ವಿಧಾನದಲ್ಲೇ ನಮ್ಮ ಬದುಕಿನ ಪ್ರಕ್ರಿಯೆಗಳು ಅಡಗಿವೆ. ಸಾಹಿತ್ಯದಲ್ಲಿ, ನಮ್ಮ ವರ್ತನೆಗಳ ಪುನರಾವರ್ತನೆ ಆಗುತ್ತದೆ. ಸಣ್ಣ ಕತೆಗಳ ಮಟ್ಟಿಗಂತೂ ಎಷ್ಟೋ ಸನ್ನಿವೇಷ ಸಂದರ್ಭಗಳು, ನಮ್ಮ ಜೀವನದ ಕತೆಗಳಂತೆ ಬೆಸೆದುಹೋಗಿದೆ. ಅಲ್ಲಿನ ಪಾತ್ರಗಳಲ್ಲಿ ನಮ್ಮ ಪ್ರತಿಬಿಂಬ ಇಣುಕುತ್ತದೆ. ನಮ್ಮ ಬದುಕಿನ ಅನ್ವೇಷಣೆಯ ಮಾರ್ಗ ಹೊಳೆಯುವಂತೆ ಮಾಡುತ್ತದೆ. ಸ್ತ್ರೀ ಸಾಹಿತ್ಯದ ಅಧ್ಯಯನ ಸ್ತ್ರೀ ಮನೋ ವಿಮರ್ಶೆಯೂ ಆಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ವಾದಿ ಬೆಳವಣಿಗೆಯನ್ನು ಅರಿಯುವುದು ಸಂಶೋಧನಾ ಮಹತ್ವ ಪಡೆದುಕೊಂಡಿದೆ. ಸಿಮೋನ್ ದಿ ಬೋವಾ ಹೇಳುವಂತೆ ಜಗತ್ತನ್ನು ಗಂಡು ತನಗೆ ಬೇಕಾದಂತೆ ಸೃಷ್ಟಿಸಿಕೊಂಡಿದ್ದಾನೆ. ಪುರುಷ ದೃಷ್ಟಿಕೋನದಲ್ಲಿ ಇಡೀ ಜಗತ್ತನ್ನು ನಿಯಂತ್ರಿಸುತ್ತಿದೆ. ಸ್ತ್ರೀವಾದಿ ಚಿಂತನೆ ಈ ನೆಲೆಯಿಂದಲೇ ಆರಂಭವಾಗಬೇಕಾಗಿದೆ. ಪುರುಷ ಕಂಡುಕೊಂಡ ನೆಲೆಯನ್ನು ಅವರ ಮೂಲದಿಂದಲೇ ಮುರಿಯಬೇಕಾಗಿದೆ. ಇದು ಮಹಿಳೆಗೆ ಸ್ತ್ರೀತ್ವದ ಹುಡುಕಾಟದ ಪ್ರಯತ್ನವೂ ಆಗಿದೆ.

ಒತ್ತಡ ದಬ್ಬಾಳಿಕೆಯಿಂದ ಮುಕ್ತವಾದ ಬದುಕನ್ನು ಹೊಂದುವ ಅವಕಾಶ ಸ್ತ್ರೀ ವಿಮೋಚನಾವಾದಿ ಮಾರ್ಗರೇಟ್ ಪುಲ್ಲರ್ ವಾದಿಸಿದಳು. ಸ್ತ್ರೀ ಪ್ರಜ್ಞೆ (ವುಮೆನ್ ಕಾನ್ಷಿಯಸ್, ಸಮಗ್ರ ಹುಡುಕಾಟ, (ಸರ್ಚ್ ಆಫ್ ವುಮೆನ್ನೆಸ್) ತನ್ನತನದ ಸಾಕ್ಷಾತ್ಕಾರ (ಡಿಸ್ಕವರಿ ಆಫ್ ಸೆಲ್ಫ್) ಅಭಿವ್ಯಕ್ತಿತ್ವ, ಸ್ತ್ರೀತ್ವ ಫೆಮಿನಿಸಮ್, ಸ್ತ್ರೀವಾದಿ ಚಿಂತನೆಯ ಪ್ರಮುಖ ಪ್ರಣಾಳಿಕೆಗಳು.

ಮಹಿಳೆಯ ಬಗ್ಗೆ ಮಹಿಳೆ ಮಾತನಾಡಲು ತೊಡಗಿದಾಗ ಉದ್ಭವಿಸುವ ಸಂವೇದನೆಗಳು ಸುಪ್ತತೆ ಮುರಿದು ಬಹಿರಂಗ ಪ್ರಪಂಚದಲ್ಲಿ ಮೈದಳೆದಿದೆ. ಈ ಹಿಂದೆ ಖಾಲಿತನಗಳಲ್ಲೇ ಸಂದುಹೋದ ಮೂಕಭಾವಗಳಿಗೆ ದಿವ್ಯಘೋಷವಾಗಿ ಮಹಿಳಾ ಸಾಹಿತ್ಯ ಸ್ಫುರಿತವಾಗುತ್ತಿದೆ.



ಅಧ್ಯಾಯ – 5

ಪೀಠಿಕೆ

ಬಿ.ಟಿ.ಜಾಹ್ನವಿಯರ ಸಣ್ಣಕತೆಗಳು : ವಸ್ತು, ವಿನ್ಯಾಸ; ಸ್ತ್ರೀ ಸಂವೇದನೆಗಳ ನಿರೀಕ್ಷೆ

ಪ್ರಪಂಚದ ತಲ್ಲಣಗಳು ಸಮಸ್ಯೀಕರಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಅವುಗಳಿಗೆ ಮುಖಾಮುಖಿಯಾಗುತ್ತಾ ಸೃಜನಶೀಲ ಪ್ರಪಂಚದಲ್ಲಿ ಅದಕ್ಕೆ ಪ್ರತಿಉತ್ತರ ನೀಡುವ ಕೆಲವೇ ಕೆಲವು ಕತೆಗಾರ್ತಿಯರಲ್ಲಿ ಬಿ.ಟಿ.ಜಾಹ್ನವಿ ಪ್ರಧಾನವಾಗಿ ನಿಲ್ಲುತ್ತಾರೆ. ಒಂದೆರಡು ಕಥಾ ಸಂಕಲನಗಳಿಂದ ಕನ್ನಡ ಸಾಹಿತ್ಯಕ್ಕೆ ಬೆರಗಾಗುವಂತಹಾ ಪ್ರಶ್ನೆಗಳನ್ನು ಕೇಳಿದ್ದಾರೆ. ಮಹಿಳಾ ಸಾಹಿತ್ಯದ ಹೊಸ ಸಾಧ್ಯತೆಯನ್ನು ದಿಟ್ಟ ಬರಹಗಳ ಮೂಲಕ ನಿರೂಪಿಸಿದ್ದಾರೆ. ಕತೆಯ ಪುಟ್ಟ ಆವರಣದಲ್ಲಿ ದಟ್ಟ ಅನುಭವವನ್ನು ಕಟ್ಟಿ ಕೊಡುತ್ತಾ ಸ್ತ್ರೀ ಸಂವೇದನೆಯ ಪಾರಮ್ಯಗಳನ್ನು ಪ್ರತಿಪಾದಿಸುತ್ತಾರೆ.

'ನಿಜವಾಗಿಯೂ 'ಸ್ತ್ರೀ' ಎಂಬುದಿಲ್ಲ. ಅವಳನ್ನು ಪುರುಷ ಸಮಾಜ ಆಗುಮಾಡಿದೆ.' ಸಿಮೋನ್ ದಿ ಬೋವಾ.

ಪುರುಷ ಅಹಮಿಕೆಯಲ್ಲಿ ಸ್ತ್ರೀ ಸಹಜತೆಗಳು ಕಳೆದುಹೋಗಿದೆ. ಅಲಿಖಿತ ನೀತಿಸಂಹಿತೆಗಳ ಒತ್ತಡಕ್ಕೆ ಸಿಲುಕಿ ತನ್ನತನ, ತನ್ನ ಮನಸ್ಸಿನ ಮೂಲ ಆಶಯಗಳನ್ನು ಸುಪ್ತತೆಗೆ ತಳ್ಳಿಬಿಡುತ್ತಿದ್ದಾಳೆ. ಅದುಮಿಟ್ಟ ಮೂಲಭಾವಗಳು ಎಲ್ಲೋ ಹೆಡೆಯಾಡುತ್ತಲೇ ಇರುತ್ತದೆ. ವರ್ತನಶೀಲ ಬದುಕಿನಲ್ಲಿ ಸಾಧ್ಯವಾಗದ ಆಶಯಗಳು ಸೃಜನಶೀಲ ಸಾಹಿತ್ಯದಲ್ಲಿ ಅನಾವರಣಗೊಳ್ಳುತ್ತದೆ.

ಹೆಣ್ಣಿನ ಗುಣ, ಮಾತು ಸ್ವಭಾವ, ಕೆಲಸ, ಆಸೆ, ಕಡೆಗೆ ಅವಳ ಭಾವನೆಗಳನ್ನೂ ನಿಗಧಿತಗೊಳಿಸಲಾಗಿದೆ. ಇಂತಹ ಒತ್ತಡಗಳಿಂದ ಬಿಡುಗಡೆ ಬಯಸುವ ಸ್ತ್ರೀ ಸಂವೇದನೆಗಳು ಆಧುನಿಕ ಸಂದರ್ಭದಲ್ಲಿ ವಿಶಿಷ್ಟ ಮಾರ್ಗಗಳನ್ನು ಕಂಡುಕೊಂಡಿವೆ. ನವ್ಯ ಪರಂಪರೆಯಲ್ಲಿ ಬಿ.ಟಿ.ಜಾಹ್ನವಿಯವರ ಕತೆಗಳು ದಿಟ್ಟತನ ಮತ್ತು ಮುಕ್ತಅಭಿವ್ಯಕ್ತಿ ಗುಣಗಳಿಂದ ಕನ್ನಡ ಸಾಹಿತ್ಯವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಪರಿಭಾವಿಸಲಾಗಿದೆ.

ಹೆಣ್ಣಿನ ಮಿತಿಗಳನ್ನು ದಾಟಿ, ಪ್ರಶ್ನಿಸುವ ಇವರ ಧ್ವನಿಶಕ್ತಿಯಲ್ಲಿ ಮೂರನೇ ಪರಂಪರೆಯ ಹಿಡಿತದಲ್ಲೇ ಉಳಿದುಬಿಡುತ್ತಾರೆ. ಜೀವನವನ್ನು ತೀವ್ರವಾಗಿ ಅನುಭವಿಸುವ ಅಷ್ಟೇ ತೀವ್ರವಾಗಿ ಅದನ್ನು ಅರ್ಥೈಸಿಕೊಳ್ಳುವ ಲೇಖನಿಯಿಂದ ಮಾತ್ರ 'ಆಧುನಿಕತೆ' ಸಾಹಿತ್ಯ ರೂಪದಲ್ಲಿ ಹುಟ್ಟುತ್ತದೆ. ವೈಚಾರಿಕ ಶಕ್ತಿಯ ಬಳಕೆಯಲ್ಲಿ ಮತ್ತು ಪರಿಣಾಮದಲ್ಲಿ ಆಧುನಿಕತೆಯ ನಿಜವಾದ ಅರ್ಥವಿದೆ. ಅದೊಂದು 'ದಿಟದ ದರ್ಶನ'. ಹತ್ತನೇ ಶತಮಾನದವನಾದರೂ 'ಕುಲಂ ಕುಲಮಲ್ತು; ಛಲಂ ಕುಲಂ; ಮಾನವ ಕುಲಂತಾನೊಂದೆ ಛಲಂ' ಎಂದ ಪಂಪನ

ನುಡಿಯಲ್ಲಿರುವ ಆದರ್ಶಗಳೇ ಆಧುನಿಕತೆ. ವೈಚಾರಿಕತೆಗಳ ಅಬ್ಬರದಲ್ಲಿ ಸಂವೇದನೆ ಜಡಗೊಳ್ಳುವ ಅಪಾಯವಿರುತ್ತವೆ. ಸ್ತ್ರೀ ಸಂವೇದನೆಗಳನ್ನು ಆಧುನಿಕ ವೈಚಾರಿಕ ಪ್ರಶ್ನೆಯೊಂದಿಗೆ ಕಟ್ಟಿಕೊಡುವ ತಾಳ್ಮೆ ಜಾಹ್ನವಿಯವರ ಕತೆಗಳಿಗಿದೆ. ಪಾರಂಪರಿಕ ನಂಬಿಕೆಗಳನ್ನು ಮುಗ್ಧತೆಯಿಂದ ಅಂಟಿಕೊಳ್ಳುವುದರಲ್ಲೇ ಎಷ್ಟೋ ಸ್ತ್ರೀ ಸಾಹಿತ್ಯ ಮೃತಳೆದಿದೆ. ಆದರೆ ಜಾಹ್ನವಿಯವರ ಕತೆಗಳು ಅರಿವಿನ ಸ್ಫೋಟಕ ಶಕ್ತಿಯನ್ನು ಅಷ್ಟೇ ದಿಟ್ಟವಾಗಿ ನೇರಭಾಷೆಯಲ್ಲಿ ಅಭಿವ್ಯಕ್ತಿಸುತ್ತದೆ. ರೂಢಿಗತವಾದ ಪದ್ಧತಿಗಳನ್ನು ಒಪ್ಪಿತವಾದ ನಿಯಮಗಳನ್ನು ಮರುಚಿಂತನೆಗೆ ಆಹ್ವಾನಿಸುತ್ತದೆ. ಕತೆಗಾತಿ ತನ್ನದೇ ಆದ ಅತಿ ಆಧುನಿಕ ಎನ್ನಬಹುದಾದ ವರ್ತುಲವೊಂದನ್ನು ನಿರ್ಮಿತಿ ಮಾಡಿಕೊಂಡಿದ್ದಾರೆ. ಸಮಾಜದ ಭ್ರಮೆಗಳನ್ನು ಅನಿಷ್ಟ ಸಂಕಥನವನ್ನು ಒಡೆಯಲು ಸ್ತ್ರೀ ಪಾತ್ರಗಳನ್ನೇ ಆಯ್ಕೆ ಮಾಡಿಕೊಂಡಿರುವುದು ಇನ್ನೊಂದು ವೈಶಿಷ್ಟ್ಯ. ಹೆಣ್ಣಿಗೆ, ದೇಹಕ್ಕೆ ಮೀರಿದ ಒಂದು ಅಸ್ತಿತ್ವವಿದೆ ಎಂದು ಇವರ ಕತೆಗಳು ಸಾಬೀತುಪಡಿಸುತ್ತವೆ.

'ಆಧುನಿಕತೆ' ವ್ಯಾಖ್ಯಾನವನ್ನು ಭೌತಿಕ ವಸ್ತುಗಳಿಂದ ನಿರ್ಧರಿಸುವುದಲ್ಲ; ಭೋಗ ಸಂಸ್ಕೃತಿಯನ್ನೇ ಬದುಕಿನ ಮಾನದಂಡವಾಗಿ ಸ್ವೀಕರಿಸುವುದಲ್ಲ. ಜೀವನಶೈಲಿಯ ಪಲ್ಲಟಗಳಲ್ಲಿ ಆಧುನಿಕತೆಯ ಮೂಲ ಅಡಗಿಲ್ಲ, ಬದಲಾಗಿ ಜೀವನ ಮೌಲ್ಯಗಳನ್ನು ಕಂಡುಕೊಳ್ಳುವ ವಿಧಾನದಲ್ಲಿ ಆಧುನಿಕತೆಯ ರಹಸ್ಯವಿದೆ. ಜೀಔನದ ನಿಜವಾದ ಮೌಲ್ಯಗಳು ಬದಲಾಗುವುದೇ ಇಲ್ಲ, ಅದರ ಕ್ರಮಗಳಲ್ಲಿ ಮಾತ್ರ ಆಧುನಿಕತೆಯ ತಂತುಗಳನ್ನು ಹುಡುಕಬೇಕು. ಜಾಹ್ನವಿ ಅಂತಹ ಪ್ರಯತ್ನ ಮಾಡುತ್ತಾರೆ. ರೂಢಿಗತ ವ್ಯವಸ್ಥೆಯ ವಿರುದ್ಧ ಸೆಣಸುವ ಪಾತ್ರಗಳನ್ನು ಸೃಷ್ಟಿಸುವ ಇವರ ಕತೆಗಳಲ್ಲಿ ಆಧುನಿಕತೆಯ ದೃಷ್ಟಿ-ಸೃಷ್ಟಿ ಇದೆ. ಜೀವನದ ಒಳಗಿನಿಂದಲೇ ಹುಟ್ಟುವ ಆಧುನಿಕ ಪ್ರಜ್ಞೆ ಜೀವನವನ್ನೇ ಬದಲಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಜಾಹ್ನವಿಯವರ ಕತೆಗಳು ಯಾವುದೇ ಪಂಥಕ್ಕೆ ಅಂಟಿಕೊಳ್ಳದೆ ಬಿಡುಗಡೆಯ ಭಾವವನ್ನು ನೀಡುವ ದಿಟ್ಟತನವನ್ನು ಮಾತ್ರ ಆಹ್ವಾನಿಸುತ್ತದೆ. ಇತರ ಕತೆಗಳಿಗೆ ವಿಮರ್ಶೆಯ ಮಾನದಂಡ ಅನ್ವಯವಾಗುವುದಿಲ್ಲ. ಸಾಹಿತ್ಯ ಮತ್ತು ವಿಮರ್ಶೆಗಳು ಸದಾಕಾಲಕ್ಕೂ ಯಾವುದೋ ಕಲ್ಪಕತೆಯನ್ನು ಕಟ್ಟಿಕೊಡುತ್ತದೆ. ಅದನ್ನೇ ತಮ್ಮ ಮುಖ್ಯ ಜವಾಬ್ದಾರಿ ಎಂದು ನಂಬಿಕೊಂಡಿರುತ್ತದೆ. ಆದರೆ ಜಾಹ್ನವಿಯವರ ಕತೆಗಳಿಗೆ ಅನಿಸಿಕೆ ಬರೆದಿರುವ ಎಚ್.ಎಸ್. ರಾಘವೇಂದ್ರರಾವ್ ಅವರು 21ನೇ ಶತಮಾನದ ನಿಜವಾದ ತಲ್ಲಣಗಳನ್ನು ಅವು ಬರುವುದಕ್ಕಿಂತ ಮೊದಲೇ ಊಹಿಸುವುದು ಇವರಿಗೆ ಸಾಧ್ಯವಾಗಿತ್ತು ಎಂಬ ಬಹುಮುಖ್ಯ ಹೇಳಿಕೆ ನೀಡಿದ್ದಾರೆ. 20ನೇ ಶತನಮಾನದಲ್ಲಿ ಬರೆಯುವ ಮಟ್ಟಿಗೆ ಆಧುನಿಕ ಸಾಹಿತ್ಯ ಎಂದ ಕಾಲನಿಷ್ಟ ತೀರ್ಮಾನ ಸರಿಯಲ್ಲ, ಅಂತಹಾ ಎಷ್ಟೋ ಲೇಖಕರು ಪ್ರಪಂಚವನ್ನು ಸೃಷ್ಟಿಸುವ ದಾಖಲಾತಿ ಇದೆ. 21ನೇ ಶತಮಾನದ ಆಧುನಿಕ ವಿಚಾರಗಳು ಅವು ಬರುವುದಕ್ಕಿಂತ ಮೊದಲೇ ಊಹಿಸುವುದು ಇವರಿಗೆ, ಇವರ ಕತೆಗಳಿಗೆ ಸಾಧ್ಯವಾಗಿದೆ. 'ಸಾಹಿತ್ಯ ವಿಮರ್ಶೆ ಅಂತಿಮವಾಗಿ ಲೋಕವಿಮರ್ಶೆಯೇ ಆಗಿದೆ. ಲೋಕವಿಮರ್ಶಕನೇ ಅಂತಿಮವಾಗಿ ಸಾಹಿತಿಯೂ ಹೌದು'- ಡಿ.ಆರ್.ನಾಗರಾಜ್ ಈ ಮಾತಿನ ಅರ್ಥ ಸಾಹಿತ್ಯ ಮತ್ತು ವಿಮರ್ಶೆ ಎರಡೂ ಲೋಕಗ್ರಹಿಕೆಯಿಂದ ಮಾತ್ರ ಉತ್ಪಾದಿತವಾಗುತ್ತದೆ. ವ್ಯಕ್ತಿತ್ವದ ಹಲವಾರು ಭಿನ್ನತೆಗಳಿಂದ

ಮತ್ತು ಅದರಿಂದ ಹೊರಡುವ ತಾತ್ವಿಕ ನೆಲೆಗಳಲ್ಲಿ ಹುಟ್ಟಿಕೊಂಡ ಅರಿವು ಎರಡರ ನಡುವೆ ಸಾಹಿತ್ಯ ಸೃಜಿಸುತ್ತದೆ. ಒಂದು ಶುದ್ಧಕತೆ ಸಮಾಜದ ದುರಂತಗಳನ್ನು ತುಂಬಿಕೊಂಡಿರುತ್ತದೆ ಮತ್ತು ಅಂಥದ್ದನ್ನು ಉಚ್ಚಾಟಿಸುತ್ತಿರುತ್ತದೆ. ಸಂವೇದನೆಯಲ್ಲಿ ಸಂಪೂರ್ಣವಾಗಿ ಮುಳುಗಿದಾಗ ಮಾತ್ರ ಅದನ್ನು ದಾಟಲು ಸಾಧ್ಯ. ಸಮಾಜದ ಅಪಾಯಗಳನ್ನು, ವ್ಯಕ್ತಿತ್ವದ ಕೊರತೆಗಳನ್ನು ಸಾಹಿತ್ಯದ ಮೂಲದ್ರವ್ಯವನ್ನಾಗಿ ಮಾಡಿಕೊಂಡು, ಅದರ ಮೂಲಕವೇ ದಿಟ್ಟವಾಗಿ ಪ್ರಶ್ನಿಸುವ ಜಾಹ್ನವಿಯವರ ಕತೆಗಳನ್ನು ಇನ್ನೊಂದು ಬದಿಯಿಂದ ಪರಿಶೀಲಿಸಬೇಕಾಗುತ್ತದೆ. ನಾಗರಿಕತೆಯ ಒಡಲಿನಲ್ಲೇ ಇಂತಹ ದ್ವಂದ್ವಗಳಿವೆ. ಜಾಹ್ನವಿಯವರ ಕತೆಗಳು ಪಾತ್ರಗಳು ನಾಗರಿಕತೆಯ ಮಡಿವಂತಿಕೆಯನ್ನು ಧಿಕ್ಕರಿಸುವ ಹಾಗೂ ನಾಗರಿಕತೆಯ ಮೂಲಭೂತಿಕೆಯನ್ನು ಪ್ರಶ್ನಿಸುತ್ತಾ ವ್ಯವಸ್ಥೆಯ ಬೇರುಗಳನ್ನು ಅಲುಗಾಡಿಸುತ್ತದೆ. ಜಾಹ್ನವಿಯವರ ಸ್ತ್ರೀ ಪಾತ್ರಗಳಿಗೆ ಅಂತಹಾ ದಿಟ್ಟತನ, ಹಸಿತನ ಇದೆ. ಪುರುಷಗಿರಿಯ ಅಹಮಿಕೆಯನ್ನು ಮೀರಲು ಸಾಧ್ಯವಿರುವ ಸ್ತ್ರೀತ್ವವನ್ನು ಸಾಧಿಸುತ್ತದೆ. ಇವರ ಸಮಕಾಲೀನ ಲೇಖಕಿಯರು ಸಂವೇದನೆಗಳನ್ನು ತೋಡಿಕೊಳ್ಳುತ್ತಾರೆ. ಆದರೆ ಜಾಹ್ನವಿಯವರು ತೀವ್ರ ಪರಿಹಾರ ಮಾರ್ಗವನ್ನು ಸೂಚಿಸಿತ್ತಾರೆ. ವಿಕೃತ ಎಂದು ಪರಿಗಣಿಸುವ ಅಂಶಗಳನ್ನೇ ರೂಪಕವನ್ನಾಗಿ ಆಧುನಿಕ ಸ್ತ್ರೀವಾದಿ ಚಿಂತನೆ ನಾಗರಿಕತೆಯ ಸಂಭಾವಿತನವನ್ನು ಅದರ ಬಿರುಕಿನಲ್ಲೇ ಹುಡುಕಾಟ ನಡೆಸುತ್ತದೆ. ಇಂತಹ ಘರ್ಷಣೆಯೇ ಉತ್ತಮ ಲೇಖಕರಲ್ಲಿ ನಾನು ಮೆಚ್ಚುವ ಅಂಶ. ಆಧುನಿಕತೆಯ ಅರ್ಥವೂ ಇದೇ ಆಗಿದೆ.

ಬದುಕಿನ ಮೂಲಸೆಲೆಯಿಂದ ಹೊರಟ ಜಾಹ್ನವಿಯವರ ಕತೆಗಳು 'ಜೀವನಕ್ಕಾಗಿಯೇ ಕಲೆ' 'ಆರ್ಟ್ ಈಸ್ ಫಾರ್ ಲೈಫ್ ಸೇಕ್' ಎಂಬ ವಾದವನ್ನು ಪುಷ್ಟೀಕರಿಸುತ್ತದೆ. ನವ್ಯ ಪ್ರಾಕಾರದ ಬಹುಮುಖ್ಯ ಲಕ್ಷಣ ಎಂದರೆ ಪಾಶ್ಚಾತ್ಯೀಕರಣದ ದಟ್ಟ ಪ್ರಭಾವ ದೇಸಿತನದ ಮೂಲತ್ವ ಕಳೆದುಕೊಳ್ಳುವ ಅಪಾಯವನ್ನು 90ರ ದಶಕದ ಸಾಹಿತ್ಯ ಎದುರುಗೊಂಡಿತ್ತು. ಅಂತಹ ಬಿಕ್ಕಟ್ಟುಗಳಿಗೆ ಒಳಗಾಗದೆ ಇವರ ಕತೆಗಳು ಅಚ್ಚ ದೇಸಿತನದ ನೈಜತೆಯನ್ನು ಪ್ರಸ್ತುತಪಡಿಸುತ್ತದೆ. ಜಾಹ್ನವಿಯವರ ಆಧುನಿಕತೆಯ ಆಲೋಚನೆಗಳು ಶುದ್ಧ ಭಾರತೀಯ ಪರಿಸರವನ್ನು ಬದಲಾಯಿಸುವುದಿಲ್ಲ. ದೇಸಿ ಸಂವಿಧಾನದಲ್ಲಿ ಆಧುನಿಕತೆಯ ಎಳೆಗಳ ಅನುಸಂಧಾನ ಒಳಮಾರ್ಗವನ್ನು ಕಂಡುಕೊಳ್ಳುತ್ತಾರೆ.

ಮಹಿಳಾ ಸಾಹಿತ್ಯದ ಉಜ್ವಲತೆ ಎಂದರೆ ಹೊಸಹೊಸ ಜ್ಞಾನಗಳನ್ನು ತನ್ನೊಂದಿಗೆ ಸೇರಿಸಿಕೊಳ್ಳುತ್ತಿವೆ. ಜಾಹ್ನವಿಯವರ ಆಧುನಿಕ ಪ್ರಜ್ಞೆಯು ಮಹಿಳೆಯ ಸ್ಥಾನವನ್ನು ಮತ್ತು ಕರ್ತವ್ಯವನ್ನು ತಿಳಿಸಿ ಕೊಡುತ್ತದೆ. ಇದು ಸಂಸ್ಕೃತಿಯ ಗತಿಶೀಲತೆಯೂ ಹೌದು.

ಸಾಮಾಜಿಕ ಕಳಕಳಿ ಹೊಂದಿರದ ಸಾಹಿತ್ಯ ಮಹತ್ವದ ಏನನ್ನೂ ಹೇಳಲಾಗದು. ಮುಕ್ತಪ್ರಪಂಚಕ್ಕೆ ಹೇಳಲೇಬೇಕೆಂದುಕೊಂಡ ವಿಚಾರಗಳು, ಅಭಿಪ್ರಾಯಗಳು ಬಿಡುಗಡೆಗೊಂಡು ಅವರ ಕತೆಗಳಲ್ಲಿ ಹರಿದಾಡಿವೆ. ಸ್ತ್ರೀ ಸಂವೇದನೆಯ ಆಧುನಿಕತೆಯ ಸಂಕೇತಗಳು ಇವರ ಕತೆಗಳಲ್ಲಿ ಆಸ್ಫೋಟಗೊಂಡಿವೆ.

ವಿಮುಖ, ವ್ಯಭಿಚಾರ, ಅಜ್ಞಾತ, ನೆರೆಹಾವಳಿ ಕತೆಗಳಲ್ಲಿ ಅಭಿವ್ಯಕ್ತವಾಗಿರುವ ತುರ್ತು ಆಧುನಿಕತೆಯ ತುರ್ತುಗಳನ್ನು ಹೊಂದಿದೆ.

ವಿಮುಖ

'ವಿಮುಖ' ಕತೆಯ ಬಗ್ಗೆ ಪಿ.ಲಂಕೇಶ್ ಒಂದು ಮಾತು ಹೇಳುತ್ತಾರೆ. ಸುಸಂಸ್ಕೃತ ಪ್ರೇಮ ಕೊಡುವ ಏಕತಾನತೆಯಿಂದ ಮನುಷ್ಯನ ಮನಸ್ಸು ಬೇಸರಗೊಳ್ಳುತ್ತದೆ. ಅಂತಹ ಸಂಬಂಧಗಳಿಂದ ವಿಮುಖಗೊಳ್ಳುವ ಮನುಷ್ಯನ ಆಂತರ್ಯ ಶುದ್ಧ ಆದರ್ಶಗಳೂ ಪೊಳ್ಳು ಎಂಬ ವಸ್ತುನಿಷ್ಠ ತೀರ್ಮಾನಕ್ಕೆ ಬರುತ್ತದೆ.

ಪುರಾಣ ಪಾತ್ರವಾಗಿರುವ ಅಹಲ್ಯೆ ಇಂದ್ರನಿಂದ ಶೋಷಿತಳಾಗಿ ಕಲ್ಲಾದಳು. ಕಲ್ಲಾಗಿಹೋಗುವ ಸ್ಥಿತಿ ಅವಳಿಗಷ್ಟೇ ಸೀಮಿತವಲ್ಲ. ಅಂಥದ್ದೇ ನೋವು ಅನುಭವಿಸುವ ಮೈತ್ರ ಕಲ್ಲಾಗಲಿಲ್ಲ, ದಿಟ್ಟತನದಿಂದ ತನ್ನ ಆಯ್ಕೆ ಮಾಡಿಕೊಳ್ಳುವ ಧೀಮಂತಿಕೆ ತೋರುವ ಮೈತ್ರಾ ಸ್ತ್ರೀ ಶಕ್ತಿಯ ಪ್ರಾತಿನಿಧಿಕ ಪಾತ್ರವಾಗುತ್ತಾಳೆ.

ಪೊಲ್ಲಮೆಯೇ ಲೇಸು ನಲ್ಲರ ಮೈಯೊಳ್ ಎಂದು ತನ್ನ ಆಯ್ಕೆಯ ಬಗ್ಗೆ ಮುಕ್ತ ನಿರ್ಧಾರ ತಳೆಯುವ ಅಮೃತಮತಿಯ ಧ್ವನಿ, ಮೈತ್ರಾ ಪಾತ್ರದಲ್ಲಿ ಪ್ರತಿಧ್ವನಿತವಾಗುತ್ತದೆ. 'ಮೈತ್ರಾ' ತಳೆಯುವ ತೀರ್ಮಾನಗಳು ಕಾಮಪ್ರೇಮದ ನಡುವಿನ ಹಾದಿಯೊಂದನ್ನು ತೆರೆಯುತ್ತದೆ. ಲೇಖಕಿಯ ಆಧುನಿಕತೆಯ ತರ್ಕಗಳನ್ನು ನಾವು ಗ್ರಹಿಸಬಹುದು. ಪರಂಪರೆಯ ಕಟ್ಟುಪಾಡುಗಳನ್ನು ಮುರಿದು ಮುಕ್ತತೆಯನ್ನು ಪಡೆಯುವ ಮೈತ್ರಾ, ಸಾಯುವ ಕೆಡುವ ಗಂಡನ್ನು ನಿರಾಕರಿಸುವ ಅಕ್ಕಮಹಾದೇವಿಯನ್ನು ನೆನಪಿಸುತ್ತಾಳೆ. ಸಾವಿಲ್ಲದ ಕೇಡಿಲ್ಲದ ಚನ್ನಮಲ್ಲಿಕಾರ್ಜುನನ ಹುಡುಕಾಟದಂತೆ ಮೈತ್ರಾ ತನ್ನತನದ ಶೋಧ ನಡೆಸುತ್ತಾಳೆ. ಸಾಂಪ್ರದಾಯಿಕ ರಿವಾಜುಗಳ ಬೇರನ್ನು ಅಲುಗಾಡಿಸುವ ಈ ಪಾತ್ರಸೃಷ್ಟಿಯಲ್ಲಿ ಪಾಶ್ಚಾತ್ಯ ಸ್ಪರ್ಶವಿರುವುದು ಕಂಡುಬರುತ್ತದೆ. ಶುಭ್ರ ಮಾನವ ಪ್ರಾಣಿಸಹಜ ಬಯಕೆಗಳನ್ನು ನಾಗರಿಕತೆಯ ಸೋಗಿನಲ್ಲಿ ಬಚ್ಚಿಡುತ್ತಾನೆ. ಆ ರೀತಿ ಖಾಲಿ ಸೋರೆ ಬುರುಡೆಯಂತೆ ಉರುಳಿಹೋಗದೆ ಸ್ತ್ರೀ ಪರಿಧಿಗಳನ್ನು ದಾಟಿದರೂ ದಿಟ್ಟತನ ಮೆರೆವ ಮೈತ್ರಾ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವೆನಿಸುತ್ತಾಳೆ.

ದಿನನಿತ್ಯದ ಏಕತಾತನೆಯಿಂದ ಪ್ರೇಮಕಾವ್ಯಗಳೂ ಯಾಂತ್ರಿಕವಾಗಿ ಬಿಡುವ ಅಪಾಯವಿದೆ. ಅಂತಹ ಪ್ರೇಮದಲ್ಲಿ ನಿರೀಕ್ಷಣಾ ಗುಣವಾಗಲೀ ಸಂಭ್ರಮವಾಗಲೀ ಕಾಣುವುದಿಲ್ಲ. ನಿರ್ವಿಕಾರ ಮನೋಭಾವವನ್ನು ಹೊತ್ತು ಬದುಕಲು ಸಾಧ್ಯವಿಲ್ಲ ಎಂಬ ಲೇಖಕಿಯ ಮಾತುಗಳು ಮನುಷ್ಯ ಸಂಬಂಧಗಳಿಗೆ ಬೇರೆ ಆಯಾಮವನ್ನು ಒದಗಿಸುತ್ತದೆ.

ತಪ್ಪಿಲ್ಲದ ತಪ್ಪನ್ನು ಆರೋಪಿಸಿ ಮೈತ್ರಾಳಿಂದ ವಿಮುಖನಾಗುವ ರಘು, ಪುರುಷವಾಹಿ ಗುಣಕ್ಕೆ ರೋಸಿ ರಘುವಿನಿಂದ ದೂರಾಗುವ ಮೈತ್ರಾ, ತನ್ನಲ್ಲಿ ನೆಲೆಸಿದ್ದ ಅಭಾವವನ್ನು ನೀಗಿಸಿಕೊಂಡು ವಿಮುಖನಾದ ಭರತ್, ಭರತ್‌ನಲ್ಲಿ ಶಾಶ್ವತೆಯನ್ನು ಕಂಡುಕೊಂಡು ರಘುವನ್ನು

ನಿರಾಕರಿಸುವ ಮೈತ್ರಾ– ಮನುಷ್ಯತ್ವದ ಸಂಕೀರ್ಣತೆಯ ನೆಲೆಯೊಂದನ್ನು ಸೃಷ್ಟಿಸುತ್ತಾಳೆ. ಸ್ಥಾಪಿತವಾದ ಸ್ತ್ರೀ ಸಂಕೋಲೆಗಳಿಂದ ವಿಮುಖಿನಾಗುವ ವಿಚಾರ ಹೊಂದಿರುವ ಈ ಕತೆ ತ್ರಿವೇಣಿಯವರಿಗಿಂತ ಭಿನ್ನವಾಗಿ ಸ್ತ್ರೀ ನೆಲೆಗಳನ್ನು ಪರಿಶೋಧಿಸುತ್ತದೆ. ಸ್ತ್ರೀ ಬದುಕಬಹುದಾದ ಹೊಸ ದಿಕ್ಕುಗಳನ್ನು ಪರಿಚಯಿಸುತ್ತದೆ.

'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ,

ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗೆ'

ವ್ಯಭಿಚಾರ

ಹೆಣ್ಣುತನವನ್ನು ಕಾಪಾಡಿಕೊಂಡು ಬಂದಿರುವ ಧಾರ್ಮಿಕ ಸ್ವಾಸ್ಥ್ಯವನ್ನು ಅಲುಗಾಡಿಸುವ ಲೀಲಕ್ಕನ ಪಾತ್ರದ ಮೂಲಕ ಕತೆಗಾತಿ, ಹೆಣ್ಣಿನ ಬೇರೊಂದು ಸ್ವರೂಪವನ್ನು ಪರಿಚಯಿಸುತ್ತಾಳೆ. ಒಂದರ್ಥದಲ್ಲಿ ಸಾಹಿತ್ಯದ ಮಾರ್ಗ ಧರ್ಮದಿಂದ ವಿಮುಖವಾಗಿಯೇ ಸಾಗುತ್ತದೆ. ಧಾರ್ಮಿಕತೆ ಹೆಸರಿನಿಂದ ಉಳಿದಿರುವ ಕಟ್ಟುಪಾಡುಗಳನ್ನು ಸಾಹಿತ್ಯ ಎಂದಿನಿಂದಲೂ (ಪಂಪನಿಂದಲೂ) ವಿರೋಧಿಸುತ್ತಲೇ ಬಂದಿದೆ. 'ಸ್ತ್ರೀ ಧರ್ಮ' ಎನ್ನುವುದು ಪುರುಷನಿಂದ ಹೇರಲ್ಪಟ್ಟಿರುವುದು. ಮನಸ್ಸು ಯಾವಾಗಲೂ ಸ್ವಂತಕ್ಕಾಗಿ ಸಹಜತೆಗಾಗಿ ಹಂಬಲಿಸುತ್ತದೆ. ಮನುಷ್ಯನ ಕಾಮನೆಗಳು ಪ್ರಾಣಿ ಸಹಜವಾದದು. ಸ್ತ್ರೀ ಸಹಜ ಕಾಮಪ್ರೇಮಗಳು ನಮ್ಮ ಪರಂಪರೆಯ ಅರ್ಥಾತ್ ಧರ್ಮದ ಚೌಕಟ್ಟಿನಲ್ಲೇ ಬಂಧಿಸಲಾಗಿದೆ. ಅಂತಹ ಬಂಧನವನ್ನು ಮೀರಿ ಸಹಜತೆಗಾಗಿ ಕಾತರಿಸುವ ಪಾತ್ರವಾಗಿ 'ಸವಿ' ಹೆಣ್ತನ ಕಾತರಿಸುವ ಪಾತ್ರವಾಗಿ ಸವಿ ಹೆಣ್ತನ ನಿಲುವುಗಳನ್ನು ಸ್ಪಷ್ಟಪಡಿಸುತ್ತಾಳೆ. ಆರಂಭವದಲ್ಲಿ ಲೀಲಕ್ಕನ ನಡತೆಯನ್ನು ಅನುಮಾನದಿಂದ ನೋಡುವ ಸವಿ, ತನ್ನ ಅನುಭವದೊಂದಿಗೆ ತಾಳೆ ಹಾಕುತ್ತಾಳೆ. ಬದುಕಿನ ಇಚ್ಛೆಗಳನ್ನು ಮುಕ್ತವಾಗಿ ಸ್ವೀಕರಿಸಿದ್ದ ಲೀಲ, ಬದುಕಿನ ಸುಂದರ ಕ್ಷಣಗಳನ್ನು ಕಳೆದುಕೊಂಡಿದ್ದ ಸವಿಯ ದೃಷ್ಟಿಯಲ್ಲಿ ಗ್ರೇಟ್ ಆಗಿಬಿಡುತ್ತಾಳೆ. ರೀತಿ, ರಿವಾಜು, ಆಚರಣೆ, ಕಟ್ಟುಪಾಡು ಎಲ್ಲವನ್ನೂ ಮನುಷ್ಯ ಕಟ್ಟಿಕೊಂಡಿರುವುದರಿಂದ ಅದರಲ್ಲಿ 'ನೀತಿ' ಎಂಬ ಪದ ಅಡಗಿದೆ. ಅದರಾಚೆಗೆ ನಿಂತು ಗಮನಿಸಿದಾಗ ಹುಸಿತನದ ಅರಿವಾಗುತ್ತದೆ. ಮುಕ್ತ ಜೀವನವೇ ಪ್ರಾಕೃತಿಕ ಲಕ್ಷಣ ಎಂಬ ತೀರ್ಮಾನ ನೀಡಿದ್ದಾರೆ ಕತೆಗಾತಿ. ಸಭ್ಯತೆಯಲ್ಲಿ ತಣ್ಣಗಿನ ಕ್ರೌರ್ಯ ಅಡಗಿದೆ ಎಂಬುದನ್ನು ಗಂಡನ ವರ್ತನೆಗಳಿಂದ ಕಂಡುಕೊಂಡ ಸವಿ, ಪ್ರೇಮದಲ್ಲಿ ವ್ಯಭಿಚಾರವಿದೆ, ಆದರೆ ವ್ಯಭಿಚಾರದಲ್ಲೂ ಪ್ರೇಮ ಇದೆ ಎಂಬ ಹೊಸ ಅರ್ಥ ಪ್ರತೀತಿಯನ್ನು ಕಂಡುಕೊಳ್ಳುತ್ತಾಳೆ.

ಶುದ್ಧ ಧರ್ಮ ಮನುಷ್ಯನ ಅನುಭವದಲ್ಲಿಯ ಅತ್ಯಂತ ಮಹತ್ವವನ್ನು ಬಿಟ್ಟುಬಿಡುತ್ತದೆ. ಪಂಪನ ಕಾವ್ಯದಂತೆ ಈ ಕತೆ ಧರ್ಮ ಮತ್ತು ಕಾಮಗಳ ಸಂಘರ್ಷವೇ ಆಗಿದೆ. ಅಹಲ್ಯೆ ಕಲ್ಲಾದಂತೆ, ಇವರ ಸ್ತ್ರೀ ಪಾತ್ರಗಳು ಶಾಪಕ್ಕೆ ಸಿದ್ಧರಿಲ್ಲ, ಮನುಷ್ಯನ ಆಸೆಗಳೂ ಹಾಗೆ. ನಿಯಮಗಳಿಗೆ ಸಿದ್ಧವಿರುವುದಿಲ್ಲ. ಸವಿ ತನ್ನ ಗಂಡನನ್ನು ನಿರಾಕರಿಸಿದ ಕಾರಣ, ತನ್ನ ನಿರೀಕ್ಷೆಗಳನ್ನು, ಆಸೆಗಳನ್ನು ಕೊಂದ ಎಂಬ ಕಾರಣಕ್ಕಾಗಿ ಅಲ್ಲ, ತನ್ನ ಹೆಣ್ಣುತನವನ್ನು ಅಪಮಾನ ಮಾಡಿದ ಎಂದು.

ತನ್ನ ಬದುಕಿನ ಅನುಭವಗಳನ್ನು ಲೀಲಕ್ಕನ ಜೊತೆ ಹೋಲಿಸಿ ನೋಡುತ್ತಾ, ಕಡೆಗೂ ದಿಟ್ಟಹೆಜ್ಜೆ ಊರಲಾರದೆ ಸೋಲುವ ಸವಿ, ತನ್ನ ಮನಸ್ಥಿತಿಯನ್ನು ನಿಂದಿಸಿಕೊಳ್ಳುವಾಗ ಕತೆ ಮುಗಿಯುತ್ತದೆ. ಆದರೆ ಇವಳಂತಹ ಎಷ್ಟೋ ಹೆಣ್ಣುಗಳ ಕತೆ ಮುಗಿಯುವುದಿಲ್ಲ. 'ವ್ಯಭಿಚಾರ' ಪದದಲ್ಲೇ ಪ್ರಶ್ನಾರ್ಥಕ ಚಿಹ್ನೆ ಕಾಡುತ್ತದೆ.

ಜಾಹ್ನವಿಯವರ ಈ ಕತೆಯ ಹೆಸರು 'ವ್ಯಭಿಚಾರ'. ಈ ಪದಕ್ಕೆ ಈವರೆಗೂ ರೂಢಿಗತವಾಗಿ ಇದ್ದ ಹೀನಾರ್ಥವನ್ನು ಒರೆಸಿ ಹಾಕಿ ಲೇಖಕಿ ಪದಪ್ರಯೋಗಕ್ಕೆ ಆಧುನಿಕ ಸ್ಪರ್ಶ ನೀಡಿದ್ದಾರೆ.

ಅಜ್ಞಾತ

ಪಾರಂಪರಿಕ ವ್ಯವಸ್ಥೆಯನ್ನು ಮೀರಿಬಿಡುವ ಹೆಣ್ಣಿನ ಹೆಜ್ಜೆಗಳು ಹೊಸಮಾರ್ಗದಲ್ಲಿ ಚಲಿಸಲು ಸಾಧ್ಯ. ವಯಸ್ಸು ಮೀರಿದ ಗಂಡದ ನಿರುಪದ್ರವಿತನ, ನಿರ್ಭಾವುಕತೆಯಲ್ಲಿ ಜಡತ್ವ ಕಂಡ ಕಮಲ, ತನ್ನ ಸಹಜತೆಗಾಗಿ ಪರಪುರುಷನಲ್ಲಿ ಸಾಂಗತ್ಯ ಕಂಡುಕೊಳ್ಳುತ್ತಾಳೆ. ವಿವಾಹೇತರ ಸಂಬಂಧ ಅವಳಿಗೆ ಅಪರಾಧ ಎನಿಸುವುದಿಲ್ಲ. ಅವಳಂತಹ ಎಷ್ಟೋ ಹೆಂಗಳೆಯರಿಗೆ ಇಂತಹ ಸುಪ್ತ ಬಯಕೆಗಳು ಈಡೇರದೆ ಹಾಗೆಯೇ ಉಳಿದುಬಿಡುತ್ತವೆ. ಕಮಲ ಆ ಬಗೆಯ ರೋಗಸ್ಥ ಸಾಂಪ್ರದಾಯಕ ವಿಧಿಗಳನ್ನು ಮೀರಿ ನಿಲ್ಲುತ್ತಾಳೆ. ಎಷ್ಟೋ ಕಾಲದಿಂದ ಜಡತನ ಆವರಿಸಿದ್ದ ಹೆಣ್ಣಿನ ಮನೋಭಾವನೆಗಳಿಗೆ ಕತೆಗಾತಿ ಚಲನಾತ್ಮಕ ಪರಿಹಾರ ನೀಡುತ್ತಾಳೆ. ಇಂತಹ ದಿಟ್ಟ ತೀರ್ಮಾನಗಳು ಜಾಹ್ನವಿಯವರಿಂದ ಮಾತ್ರ ಸಾಧ್ಯ. ಪುರುಷಶಾಹಿ ಸಮಾಜದಲ್ಲಿ ವಿವಾಹೇತರ ಸಂಬಂಧಗಳು ಪುರುಷನಿಗೆ ಅಪರಾಧವೇ ಅಲ್ಲ. ಅದು ಅವನ ಅಘೋಷಿತ ಹಕ್ಕು. ಕಟ್ಟುಪಾಡುಗಳು ಹೆಣ್ಣಿಗೆ ತಾನೆ! ಅದನ್ನು ಮೀರಿದಾಗ ಅವಳು ನಿರ್ಲಜ್ಜೆಯೋ, ಕೀಳುಸ್ತ್ರೀ ಆಗಿಬಿಡುತ್ತಾಳೆ. 'ಶುಚಿತ್ವ' ಎಂಬ ಪ್ರಶ್ನೆ ಹೆಣ್ಣಿಗೆ ಮಾತ್ರವೇ ಎಂಬ ಕತೆಗಾತಿಯ ಪ್ರಶ್ನೆಗೆ ಉತ್ತರ ಹುಡುಕಬೇಕಾಗಿದೆ.

ಜಾಹ್ನವಿಯರು ನಿಯಮಬಾಹಿರ ಸಂಬಂಧವನ್ನು ಏರ್ಪಡಿಸಿಕೊಳ್ಳುವುದರಲ್ಲಿ ಹೆಣ್ಣಿನ ನಿಶ್ಚಯತೆ ಅಡಗಿದೆ ಎಂಬ ಖಂಡಿತವಾದಿ ತೀರ್ಮಾನ ನೀಡುವುದಿಲ್ಲ. ಉಳಿದ ಪಾತ್ರಗಳು ಆತಂಕ ಹಾಗೂ ಕುತೂಹಲ ದೃಷ್ಟಿ ಹರಿಸುವಲ್ಲಿ ಕತೆಯ ಇನ್ನೊಂದು ಬದಿಯ ಅರಿವಾಗುತ್ತದೆ. ಲೇಖಕಿಯ ಸ್ತ್ರೀವಾದಿ ನೆಲೆಗಳ ಹುಡುಕಾಟ ಇಲ್ಲಿಯೇ ಅಡಗಿರುವುದು. ವಿಚಿತ್ರ ತಲ್ಲಣಗಳನ್ನು ಹೊತ್ತ 'ಕಮಲ' ಲಕ್ಷ್ಮಿಯ ದೃಷ್ಟಿಯಲ್ಲಿ 'ಹುಚ್ಚಿ'. ಸಮಾಜ ಹೆಸರಿಸುವುದೂ ಅದೇ. ಅವ್ವ ಮಾತ್ರ ಮಗು ಸೊಸೆಯರ ಸಂಬಂಧಗಳನ್ನು ತೆರೆತೆರೆಯಾಗಿ ಬಿಡಿಸಿ ವಾಸ್ತವತೆಯನ್ನು ಕಂಡುಕೊಳ್ಳುತ್ತಾಳೆ. ಕೌಟುಂಬಿಕ ನೆಲೆಯಲ್ಲಿ ಉಳಿದುಕೊಂಡೇ ಇಚ್ಛಾಶಕ್ತಿಯನ್ನು ತಣಿಸಿಕೊಳ್ಳುವ ಕಮಲ ಆಧುನಿಕ ಸ್ತ್ರೀ ಸಂವೇದನೆಗಳನ್ನು ಪರಿಚಯಿಸುವುದರಲ್ಲಿ ಸಾರ್ಥಕವಾಗುತ್ತಾಳೆ. ಕಮಲಿ, ನಳಿನ, ಅತ್ತೆ, ಲಕ್ಷ್ಮಿ ಅವರವರ ಗೋಜಲುಗಳಲ್ಲಿ 'ಅಜ್ಞಾತ'ರಾಗಿಯೇ ಉಳಿದುಬಿಡುತ್ತಾರೆ.

ಸಾಕವ್ವನ ಮೂಕಪ್ರೇಕ್ಷಕತನದಲ್ಲಿ ಸುರುಳಿಸುರುಳಿಯಾಗಿ ಬಿಚ್ಚಿಕೊಳ್ಳುವ 'ಅಜ್ಞಾತ' ಕತೆ ಅಜ್ಞಾತವಾಗಿಯೇ ಉಳಿದಿರುವ ಎಷ್ಟೋ ಹೆಣ್ಣುಗಳ ಮೌನರೋದನವೇ ಆಗಿದೆ.

ನೆರೆಹಾವಳಿ

ಸ್ತ್ರೀ ಸಂವೇದನೆಗಳನ್ನು ಲೇಖಕಿ ಜಾಹ್ನವಿಯವರು ಕಂಡುಕೊಳ್ಳುವ ಮತ್ತು ಅರ್ಥೈಸುವ ದೃಷ್ಟಿಯೇ ವಿಭಿನ್ನವಾದದ್ದು. ಜೀವನ ಮೌಲ್ಯಗಳನ್ನು ಸ್ವೀಕರಿಸುವ ವಿಧಾನದಲ್ಲಿ ಆಧುನಿಕತೆಯ ನಿಜವಾದ ಸಾಂಗತ್ಯವನ್ನು ತುಂಬಿಕೊಡುತ್ತಾರೆ.

'ನೆರೆಹಾವಳಿ' ಎಂಬ ಪದದ ಚಿಪ್ಪನ್ನು ಒಡೆದು ನೆರೆಯವರ ಹಾವಳಿ ಎಂಬ ಬೇರೆ ಅರ್ಥವ್ಯಾಪ್ತಿಯನ್ನು ಸೃಷ್ಟಿಸುವಿಕೆ, ಕೇವಲ ಕತೆಗಷ್ಟೇ ಅಲ್ಲ ಸ್ತ್ರೀ ಬದುಕಿನ ಪರಿಮಿತಿಗಳನ್ನು ದಾಟಿ ಜೀವನ ಸೆಲೆಗಳನ್ನು ಹೊರಗೆಳೆಯುತ್ತಾರೆ. ಪುಟ್ಟಹುಡುಗಿ 'ಅನಿತಾ' ವಿವರಿಸುವ, ಜೀವನ ವಿಧಾನದಲ್ಲಿ ಸಾಮಾಜಿಕ ಕಟ್ಟಳೆಗಳಿಗೆ ಸ್ಥಾನವೇ ಇಲ್ಲ. ತಾನು ಹೊಟ್ಟೆ ಹೊರೆಯುವುದಷ್ಟೇ ನನ್ನ ಜೀವನಮಾರ್ಗ ಎಂಬ ಸರಳಸೂತ್ರ, ಪ್ರಧಾನ ಸಂಸ್ಕೃತಿ ನಿಗಧಿಸಿರುವ ತಪ್ಪುಒಪ್ಪುಗಳು ಯಾವುವೂ ಅನಿತಳಿಗೆ ಅನ್ವಯಿಸುವುದೇ ಇಲ್ಲ. ಪುರುಷ ಸಮಾಜ ವಿಧಿಸಿರುವುದರಿಂದಲೇ ಸಾಮಾಜಿಕ ನಿಯಮಗಳು ರೂಪಿತವಾಗಿವೆ. ಹೆಣ್ಣಿನ ಭಾವನೆಗಳನ್ನು ಸಮಾಜವೇ ಸಾಕುತ್ತಿದೆ ಅಂತಹ ಎಲ್ಲ ಪರಿಧಿಗಳನ್ನು ದಾಟಿಬಿಡುವ ಅನಿತಳ ಪಾಲಿಗೆ, ಬಡತನವೇ ಬದುಕಿನ ಮಾರ್ಗವನ್ನು ಕಲಿಸಿಕೊಟ್ಟಿದೆ. ಕಾಮವನ್ನು ನೋಡುವ, ಅರ್ಥೈಸುವ ದೃಷ್ಟಿಯೇ ಅನಿತ ಮಾತ್ರವಲ್ಲ, ಲೇಖಕಿಯ ದರ್ಶನವೂ ಭಿನ್ನವೇ ಆಗಿದೆ. ಪುಟ್ಟ ಅನಿತಳಿಗೆ ಇದ್ದ ಒಂದೇ ಆಶಯ ಕಲಿಕೆ. ಶಿಕ್ಷಣದ ಕಲಿಕೆಗಾಗಿ, ಹಣದ ಗಳಿಕೆಗಾಗಿ ಅನಿತ ಕಂಡುಕೊಂಡ ಮಾರ್ಗ ಯಾವುದು?

'ಅಜ್ಜಿ ಸೊಪ್ಪು ಮಾರ್ತಾರೆ'

'ಅಜ್ಜ ಹಣ್ಣು ಮಾರ್ತಾರೆ'

'ಅನಿತಾ?'

ಅವಳು ಕೊಟ್ಟ ಉತ್ತರ 'ಮೈಯ್ಯಿ'

ಎಷ್ಟು ಸರಳವಾದ ಉತ್ತರ.

ಅಂತಹ ವಿಲೋಮ ಮಾರ್ಗ ಅವಳಿಗೆ ತಪ್ಪಾಗಿ ಕಾಣಲಿಲ್ಲ. ಹೊಟ್ಟೆ ತುಂಬಿದವರಿಗೆ ಕಟ್ಟಳೆ, ಕಾನೂನು, ಸಾಮಾಜಿಕ ವ್ಯವಸ್ಥೆ ಎಲ್ಲವೂ ಲಭ್ಯ. ಬಡ ಅನಿತಳಿಗೆ ನಡೆದದ್ದೇ ಮಾರ್ಗ. ನಮ್ಮ ಸಂಸ್ಕೃತಿಯ ಒಂದು ಬದಿಯಲ್ಲೇ ಬದುಕುವ – ನರಳುವ ತಳಸಂಸ್ಕೃತಿಯ ಒಂದು ಜನಾಂಗ ಚಲಿಸುತ್ತಿದೆ. ನಾಗರಿಕತೆಯ ಅವಕಳೆಗಳನ್ನು 'ನೆರೆಹಾವಳಿ' ಕತೆ ಅಣಕಿಸುವಂತಿದೆ.

ಜಾಹ್ನವಿಯವರ ಕತೆಗಳು ಅವರೇ ಹೇಳಿಕೊಂಡಂತೆ ಅವುಗಳೇ ಬರೆಯಿಸಿಕೊಂಡವು. ಕತೆಗಾತಿ ವಿಶಿಷ್ಟ ಸಂದರ್ಭದಲ್ಲಿ ಕಂಡ ತೀವ್ರ ಅನುಭವಗಳು ಹೆಪ್ಪುಗಟ್ಟಿದ್ದ ನವಿರು

ಸಂವೇದನೆಗಳು ಕತೆಗಳಾಗಿ ಮೈತಳೆದಿದೆ. ಸ್ತ್ರೀ ಪಾತ್ರ ಪ್ರಧಾನ ಕತೆಗಳೇ ಆಗಿದ್ದರೂ ಸೌಂದರ್ಯದ ವರ್ಣ ಇರುವುದಿಲ್ಲ. ಒಬ್ಬ ನಾಯಕಿಯನ್ನಾದರೂ 'ಸುಂದರಿ' ಎಂಬ ಕಿರುನುಡಿಯನ್ನು ಉಚ್ಚರಿಸಿಲ್ಲ. ಸ್ತ್ರೀ ಸಂವೇದನೆಗಳ ಒಳಸೆಲೆಯನ್ನು ಅಷ್ಟೇ ಗಹನವಾಗಿ ವಿಸ್ತರಿಸುತ್ತಾಳೆ. ಇತರ ಪಾತ್ರಗಳಿಗೆ ಭಾವಾತಿರೇಕಕ್ಕೆ ಒಳಗಾಗದ ಸಂಯಮವಿದೆ. ಭಾವನೆಗಳನ್ನೂ ವಿಚಾರಗಳನ್ನೂ ಸಾಧಾರಣೀಕರಣಗೊಳಿಸುವ ನೈಜತೆ ಇವರ ಕಥಾನಕತೆಯ ಸ್ವಭಾವವಾಗಿರುವುದರಿಂದ ಕತೆಗಳು ಕತೆಗಳಷ್ಟೇ ಆಗಿ ಉಳಿಯದೆ, ಯಾರದೋ ಬದುಕಿನ ಪುಟಗಳು ಎಂಬ ಆಂಶಿಕ ಸತ್ಯ ಗೋಚರವಾಗುತ್ತದೆ.

ಅನಿವಾರ್ಯ, ಕಳ್ಳುಬಳ್ಳಿ, ತಾಯ್ತನ, ಅವ್ವಯ್ಯನ ಹಂಡೇವು, ಒಳಗುದಿ, ನೆಲಬಾನಿನ ಗೆಳೆತನ–ಇಂತಹಾ ಭಾವನಾತ್ಮಕಗುಣವನ್ನು ಹೊಂದಿವೆ. ಶುದ್ಧಭಾವ ಎಂದರೆ ಜೀವನದ ತಾತ್ವಿಕತೆಯನ್ನು ಒಳಗೊಂಡಿರುತ್ತದೆ.

ಕಳ್ಳುಬಳ್ಳಿ

ಕಳ್ಳುಬಳ್ಳಿ ಜಾಹ್ನವಿಯವರ ಬಹುಮುಖ್ಯ ಕತೆಗಳಲ್ಲಿ ಒಂದು. ಕಲಾಕೃತಿ ಲೋಕವಿಮರ್ಶೆಯೂ ಆಗುತ್ತದೆ. ಲೇಖಕಿ ಹೇಳಲೇಬೇಕೆಂದಿರುವ ಕತೆಯ ಮುಖ್ಯ ಆಶಯವೂ ಅದೇ ಆಗಿದೆ. ಶ್ರೇಣೀಕೃತ ಸಮಾಜದ ವಿಕೃತ ಸ್ವರೂಪಗಳನ್ನು ದಾಖಲಿಸುತ್ತಾ, ಹಣ, ಅಂತಸ್ತು ಮಾನವೀಯ ಸಂಬಂಧಗಳನ್ನು ಸಡಿಲಿಸುತ್ತದೆ. ವರ್ಗ ಸಮಸ್ಯೆಯನ್ನು ಕಥಾವಸ್ತುವಾಗಿಟ್ಟುಕೊಂಡ ಕತೆ ಗ್ರಾಮನಗರಗಳೇ ಆಗಲಿ, ಎಲ್ಲ ಕಾಲದ ಎಲ್ಲ ಜನಾಂಗಗಳನ್ನು ಬೇರೂರಿಸುವ ವರ್ಗಪ್ರಜ್ಞೆ ನಾಗರಿಕತೆಯ ದುರಂತ. ತನಗಿಂತ ಕೆಳವರ್ಗದ ಜನಾಂಗದ ಶೋಷಣೆ ನಿರಂತರವಾಗಿ ನಡೆದೇ ಇದೆ. ದಮನಕಾರಿ ಪ್ರವೃತ್ತಿ ಮನುಷ್ಯನಲ್ಲಿ ಏಕೆ ಮೂಡಿತು?

ಕತೆ ಕೇವಲ ಕಟ್ಟುವಿಕೆ ಅಲ್ಲ, ತಮ್ಮ ಕತೆಗಳಲ್ಲಿ ಸಾಮಾಜಿಕಪ್ರಜ್ಞೆ ಮೂಡಿಸದ ಕವಿ ಮಹತ್ವದ ಕವಿ ಆಗಲಾರ. ಇಂತಹ ಅನಿಷ್ಟಗಳ ವಿರುದ್ಧ ಪರಿಹಾರ ಹುಡುಕುತ್ತಾ, ಕತೆ ಸಾಮಾಜಿಕ ನ್ಯಾಯಕ್ಕೆ ಹಂಬಲಿಸುತ್ತದೆ. ಸಿರಿತನದ ದುರಭಿಮಾನದಿಂದ ಬೀಗುವ ಇಂದ್ರ ಮುಗ್ಧ ತಿಪ್ಪನಿಗೆ ಎಂಜಲು ತಿನ್ನಿಸುವ ಮದಾಂಧಳಾಗುತ್ತಾಳೆ. ಪರಿಸ್ಥಿತಿಗೆ ಅನಿವಾರ್ಯವಾಗಿ ಮಗನನ್ನು ಜೀತಕ್ಕೆ ಬಿಡುವಾಗ ಕೆಂಚ ಅಳುಕುವುದಿಲ್ಲ. ಬಡತನವಿದ್ದರೂ ಅಭಿಮಾನಶೂನ್ಯನಲ್ಲ. ತಿಪ್ಪನಿಗೆ ಎಂಜಲು ತಿನ್ನಿಸುವ ಕೀಳುಮಟ್ಟಕ್ಕೆ ಹೋದಾಗ ಇಂದ್ರಕ್ಕನ ವಿರುದ್ಧ ಸೆಟೆದು ನಿಲ್ಲುತ್ತಾನೆ. ಬಡತನ ಹಣಕ್ಕೆ ಕೊರತೆ ಆಗಬಹುದು, ಸ್ವಾಭಿಮಾನಕ್ಕೆ ಅಲ್ಲ. 'ಒಂದಿನ ಉಣ್ಣದಿದ್ರೆ ಸಾಯಲ್ಲ' ಎಂಬ ಮಾತು ಹಸಿವಿಗಿಂತ ಮನುಷ್ಯ ಕಾಣಬಹುದಾದ ಆತ್ಮಾಭಿಮಾನ ಮುಖ್ಯ. 'ನಮ್ ಜನ ನಮ್ ಕಳ್ಳುಬಳ್ಳಿ' ಎಂಬ ಮಾತಿನಲ್ಲಿ ಮಾನವೀಯ ಆಂತರ್ಯ ಧನಿ ಇದೆ. ಹೊರಗಿನವರಲ್ಲ, ನಮ್ಮವರೇ ನಮ್ಮನ್ನು ದೂರ ಮಾಡಿದಾಗ ಉಂಟಾಗುವ ನೋವು ಅಪರಿಮಿತ. ಕೆಂಚ ಎದುರಿಸಿದ ಅನುಭವಿಸಿದ ನೋವು ತಮ್ಮವರಿಂದಲೇ. ಅದೇ ಅವನಿಗೆ ಆಘಾತವಾಗಿದ್ದು. ಕೆಂಚನ 'ಮೂಲ ಮರೀಬಾರ್ದು ಶಿವಣ್ಣ' ಎಂಬ ಮಾತು ಕತೆಯ ಅಂತಿಮ ಆಶಯವಾಗಿದೆ.

ಅವ್ವಯ್ಯನ ಹಂಡೇವು

ಶಿವಮ್ಮನ ಜೀವಕ್ಕೆ ತಂಪು ಕೊಡುವ ಜೀವಜಲ ಎಂದೂ ಖಾಲಿಯಾಗದ ತವರಿನಿಂದ ಸಿಕ್ಕ ಅಮೂಲ್ಯ ಆಸ್ತಿ 'ದೊಡ್ಡ ಹಂಡೇವು'. ತನ್ನ ಬಾಲ್ಯ, ಯೌವ್ವನ ತನ್ನ ತವರೇ ಅದರಲ್ಲಿ ತುಂಬಿದ್ದು, ಅವಳ ಅಪ್ಪಯ್ಯ ಅವ್ವಯ್ಯನ ಜೀವ ಅದರಲ್ಲಿ ಮಿಡುಕುತ್ತಿವೆ. ಹೆಣ್ಣು ಮಕ್ಕಳ ಮನಸ್ಸೇ ಹಾಗೆ. ತವರಿನ ಸಂಬಂಧಗಳು, ಮನಸ್ಸಿನ ಸಂವೇದನೆಯನ್ನು ಮಿಡಿಯುವ ವೀಣೆಯಂತೆ.

ಹೆಣ್ಣಿನ ಆರ್ದ್ರ ಅಂತರ್ಯವನ್ನು ಪರಿಚಯಿಸುವ ಕತೆ 'ಅವ್ವಯ್ಯನ ಹಂಡೇವು.' ಹಂಡೇವು ಅವಳ ಪಾಲಿಗೆ ತಂದೆತಾಯಿಯ ಆತ್ಮದೊಂದಿಗೆ ಬೆಸೆದು ಹೋದ ಭಾವನಾತ್ಮಕ ಸಂಬಂಧ. 'ಹಂಡೇವು ಮನಸ್ರು ಉಸುರಾಡ್ತಿರ್‍ರೋ ಹಂಗೆ ಉಸುರಾಡುತ್ತೆ. ನಮ್ಮೆದೆಯಂಗೆ ಬಡ್ಕಂತದೆ. ಆಸೀರ್ವಾದ ಮಾಡ್ತದೆ. ನಮ್ಮ ಕಣ್ಣೀರು ಒರ್‍ಸಿ ಸಮಾಧಾನ ಮಾಡ್ತೈತೆ' ಹಂಡೇವು ಶಿವಮ್ಮನ ಪಾಲಿಗೆ ಜೀವಂತಿಕೆಯ, ಭಾವನಾತ್ಮಕತೆಯ ಒಂದು ತುಂಬು ವ್ಯಕ್ತಿತ್ವ ಹೊಂದಿರುವ ದೇಹ. ಹೆಣ್ಣಿನ ಆರ್ದ್ರ ಅಂತರ್ಯದ ಸಂವೇದನೆಯನ್ನು ಪರಿಚಯಿಸುವ ಕತೆ.

ಇಡೀ ಕತೆಯಲ್ಲಿ ಹಂಡೇವು ಪ್ರತಿಮಾತ್ಮಕ ಶಕ್ತಿಯಾಗಿ ಜೀವ ತಳೆದು ನಿಂತಿದೆ. ಆಡುಭಾಷೆಯಲ್ಲಿ ಹೆಣೆದಿರುವ ಕತೆಯಲ್ಲಿ ತಂದೆತಾಯಿಯರ ನೆನಪಿನ ಪ್ರತೀಕವಾಗಿ ಚಿತ್ರಿಸಿದೆ. ತುಂಬುತನ ಜಡವಸ್ತುವನ್ನು ಮನುಷ್ಯನಂತೆ ಪರಿವರ್ತಿಸುವ ಆಂಗ್ಲಸಾಹಿತ್ಯದ ಪರ್ಸನಾಪಿಕೇಶನ್ ಅಲಂಕಾರವನ್ನು ಪ್ರತಿನಿಧಿಸುತ್ತದೆ.

ದುಡ್ಡಿನಿಂದ ಅಳೆಯಲು ಬಯಸುವ ಜಯಶ್ರೀಗೆ ಅದು ಕೇವಲ ಮಾರಾಟದ ಸರಕು ಆಗಿ ಬಿಡುತ್ತದೆ.

ತಂದೆತಾಯಿಯ ಆತ್ಮವಾದ 'ಹಂಡೇವು' ಕತಾಂತ್ಯದಲ್ಲಿ ಶಿವಮ್ಮನ ಜೀವವೂ ಬೆಸೆದುಹೋಗುತ್ತದೆ. ಸಂಜೀವನಿಗೆ ಈ ಹಂಡೇವು ತನ್ನ ತಾಯಿಯ ಆತ್ಮದಂತೆ ಕಾಣಿಸತೊಡಗುತ್ತದೆ.

ಕಳೆದುಕೊಂಡವಳು

ಕೌಟುಂಬಿಕ ಶೋಷಣೆಯ ವಸ್ತುವಾಗುಳ್ಳ 'ಕಳೆದುಕೊಂಡವಳು' ಕತೆಯ ಸನ್ನಿವೇಷಗಳು ಮಧ್ಯಮವರ್ಗದ ಕುಟುಂಬಗಳ ಬವಣೆಗಳು ಮತ್ತು ಅದನ್ನು ಪರಿಹರಿಸಿಕೊಳ್ಳುವಲ್ಲಿ ಮಹಿಳೆ ಹೂಡುವ ತಂತ್ರಗಳನ್ನು ಚಿತ್ರಿಸುತ್ತದೆ. ಕುಟುಂಬದಲ್ಲೂ ನಡೆಯುವ ಸ್ತ್ರೀ ಶೋಷಣೆಯೇ ಕಥಾವಸ್ತು. ಉದ್ಯೋಗವಂತೆಯಾದ ಕೀರ್ತಿ ಬೇರೆ ಊರಿನಲ್ಲಿ ವಾಸಿಸುತ್ತಿದ್ದಾಳೆ. ಈ ಸಂದರ್ಭದ ದುರುಪಯೋಗ ಮಾಡಿಕೊಂಡ ಬಡಜಿಪುಣ ತಂದೆ ತನ್ನ ಇನ್ನೊಬ್ಬ ಮಗಳನ್ನು ಅಳಿಯನ ಕೊರಳಿಗೆ ಕಟ್ಟುತ್ತಾನೆ. ಮಧ್ಯಮವರ್ಗ ಕುಟುಂಬಗಳಲ್ಲಿ ನಡೆಯುವ ತಣ್ಣನೆಯ ಕ್ರೌರ್ಯ ಇದೇ. ಬಲಿಪಶು ಆಗುವವಳು 'ಹೆಣ್ಣು'. ಒಡಲಾಳದಲ್ಲಿ ಹುಟ್ಟಿದ ಕಿಚ್ಚನ್ನು ಕೀರ್ತಿ ತಡೆಯುತ್ತಾಳೆ.

ಗರ್ಭವತಿಯಾಗಿದ್ದ ತಂಗಿಯ ಅಸಹಾಯಕತೆ ಅವಳನ್ನು ಪ್ರತಿಭಟನೆ ಮಾಡದಂತೆ ತಡೆಯುತ್ತದೆ. ಇದು ಮಹಿಳೆಯರಿಗೆ ಇರುವ ಭಾವಸೆಳೆತ ಎಂಬ ದೌರ್ಬಲ್ಯ. ತನ್ನನ್ನು ತಾನು ಶೋಷಣೆ ಮಾಡಿಕೊಳ್ಳುವ ದೌರ್ಬಲ್ಯ. ಮಹೇಶನ ಮರಣದಿಂದ (ಕೀರ್ತಿ–ಸ್ವರ್ಣ) ಅಕ್ಕತಂಗಿ ಇಬ್ಬರೂ ವಿಧವೆಯರಾಗುತ್ತಾರೆ. ಈ ದುರಂತದ ನಂತರದಲ್ಲಿ ಕೀರ್ತಿ ಸ್ಪಂದಿಸಿದ ಮಾರ್ಗ ವಿಭಿನ್ನವಾದದ್ದು. 20ನೇ ಶತನಮಾನದ ಮಧ್ಯಯುಗದಲ್ಲಿ, ಸಾಮಾನ್ಯ ವರ್ಗದ ಕುಟುಂಬಗಳಲ್ಲಿ ಇದ್ದ ಸಾಂಪ್ರದಾಯಿಕ ಆಚರಣೆಗಳನ್ನು ಸ್ವರ್ಣ ಸ್ವೀಕರಿಸಿ ವಿಧವೆಯ ಅಲಂಕಾರ ತೊಡುತ್ತಾಳೆ. ಆದರೆ ಕೀರ್ತಿಯ ಇದುವರೆಗೂ ತಡೆದಿದ್ದ ಆಕ್ರೋಶಗಳ ಆಸ್ಫೋಟವಾಗುತ್ತದೆ. ಯಾವಾಗ ತನ್ನ ಗಂಡ ಇನ್ನೊಬ್ಬಳನ್ನು ಸ್ವೀಕರಿಸಿದ್ದನೋ ಅಂದೇ ನಾನು ಹೆಂಡತಿಯ ಪಟ್ಟ ಕಳೆದುಕೊಂಡೆ. ಅಂದೇ ಅವನನ್ನು ನಾನು ನಿರಾಕರಣೆ ಮಾಡಿ ಸ್ವತಂತ್ರಳಾಗಿ ಉಳಿದೆ. ಅವನ ಸಾವು ನನಗೆ ವಿಧವೆಯ ಪಟ್ಟ ನೀಡಲು ಸಾಧ್ಯವಿಲ್ಲ.

ಸಂಬಂಧಗಳು ಕೃತಕವಾಗಿ ಏರ್ಪಡುವುದಿಲ್ಲ. ಭಾವನಾತ್ಮಕತೆ ಇಲ್ಲದಿದ್ದರೆ ಅದರ ಆಪ್ತತೆ ಕಳೆದುಹೋಗುತ್ತದೆ. ಗಂಡನನ್ನು ಕಳೆದುಕೊಂಡರೂ ಮುಕ್ತಜೀವನವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಕೀರ್ತಿ ಗೆಲ್ಲುತ್ತಾಳೆ. ಮೂರ್ಖ ಆಚರಣೆಗಳನ್ನು, ಕೊಳಕು ಸಂಪ್ರದಾಯಗಳನ್ನು ಮೀರುವ ಕೀರ್ತಿ ಪಾತ್ರದ ನಿರ್ಮಾಣದಲ್ಲಿ, ಕತೆಗಾತಿ ಸ್ತ್ರೀ ಸಾಧ್ಯತೆಗಳಿಗೆ ಹೊಸಭಾಷ್ಯ ಬರೆದಿದ್ದಾರೆ. ಕೀರ್ತಿಯ ನಿರ್ಧಾರಗಳು ಆಧುನಿಕ ವಿಚಾರದತ್ತ ಸ್ತ್ರೀ ಸಂವೇದನೆ ಚಲಿಸುತ್ತಿರುವ ಎಲ್ಲೆಗಳನ್ನು ಗುರುತಿಸಬಹುದು.

ಕಳೆದುಕೊಂಡವಳಾದರೂ ನಮ್ಮ ಆಂತರ್ಯದಲ್ಲಿ ಸದಾ ಉಳಿಯುವ ಪಾತ್ರವಾಗುತ್ತಾಳೆ 'ಕೀರ್ತಿ'.

ತಾಯ್ತನ

ಬಾಲ್ಯದಲ್ಲಿ ತಾನು ಕಂಡ ಅಪ್ಪನ ಕ್ರೌರ್ಯ, ಮುಗ್ಧ ಬಾಲಕಿಯ ಮೇಲೆ ಬೀರಿದ ಪರಿಣಾಮ ದೊಡ್ಡವಳಾದ ನಂತರವೂ ವಿಚ್ಛಿದ್ರ ಸ್ಥಿತಿಯಲ್ಲಿಯೇ ಉಳಿದುಹೋಗಿತ್ತು. ಸಂಬಂಧ ಮುಖ್ಯವಲ್ಲ, ಅದು ಉಂಟುಮಾಡಿದ ಪರಿಣಾಮ ಅವಳ ಮನಸ್ಸಿನಲ್ಲಿ ಕಪ್ಪಛಾಯೆಯಾಗಿ ಉಳಿಕೆಯಾಗಿತ್ತು.

ತಾಯಿಯನ್ನು ದನಕ್ಕೆ ಬಡಿದಂತೆ ಹೊಡೆಯುತ್ತಿದ್ದ ಪಾಶವೀಯ ಪ್ರವೃತ್ತಿ, ತಂದೆಯನ್ನು ಮನಸ್ಸು ನಿರಾಕರಣೆ ಮಾಡಿತ್ತು. ತಂದೆ ಸಾಯುವ ಸ್ಥಿತಿಯಲ್ಲಿ ಅನುಭವಿಸುತ್ತಿದ್ದ ಯಾತನೆ ಪೃಥ್ವಿಗೆ ನೋವಾಗುವ ಬದಲು ತಂದೆ ಹಿಂಸೆ ಅನುಭವಿಸಲಿ ಎಂದೇ ಹಾರೈಸಿತ್ತು. ಇದೆಂತಹಾ ವಿಚಿತ್ರ ಮನಸ್ಸು.

ಪ್ರಥ್ವಿಗೆ ಮಗುವಾದಾಗ, ಗಂಡುಹೆಣ್ಣೆಂಬ ಭೇದ, ಗಂಡಿನ ಬಗ್ಗೆ ಇದ್ದ ಆಕ್ರೋಶ ನಿಕೃಷ್ಟತೆ ಒಂದೂ ನೆನಪಿರಲಿಲ್ಲ. ಪ್ರೀತಿಯಿಂದಲೇ ಗಂಡುಮಗುವನ್ನು ಸ್ವೀಕರಿಸಿದ್ದಳು. ತಾಯಿಯ ವಾತ್ಸಲ್ಯವೇ ಆ ಬಗೆಯದು.

ತಂದೆಯ ದುಷ್ಟ ಪ್ರವೃತ್ತಿ, ಇಡೀ ಗಂಡು ಜಾತಿಯ ಮೇಲೆ ತಿರಸ್ಕಾರ, ಕೋಪ ಮೂಡುವಂತೆ ಮಾಡಿತು.

ಮನುಷ್ಯ ಏಕೋ ಈ ಯುಗದಲ್ಲಿ ಯಂತ್ರವಾಗುತ್ತಿದ್ದಾನೆ ಎಂಬ ಮಾತು ಕತೆಯ ಕೇಂದ್ರ ವಾಕ್ಯವಾಗಿದೆ. ರಾಗದ್ವೇಷಗಳ ತಾಕಲಾಟದಲ್ಲಿ ಹೆಣ್ಣಿನ ಮನಸ್ಸು ತೊಯ್ದಾಡುವ ಬಗೆ, ಅದು ಎಬ್ಬಿಸುವ ವಿಚಿತ್ರ ಹೆಣ್ಣಿನ ಸ್ಥಿತಿ–ಮನಸ್ಥಿತಿ ಇವೆರಡರ ಅಂತರದಲ್ಲಿ ಉಂಟಾಗುವ ಬಿರುಕು, ಅದನ್ನು ಬೇರೊಬ್ಬ ಹೆಣ್ಣು ವೀಕ್ಷಿಸುವ, ಅರ್ಥೈಸಿಕೊಳ್ಳುವ ಸೂಕ್ಷ್ಮ ಮನಸ್ಥಿತಿಯನ್ನು ವಿವರಿಸುವ ಕತೆ 'ಒಳಗುದಿ.'

ಸಾಮಾನ್ಯ ವರ್ತನೆಗಳಿಗಿಂತ ಭಿನ್ನವಾಗಿ ವರ್ತಿಸುವ ಗೌರಿ, ಅವಳನ್ನು ಸಮೀಪದಿಂದ ವೀಕ್ಷಿಸುವ ಹೆಣ್ಣೊಬ್ಬಳ ಮನಃಪಟಲಗಳ ಭಾವನೆಗಳನ್ನು ಅಷ್ಟೇ ವಿರುದ್ಧ ಸ್ಥಿತಿಯಿಂದ ಅರ್ಥೈಸಿಕೊಳ್ಳುತ್ತಾ ಹೋಗುವ 'ಒಳಗುದಿ' ಹೆಣ್ಣಿನ ಮನದಳಲುಗಳನ್ನು ಹಾಗೇ ಅಸ್ಪಷ್ಟವಾಗಿಯೇ ಉಳಿಸಿಬಿಡುತ್ತದೆ. ಹೆಣ್ಣಿನ ವಾಸ್ತವತೆ ಮತ್ತು ಕಲ್ಪಕತೆ ಇವೆರಡರ ಅಂತರದಲ್ಲಿ ಅವಳ ವ್ಯಕ್ತಿತ್ವ ಅಡಗಿಹೋಗಿದೆ. ಮನೋ ಸಂವೇದನೆಗಳ ಸೂಕ್ಷ್ಮ ಎಳೆಗಳನ್ನು ಅದರಾಳದಲ್ಲೇ ಕಂಡುಕೊಳ್ಳಬೇಕಾಗಿದೆ. ಸ್ತ್ರೀ ಮನೋವಿಶ್ಲೇಷಣಾತ್ಮಕ ಕತೆ 'ಒಳಗುದಿ.'

ಗೌರಿಯಲ್ಲಿ ಅವಳ ವ್ಯಕ್ತಿತ್ವದಲ್ಲಿ ನಿರೂಪಕಿ ಕಂಡುಕೊಂಡ ಸ್ತರಗಳು ಯಾವುವು? ಇಂದ್ರಿಯಗಮ್ಯವಾದ ಹೆಣ್ಣಿನ ಬದುಕು ಅದರಾಚೆಗೆ ಅಮೂರ್ತತೆಗಳಲ್ಲಿ ಸೇರಿಹೋದ ಹೆಣ್ಣಿನ ವ್ಯಕ್ತಿತ್ವ ಇವೆರಡರ ಅಂತರವನ್ನು ಒಂದೇ ದೃಷ್ಟಿಕೋನದಿಂದ ಕಾಣುವಂಥದ್ದಲ್ಲ.

'ನನ್ನ ಮನಸ್ಸು ಅಬ್ಸೆನ್ಸು–ಪ್ರೆಸೆನ್ಸು' ಏರುಪೇರಿಗೆ ಗುರಿಯಾಗಿದೆ ಎಂದು ನಿರೂಪಕಿ ಹೇಳುವ ಮಾತುಗಳು, ಮನಸ್ಸಿನಲ್ಲಿ ಅಡಗಿಹೋದ ವಿರೋಧಾಭಾಸಗಳ ಅಭಿವ್ಯಕ್ತಿಯಾಗಿದೆ. 'ಮೈಮನ ಬಿರಿಯುವ ಸಂಭ್ರಮ ಮರುಕ್ಷಣವೇ ಎಲ್ಲಾ ಕಳೆದುಹೋದ ಖಾಲಿತನ ಇದೆಂತಹ ವೈರುಧ್ಯಭಾವ' ಲೇಖಕಿಯ ಪ್ರಶ್ನೆಗಳು.

ಹೆಣ್ಣಿನ ಮನದ ಕ್ಷಣಕ್ಷಣ ಗೊಂದಲಗಳನ್ನು, ಭಾವಪಲ್ಲಟಗಳನ್ನೂ ವಿವರಿಸುತ್ತದೆ. ಗೌರಿ–ನಿರೂಪಕಿ–ಇಬ್ಬರಲ್ಲೂ ಸಾಮ್ಯತೆ ಹೆಚ್ಚುತ್ತಾ ಒಂದೇ ಮಾದರಿಯ ಪಾತ್ರಗಳಾಗಿ ಬಿಡುತ್ತಾರೆ. ಇಷ್ಟೂ ವರ್ಷಗಳು ಒಂದೇ ಸ್ತರದಲ್ಲಿದ್ದ ಬದುಕು ಹೀಗೆ ಒಮ್ಮಿಂದೊಮ್ಮೆಗೆ ಏರಿಳಿತ ಕಾಣಲು ಸಾಧ್ಯವಾದದ್ದು ಹೇಗೆ? ಆಳಕ್ಕೆ ಹೋದಂತೆ ಅಸಾಧ್ಯವೆನಿಸುತ್ತಿದೆ.

'ಭೂಗರ್ಭದಲ್ಲಿ ತಣ್ಣಗಿರುವ ಲಾವಾರಸ ಆಸೆ ನಿರಾಸೆಗಳ ತಾಕಟಾಲ ಒಮ್ಮಿಂದೊಮ್ಮೆಗೆ ಜಾಗೃತವಾದಂತೆ...' ಹೆಣ್ಣಿನ ಮನದ ಅಸಂಗತ ಭಾವಗಳನ್ನು ಮೂರ್ತಗೊಳಿಸುವ ಪ್ರಯತ್ನವಾಗಿದೆ 'ಒಳಗುದಿ'. ಪ್ರೀತಿ ಸಂತಸದ ಸಲ್ಲಾಪವೋ, ಚಡಪಡಿಕೆಯೋ ಎಂಬ ಪ್ರಶ್ನೆ ಒಳಗುದಿಯ ಅಂತರಗಳನ್ನು ವಿಸ್ತರಿಸುತ್ತದೆ.

ಅನಿವಾರ್ಯ

'ಅನಿವಾರ್ಯ'ದೊಳಗಿನ ಅನಿವಾರ್ಯತೆಗಳು ಸಂದರ್ಭ ಸನ್ನಿವೇಷಗಳಿಗೆ ಮಾತ್ರ ಹೊಂದಿಕೊಳ್ಳಬೇಕು. ಆದರೆ ಮನುಷ್ಯ ಸಂಬಂಧಗಳೂ ಅನಿವಾರ್ಯವೇ? ಸಂಬಂಧಗಳು ಹುಟ್ಟಿಕೊಳ್ಳುವುದು ಆಪ್ತಭಾವದಿಂದ ತಾನೆ? ಎಲ್ಲವೂ ಅನಿವಾರ್ಯವೇ ಆದರೆ 'ಮನಸ್ಸಿಗೆ' ಬೆಲೆ ಇಲ್ಲವೇ?

ತಾಳಿ ಕಟ್ಟಿದ ಮಾತ್ರಕ್ಕೆ ಗಂಡುಹೆಣ್ಣಿನ ಸಂಬಂಧ ಹುಟ್ಟಿಕೊಳ್ಳುತ್ತದೆಯೇ? ಪ್ರೀತಿ ಕಳೆದುಹೋಗಿದ್ದರೂ ಒಟ್ಟಿಗೆ ಹೆಣಗೋದು ಅನಿವಾರ್ಯವೇ? ಹಾಗಾದರೆ ಗಂಡುಹೆಣ್ಣು ಸಂಬಂಧಗಳನ್ನು ಅನಿವಾರ್ಯತೆಗಾಗಿ ಉಳಿಸಬೇಕೆ? 'ಅದುಮಿಟ್ಟಕೊಳ್ಳೋದು ಕ್ರಮೇಣ ಕಳೆದುಕೊಳ್ಳುವುದು' ಇದೇನಾ ದಾಂಪತ್ಯ 'ಪ್ರೀತಿ'ಯೂ ಅನಿವಾರ್ಯವೇ ಆಗಿಹೋದರೆ? ನಾವು ಉಸಿರಾಡುತ್ತಿರುವುದಕ್ಕಷ್ಟೇ ಜೀವನವೂ ಅನಿವಾರ್ಯವಾಗಿಬಿಟ್ಟರೆ?

ಬದುಕಿನ ಮಧ್ಯೆ ಹುಡುಕುತ್ತಾ ಹೋದರೆ ಇಂತಹಾ ನೂರಾರು ಪ್ರಶ್ನೆಗಳಿವೆ. ಬದುಕಿನ ಅಂತಿಮ ಅನಿವಾರ್ಯತೆಯನ್ನು ಈ ಕತೆ ಹುಡುಕಾಡುತ್ತದೆ. 'ಒಳ್ಳೆತನ ಕೆಟ್ಟತನ ಎಲ್ಲ ವೀಕ್‌ನೆಸ್' ಆ ಕ್ಷಣದ ಮನಸ್ಥಿತಿ ಮೇಲೆ ಸತ್ಯ ನಿಲ್ಲುತ್ತದೆ. ಎಲ್ಲ ಕಾಲಕ್ಕೂ ಅದೇ ಸತ್ಯ ಆಗಿರುವುದಿಲ್ಲ ಎಂಬ 'ಪರಿ' ಹೇಳುವ ಮಾತು. ನಾವು ಕಟ್ಟಿಕೊಂಡಿರುವ ಬದುಕಿನ ಸತ್ಯಗಳನ್ನು ಒಂದು ಕ್ಷಣ ಸುಳ್ಳು ಮಾಡಿಬಿಡುತ್ತದೆ.

'ತಾಳಿ ಕಟ್ಟಿಕೊಂಡು ಹೆಣಗುವುದು ನನಗಿಷ್ಟವಿಲ್ಲ, ಗಂಡಹೆಂಡತಿ ಸಂಬಂಧ ಪ್ರೀತಿಯಿಂದ ಬಂಧಿಸಿರುತ್ತದೆ. ಗಂಡು ಹೆಣ್ಣು ಒಟ್ಟಿಗೆ ಇದ್ದರೆ ಹಾದರ ಎನ್ನುವುದಾದರೆ ನನಗೆ ಹಾದರದಲ್ಲಿ ಥ್ರಿಲ್ ಇದೆ' ಅನಿವಾರ್ಯ ಕತೆಯೊಳಗಿನ ಈ ಮಾತುಗಳನ್ನು ಜಾಹ್ನವಿಯವರು ಮಾತ್ರ ಹೇಳಲು ಸಾಧ್ಯ. ಇಂತಹಾ ಕಟುಸತ್ಯಗಳನ್ನು ನಾಗರಿಕ ಸಮಾಜ ಮುಚ್ಚಿಟ್ಟಿಕೊಳ್ಳಲು ಪ್ರಯತ್ನಿಸುತ್ತದೆ. ಸ್ತ್ರೀ ಸಂವೇದನೆಗಳು ಬಯಸುವ ಎಷ್ಟೋ ಸತ್ಯಗಳನ್ನು ಅನಿವಾರ್ಯತೆಗಳನ್ನು ಪುರುಷ ಸಮಾಜ ಮುಚ್ಚಿಡುತ್ತಲೇ ಬಂದಿದೆ. ಗಂಡು ಹೆಣ್ಣುಗಳ ವಿಚಿತ್ರ ಮುಖವಾಡಗಳನ್ನು 'ಅನಿವಾರ್ಯ' ಹೊರಗೆಳೆಯುತ್ತದೆ. ವಿವಾಹೇತರ ಸಂಬಂಧಗಳೂ ನಿಜ ಹೇಳಬೇಕೆಂದರೆ ಅನಿವಾರ್ಯವೇ ಆಗಿರುತ್ತದೆ.

ನೆಲಬಾನಿನ ಗೆಳೆತನ

ನೆಲ-ಬಾನು ಎರಡೂ ಸಮಾನಾಂತರ ದೂರವನ್ನು ಕಾಯ್ದುಕೊಂಡೇ ಬೆಸೆದುಹೋಗಿರುವ ವೈಚಿತ್ರ್ಯಗಳು. ನೆಲಬಾನಿನ ಗೆಳೆತನ ಈ ಪದದ ಗೂಢಾರ್ಥವೇ ಪ್ರಭಾ ಪಾರ್ವತಿ ಪಾತ್ರಗಳ ನಡುವಿನ ಅಂತರವನ್ನು ಪುಷ್ಟೀಕರಿಸುತ್ತಿದೆ.

ಅಂತರಂಗ ಸೌಂದರ್ಯವೇ ಪ್ರಧಾನವಾದದ್ದು ಬಹಿರಂಗ ಕೇವಲ ತೋರಿಕೆ ಮಾತ್ರ ಎಂಬ ನಿಗೂಢ ಸತ್ಯವನ್ನು ಪ್ರಭಾ ಪಾರ್ವತಿ ಪಾತ್ರಗಳ ಮೂಲಕ ಕತೆಗಾತಿ ಮನವರಿಕೆ ಮಾಡಿಕೊಡುತ್ತಾರೆ.

ಬಾಹ್ಯ ಸೌಂದರ್ಯಕ್ಕೆ ಪ್ರಾಶಸ್ತ್ಯ ಕೊಡುವ ಪ್ರಭಾ, ಪಾರ್ವತಿಯ ಜೀವನ ಮೌಲ್ಯಗಳೂ ಮತ್ತು ಆಂತರಂಗಿಕ ಸತ್ಯಗಳನ್ನು ಕಂಡ ನಂತರ ಸ್ನೇಹ ಮತ್ತು ಪ್ರೀತಿಯ ನಡುವಿನ ಅಂತರದ ಸೂಕ್ಷ್ಮತೆಯನ್ನು ಗ್ರಹಿಸಿದಳು.

'ನಾವು ಏನೂಂತ ನಮ್ಗೆ ಗೊತ್ತಾದ್ರೆ ಸಾಕು' ಎಂಬ ಹೇಳಿಕೆ ನೆಲಬಾನಿನ ಗೆಳೆತನ ಕತೆಯ ಗ್ರಹಿಕೆಯೂ ಆಗಿದೆ. ನೆಲಬಾನು ಪ್ರೀತಿಪ್ರೇಮವನ್ನು ವ್ಯಾಖ್ಯಾನಿಸುತ್ತದೆ. ಕತೆಯ ಸಂವಿಧಾನದಲ್ಲಿ ಕಥಾನಕತೆಯ ಬೆಳಸು ಮರೆಯಾಗಿ ಮಾನವೀಯ ಮೌಲ್ಯಗಳು ಸ್ಥಾನ ಪಡೆದಿವೆ. ಸತ್ಯಾಸತ್ಯಗಳ ತಾರ್ಕಿಕತೆಗಿಂತ, ಅದರ ಅರ್ಥೈಸುವಿಕೆಯಲ್ಲಿ ಪಾರ್ವತಿಯ ಪ್ರಜ್ಞೆ ಸ್ತ್ರೀವಾದಿ (ಪುರುಷ ಸಂಬಂಧಗಳಿಗಿಂತ) ಪರಂಪರೆಯನ್ನು ದಾಖಲಿಸುತ್ತದೆ.

ಸ್ತ್ರೀವಾದದ ಬಹುಮುಖ್ಯ ಧಾರೆಯೆಂದರೆ ಆತ್ಮಘನತೆಯನ್ನು ಸಾಕ್ಷಾತ್ಕರಿಸಿಕೊಳ್ಳುವಿಕೆ. ತುಳಿಯಲ್ಪಟ್ಟ ಸ್ತ್ರೀ ಶಕ್ತಿಧಾರೆ ಆಧುನಿಕ ಸಂದರ್ಭದಲ್ಲಿ ಸ್ವಾವಲಂಬನ ದೃಷ್ಟಿಕೋನ ಪಡೆದವು. ಮರೆಯಾಗಿದ್ದ ಸ್ವಂತಿಕೆಗಳು, ಶಿಕ್ಷಣದ ಪ್ರಭಾವದಿಂದ ಮುಕ್ತ ಸಮಾಜಕ್ಕೆ ಪ್ರತಿಪಾದನೆಯಾದವು. ಸ್ತ್ರೀ ಸಮಾನತೆ ಸ್ಫೋಟಕ ಶಕ್ತಿಯಂತೆ ಅನಾವರಣಗೊಂಡು ತಮ್ಮ ವಿಚಾರ ಸಾಧ್ಯವಾಗಲೇಬೇಕೆಂಬ ಹಠ ತೊಟ್ಟಂತೆ ಇವರ ಪಾತ್ರಗಳು ವರ್ತಿಸುತ್ತವೆ. ಸ್ತ್ರೀ ಶಿಕ್ಷಣ, ಆರ್ಥಿಕ ಸ್ವಾವಲಂಬನೆ, ಹಿತಾಸಕ್ತಿಯ ಪೂರೈಕೆ, ಸಮಾನತೆಯ ಹಂಬಲ ಇಂತಹಾ ಧೋರಣೆಗಳು ಸ್ತ್ರೀವಾದ ಚಿಂತನೆಯ ಹೊಸದಿಕ್ಕನ್ನು ಕೊರೆಯತೊಡಗಿದವು. ಜಾಹ್ನವಿಯವರ ಬಸವಿ, ಹುಡುಕಾಟ, ಹುಯ್ಯೋ ಹುಯ್ಯೋ ಮಳೆರಾಯ, ಬೋರಜ್ಜಿ, ಬಸವ ಹಂದಿಹಿಂಡು ಸ್ವಂತಿಕೆಯನ್ನು ಪ್ರಶ್ನಿಸಿಕೊಳ್ಳುವ ಮತ್ತು ಆತ್ಮಸಮಾನತೆಯನ್ನು ಕಂಡುಕೊಳ್ಳುವ ಕತೆಗಳಾಗಿವೆ.

ಬಸವಿ

ಅಕ್ಷರದ ಪರಿಣಾಮದಿಂದ ದಿವ್ಯ ಸಂಸ್ಕಾರಗೊಂಡ ದೇವೀರಿ ಪರಿಸ್ಥಿತಿಯನ್ನು ಎದುರಿಸಿ, ಹೊಸ ತಂತ್ರದಿಂದ ವಿಷಮತೆಯನ್ನು ಪರಿಹರಿಸುವ ಪಾತ್ರವಾಗಿ 'ಬಸವಿ' ಮೆರೆಯುತ್ತಾಳೆ. ತನ್ನ ಸಿಕ್ಕುಗಳನ್ನು ತಾನೇ ನಿವಾರಿಸಿಕೊಳ್ಳುತ್ತಾ ಸಮಸ್ಯೆ ಒಡ್ಡುವ ಪುರುಷ ಸಮಾಜಕ್ಕೆ ಅವರವರಿಗೇ ತೊಡಕು ನಿರ್ಮಿಸಿ, ತನ್ನ ತೊಡರನ್ನು ನಿಧಾನವಾಗಿ ಬಿಡಿಸಿಕೊಳ್ಳುವ ನಕ್ಕು ಹುಬ್ಬೇರಿಸುವಂತೆ ಮಾಡುವ ಲಕ್ಷ್ಮಿ ಮತ್ತು (ಬಸವಿ) ದೇವೀರಿ ಮಾದರಿ ಸ್ತ್ರೀ ಪಾತ್ರಗಳಾಗಿ ರಂಜಿಸುತ್ತಾರೆ.

ಸಿನಿಮೀಯ ಮಾದರಿಯಲ್ಲಿ ಬಸವಿ ಹೂಡುವ ಉಪಾಯ ರೊಮ್ಯಾಂಟಿಕ್ ನಾಟಕಗಳನ್ನು ನೆನಪಿಸುತ್ತದೆ. ಕತೆಯ ಅಂತ್ಯ ನಾಟಕೀಯ ತಿರುವು ಪಡೆದಿದೆ. ಕತೆಯ ತಂತ್ರ ವಿಭಿನ್ನವಾಗಿದೆ. ಲಾಭ ಬದುಕ ಪುರುಷ ಸಮಾಜಕ್ಕೆ ಸವಾಲಾಗುವ 'ದೇವೀರಿ', ಕನ್ನಡ ಕಥಾ ಸಾಹಿತ್ಯದಲ್ಲೇ ವಿಶಿಷ್ಟ ಪಾತ್ರವಾಗಿದೆ.

ಮೌಢ್ಯಗಳ ಬೇಗುದಿಯಲ್ಲಿ ಬೇಯುತ್ತಿರುವ ಮಹಿಳಾ ವರ್ಗಕ್ಕೆ ಹೊಸ ಆಶೋತ್ತರಗಳನ್ನು ಪರಿಚಯಿಸುತ್ತಿದೆ.

ಹುಡುಕಾಟ

ನಮ್ಮ ದೇಹ ಕಾಮ ಮನಸ್ಸುಗಳು ವಿರೋಧೀಭಾವದೊಂದಿಗೆ ಪರಸ್ಪರ ಬೆಸೆದುಕೊಂಡಿವೆ. ವ್ಯಕ್ತಿತ್ವಗಳ ನಿಜವಾದ ಮೂಲ ಎಲ್ಲಿ ಅಡಗಿದೆ. ಷಣ್ಮುಗಪ್ಪನನ್ನು ತೀರ ಹತ್ತಿರದಿಂದ ವೀಕ್ಷಿಸಿದಾಗ ಅವನಲ್ಲಿ ಕಂಡಿದ್ದು ತಂದೆಯ ದುಷ್ಟ ಪ್ರತಿರೂಪವನ್ನೇ. ತಂದೆಯ ಕಾಠಿಣ್ಯತೆ ವ್ಯಕ್ತಿತ್ವವನ್ನು ದ್ವೇಷಿಸುತ್ತಿದ್ದ ನಿರೂಪಕಿ ಹುಡುಕಾಟದ ಮೂಲಕ ಕಂಡುಕೊಂಡ ಸತ್ಯ ಯಾವುದು?

ಅಳಬಾರದು, ನಗಬಾರದು, ಮಾತನಾಡಬಾರದು ತಂದೆಯ ಒರಟು ಶಿಸ್ತುಗಾರಿಕೆಯಿಂದ ಮನೆ ಮೂಖರೋದನ ಮಾಡಿದಂತಾಗುತ್ತಿತ್ತು.

ಮನುಷ್ಯ ಮೇಲೆ ಆವರಿಸಿಕೊಂಡಿರುವ ಪ್ರೀತಿ, ಸ್ನೇಹ ಸೂತ್ರ ಸೌಜನ್ಯಗಳು ತಂದೆಯಲ್ಲಿ ಕಾಣದೆ ನರಳಿದಳು. ತಾನು ವಿರೋಧಿಸಿದ್ದ ತಂದೆಯ ಕಠಿಣತೆಗಳನ್ನು ತಾಯಿ ಒಪ್ಪಿಕೊಂಡಿದ್ದು ಸೋಜಿಗ.

'ಕಲ್ಲು ಕಲ್ಲಾಗಿಯೇ ಉಳಿಯಬೇಕು. ಹಾಗಿಲ್ಲದಿದ್ದರೆ ಅದರ ನೈಜತೆ ಕಳೆದುಹೋಗುತ್ತದೆ. ವ್ಯಕ್ತಿಗಳು ಅವರು ಇರುವಂತೆಯೇ ಒಪ್ಪಿಕೊಳ್ಳಬೇಕು. ತಾಯಿ, ವ್ಯಕ್ತಿಯನ್ನು ಪರಿಭಾವಿಸುವಂತೆ ತನಗೇಕೆ ಸಾಧ್ಯವಿಲ್ಲ? ತಂದೆಯ 'ಕಲ್ಲು'ತನವನ್ನು ಅವಳೇಕೆ ಸಹಿಸಿಕೊಂಡಳು? ಎಷ್ಟೋ ನಿಗೂಢ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ನಿರೂಪಕಿ ಹೇಳುವ ಸತ್ಯ 'ವ್ಯಕ್ತಿಗಳು ಹಾಗೆ ನೋಟಕ್ಕೆ ಸಿಲುಕುವುದೇ ಬೇರೆ ನಿಲುಕದ ವ್ಯಕ್ತಿತ್ವವೇ ಬೇರೆ' ದ್ವಂದ್ವಗಳಲ್ಲಿ ತೊಳಲುತ್ತಾರೆ.

ಷಣ್ಮುಗಪ್ಪ ಸಾಮಾನ್ಯ ಉಪನ್ಯಾಸಕನಾಗಿದ್ದಾಗ ಅವನ ಸರಳಿಕೆ, ಸಜ್ಜನಿಕೆ, ಆದರ್ಶ, ಅಧಿಕಾರಿಯಾದ ಮೇಲೆ ತೋರುವ ದರ್ಪ ಒಂದೇ ವ್ಯಕ್ತಿಯ ಎರಡು ವಿಭಿನ್ನ ವ್ಯಕ್ತಿತ್ವ ನಿರೂಪಕಿಯ ಮನಸ್ಸಿನಲ್ಲಿ ವಿಚಿತ್ರ ತಳಮಳವನ್ನೆಬ್ಬಿಸಿತು. ಹಾಗಾದರೆ ಯಾವುದು ವ್ಯಕ್ತಿಗತ ಸತ್ಯ?

ತಂದೆಯ ಅತಿಶಿಸ್ತು, ದರ್ಪ ಹುಟ್ಟಿನಿಂದಲೇ ಬಂದದ್ದು. ಷಣ್ಮುಗಪ್ಪ ಹಣದ ಮದದಿಂದ ತನ್ನ ಮೂಲತ್ವವನ್ನು ಕಳೆದುಕೊಂಡಿದ್ದ. ಮೂಲತನ ಕಳೆದುಕೊಂಡರೆ ವ್ಯಕ್ತಿತ್ವವೇ ಕಳೆದುಹೋಗುತ್ತದೆ. ಷಣ್ಮುಗಪ್ಪ ಯಾವ ಸ್ಥಿತಿಯಿಂದ ಮೇಲೆ ಬಂದನೋ ಅದನ್ನು ಅವಮಾನಿಸಿದ್ದು, ಅವನ ಮೇಲೆ ತಿರಸ್ಕಾರಕ್ಕೆ ಕಾರಣವಾಯಿತು. ನಿರೂಪಕಿಯ ಬದುಕಿನ ಗತಿ ತಿರುವು ಪಡೆದಿದ್ದೇ ಈ ಆಘಾತದಿಂದ. ಮನುಷ್ಯನ ಮೇಲೆ ಮುಗಿಬಿದ್ದಿರುವ 'ಕಾಲ' ಎಂಬ ಸೂತ್ರಕ್ಕೇ ವೈರುಧ್ಯಗಳಿರುವಾಗ, ಮನುಷ್ಯನ 'ಹುಡುಕಾಟ'ಕ್ಕೆ ಏಕಸೂತ್ರವಿದೆಯೇ?

ಹುಯ್ಯೋ ಹುಯ್ಯೋ ಮಳೆರಾಯ

ರಾಗದ್ವೇಷಗಳನ್ನು ತೊರೆದು ಪ್ರಶಾಂತ ದೇಗುಲದಂತೆ ನಿರಾಳವಾಗಬೇಕು ಎಂದು ಬಯಸುವ 'ಇಂದು' 'ಕಿಟಕಿಯ ಸರಳುಗಳನ್ನು ಹಿಡಿದು ನಿಂತಿದ್ದಳು' ಕತೆಯ ಆರಂಭದ ಸಾಲು ಇಂದು ಬಂಧನಗಳಲ್ಲಿ ನರಳುವ ಸಂಕೇತವೇ ಆಗಿದೆ. ಹುಯ್ಯುತ್ತಿದ್ದ ಮಳೆ ಬಾಲ್ಯವನ್ನು ನೆನಪಿಸುತ್ತಿತ್ತು.

'ನೀನೇ ಯಾವುದನ್ನು ಆಸೆಪಡಬಾರದು; ನಿನಗೆ ಏನು ಬೇಕೆಂದು ನಾನು ನಿರ್ಧರಿಸುತ್ತೇನೆ' ಎನ್ನುವ ಗಂಡನ ದಿಗ್ಬಂಧನದಲ್ಲಿ, ಹೆಣ್ಣಿನ ಸೂಕ್ಷ್ಮತೆಗಳನ್ನು ಕಳೆದುಕೊಂಡು ನಿರ್ಭಾವುಕಳಾಗಿದ್ದಳು. ಗಂಡನ ಸಾನಿಧ್ಯ ಯಾಂತ್ರಿಕತೆ ಜೀವನದಿಂದ ಬೇಸತ್ತಿದ್ದಳು.

'ಗಂಡ ಟಿವಿ. ಫ್ಯಾನ್ ಸ್ವಿಚ್ ಆನ್ ಮಾಡಿದಾಗ ಇವಳು ಚಲಿಸಲು ಆರಂಭಿಸುತ್ತಿದ್ದಳು' ಎಂಬ ಮಾತಿನ ಕ್ರೂರವ್ಯಂಗ್ಯ ಪ್ರತಿ ಮಹಿಳೆಯ ಬದುಕಿನ ದುರಂತವೂ ಆಗಿದೆ.

ಕೌಟುಂಬಿಕ ಹಿಂಸೆಯನ್ನು ತಿದ್ದುಪಡಿ ಮಾಡಲು ಯಾವ ಕಾನೂನು ಕಟ್ಟಳೆಗಳಿಂದ ಸಾಧ್ಯ? 'ಎಲ್ಲವೂ ನಿನ್ನಲ್ಲಿಯೇ ಇದೆ ಮಗು; ಆದರೆ ನಿನ್ನ ಕೈಯಲ್ಲಿದೆ ಎನ್ನುವುದನ್ನು ಮರೆತಿದ್ದೀಯ' ಎಂಬ ಫಾದರ್ ಹೇಳುವ ಮಾತು ಇಂದುವಿಗೆ ಪರಿಹಾರದ ಮಾರ್ಗವನ್ನು ತೋರಿಸಿತು. ಚೇತನ ತುಂಬಿತು. 'ಬೀಗ ತೆರೆದು ಹೊರಬಂದವಳಿಗೆ ಹೊಸಜೀವನ ದರ್ಶನ ಆಗಿತ್ತು.'

'ಬೀಗದ ಕೈ ನನ್ನ ಬಳಿ ಇರುವಾಗ ವ್ಯತ್ಯಾಸವೇನು?' ಎಂಬ ಕತೆಯ ಕಡೆಯ ನುಡಿ, ದಿಕ್ಕಿಲ್ಲದ ಹೆಣ್ಣುಗಳಿಗೆ ದಿಕ್ಕಾಗಬಲ್ಲದು. ಹುಯ್ಯುವ ಮಳೆ ಎಲ್ಲವನ್ನೂ ಕೊಚ್ಚಿಹಾಕುವ ಪ್ರತೀಕವಾಗುತ್ತದೆ. ಹುಯ್ಯುವ ಮಳೆ ಶಬ್ದ ಭಾವಗೀತೆಯ ಸುಂದರ ಅನುಭವ ನೀಡುತ್ತದೆ.

'ಒಡಲಲ್ಲಿ ಮಂದಾಗ್ನಿಯ ಯಾರೂ ಕಾಣದಂತಿರಿಸಿದೆ,

ನೀ ಬೆರೆಸುವ ಬೇಧಕ್ಕೆ ಬೆರಗಾದೆನಯ್ಯಾ ರಾಮಾನಾಥ.'

ಬೋರಜ್ಜಿ, ಬಸವ, ಹಂದಿ ಹಿಂಡು:

ಬಗಲಲ್ಲಿ ಜೋಳಿಗೆ, ತಲೆಮೇಲೆ ಪಡಲಿಗೆ ಹೊತ್ತು ತಿರುಗುವ ಜೋಗಿತಿ ಬಸಜ್ಜಿಗೆ ಬಡತನವಿದ್ದರೂ, ಪ್ರಾಣಿಪ್ರೀತಿಗೆ ಬಡತನವಿರಲಿಲ್ಲ.

ತನ್ನ ಜೋಳಿಗೆಗೆ ಬಿದ್ದ ಹಣ್ಣು ಊರ ಬಸವನಿಗೆ ತಿನ್ನಿಸುವುದರಲ್ಲಿ ತೃಪ್ತಿ ಕಾಣುತ್ತಿದ್ದಳು ದಯಾಮಯಿ ಬೋರಜ್ಜಿ. ತನ್ನವರನ್ನೆಲ್ಲಾ ಕಳೆದುಕೊಂಡರೂ ಪ್ರಾಣಿಗಳಲ್ಲಿ ಪ್ರೀತಿಯನ್ನು ಕಂಡುಕೊಂಡ ಬೋರಜ್ಜಿ ಜೀವನಪ್ರೀತಿಗೆ ಮಾದರಿ ಪಾತ್ರವಾಗಿದ್ದಾಳೆ. ಪ್ರಾಣಿದಯೆಗಿಂತ ನೀತಿ ಬೇರೇನು? ಜೀವಿತಾವಧಿಯಲ್ಲಿ ಗಂಡನಿಗಾಗಲಿ, ಸವತಿಗಾಗಲೀ ಅವಳ ಮಕ್ಕಳಿಗಾಗಲೀ ಒಂದು ಮಾತಾಡಲಿಲ್ಲ.

ಎಲ್ಲ ನೋವನ್ನು ಹೊಟ್ಟೆಗೆ ಹಾಕಿಕೊಂಡಳು ನಗುನಗುತ್ತಲೇ ಎಲ್ಲ ಮರೆತಳು, ಎಲ್ಲ ಮರೆಸಿದಳು. ಪ್ರಾಣಿಸೇವೆಯಲ್ಲಿ ಜೀವನ ನೂಕಿದಳು. ನಮ್ಮ ಸುತ್ತಮುತ್ತ ಇಂಥಾ ಎಷ್ಟೋ ಜೀವ ಸಂದು ಹೋಗಿರಬಹುದು. ಕತೆಗಾತಿಯ ಸಂವೇದನೆ ಇಂತ ಜೀವಗಳಿಗೆ ಮಿಡಿಯುತ್ತಿದೆ.

'ಸಕಲ ಪ್ರಾಣಿಗಳಿಗೆ ಲೇಸ ಬಯಸುವನೇ ಜೀವಾತ್ಮ,

ಕೂಡಲ ಸಂಗಮದೇವಾ.'

ಪುರುಷ ಭೋಗಿಸುವ ಹಕ್ಕು ತನ್ನದೇ ಎಂಬ ದುರಹಂಕಾರದಿಂದ ಕೇಂದ್ರಿತವಾಗಿದ್ದಾನೆ. ಕುಟುಂಬ ಸಮಾಜ, ಸರ್ಕಾರ, ಪುರುಷ ಸಮಾಜ ಎಲ್ಲವೂ ಮಹಿಳೆ ಭಾವನೆಗಳನ್ನು ಹಕ್ಕುಗಳನ್ನು ದಮನ ಮಾಡುತ್ತಿದೆ. ಅವಳನ್ನು ಅಸಹಾಯಕ ನಿಲುವಿಗೆ ತಳ್ಳುತ್ತಿದೆ. ಆಧುನಿಕ ಮಹಿಳೆ ಎಷ್ಟೇ ಕಾತರಳಾದರೂ ಸ್ತ್ರೀ ಸ್ವಾತಂತ್ರ್ಯಕ್ಕೆ ಹೋರಾಡಿದರೂ ಅದು ಕೇವಲ ಭಾಷಣವಾಗಿಯೋ ಸಾಹಿತ್ಯವಾಗಿಯೋ ಉಳಿಯುತ್ತದೆ. ವಾಸ್ತವವೇ ಬೇರೆ. ಗೃಹಿಣಿ, ವೃದ್ಧೆ, ಸ್ತ್ರೀ ಕಾರ್ಮಿಕವರ್ಗ, ವಿಧವೆ, ಅನಾಥ ಹೆಣ್ಣುಮಕ್ಕಳು ನಾಗರಿಕ ಎನ್ನುವ ಸಮಾಜದಲ್ಲಿ ಅಸಹಾಯಕರಾಗಿಯೇ ಉಳಿಯುತ್ತಾರೆ. ಸ್ತ್ರೀ ವಾದದ ಅಬ್ಬರದಲ್ಲಿ ಜಾಹ್ನವಿಯವರು ಇಂತಹ ನಿಸ್ಸಹಾಯಕ ಸ್ತ್ರೀ ಪಾತ್ರಗಳನ್ನು ಮರೆಯದೆ, ಸಮಾಜದ ವಾಸ್ತವಿಕ ಚಿತ್ರವನ್ನು ಹೋರಾಟ, ಆಸರೆ, ಕನಸು, ಜೀರ್ಣ, ನೆಪ, ಆಶ್ರಿತರು, ಮುಂತಾದ ಕತೆಗಳಲ್ಲಿ ಪ್ರತಿಪಾದಿಸಿದ್ದಾರೆ.

ದೇವಾರ್ ಬಂದಾವ್ ಬನ್ನಿರೋ

ದೇವರು ಮೈಮೇಲೆ ಬಂದಂತೆ ನಟಿಸುತ್ತಾ ವಿಷಮ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ಉಪಾಯ ಹೂಡಿ, ಸಂಪ್ರದಾಯವಾದಿ ಸಮಾಜಕ್ಕೆ ಸಿಡಿದು ನಿಲ್ಲುವ 'ಚಿಕ್ಕಮ್ಮ' ಜಾಣ್ಮೆ ಮತ್ತು ಧೈರ್ಯ, ವಾತ್ಸಲ್ಯವನ್ನು ತುಂಬಿ ನಿಂತ ವ್ಯಕ್ತಿತ್ವ.

ಇಂತಹಾ ಸ್ತ್ರೀ ಪಾತ್ರಗಳಿಂದಲೇ ಕತೆಗಾತಿ ಆಧುನಿಕ ಸಂವೇದನೆಯ ಸ್ಪರ್ಶ ಮೂಡಿಸುತ್ತಾರೆ. ಶಿವು ಸಂಬಂಧಿಯೇ ಆಗಿದ್ದರೂ ಕೂಡಿಕೆ ಮಾಡಿಕೊಳ್ಳಲು ನಿರಾಕರಿಸಿ, ಮನೆಯಾಳು 'ಕನ್ನ'ನಲ್ಲಿ ತನ್ನ ಪ್ರೀತಿಯನ್ನು ಕಂಡುಕೊಳ್ಳುವ ಚಿಕ್ಕಮ್ಮ, ಅವಳ ಸಮಸ್ಯೆಗೆ ತಾವೇ ಪರಿಹಾರ ಕಂಡುಕೊಳ್ಳುವ ಜ್ವಲಂತ ಪಾತ್ರ ಕತೆಗಾತಿ, ದೂರ ನಿಂತು ಸಂಗತಿಗಳನ್ನು ಗಮನಿಸುವ 'ರೇಣುಕಾ'ಳ ಪಾತ್ರದಿಂದ ಕತೆ ಕಟ್ಟುತ್ತಾ ಹೋಗುತ್ತಾರೆ.

ಪ್ರಗತಿಪರ ದೃಷ್ಟಿಕೋನ ಹೊಂದಿದ ರೇಣು ಇಡೀ ಪ್ರಕರಣವನ್ನು ಭಿನ್ನವಾಗಿ ನಿರ್ಧರಿಸುತ್ತಾಳೆ. ಚಿಕ್ಕಮ್ಮನ ಧೋರಣೆಗೆ ಪ್ರೇರಣೆ ನೀಡುತ್ತಾಳೆ. ಮನೆಯವರ ಮೌಢ್ಯಗಳಿಗೆ ಅದರ ಮಾರ್ಗದಲ್ಲೇ ಉತ್ತರಿಸುವ ಚಿಕ್ಕಮ್ಮ, ಮನೆಯಾಳನ್ನು ಲಗ್ನವಾಗುವ ಆಸ್ಫೋಟಕಾರಿ ತೀರ್ಮಾನ ಧರಿಸುತ್ತಾಳೆ.

ಇಂತಹಾ ವಿಭಿನ್ನ ಪಾತ್ರಗಳಿಂದ ಜಾಹ್ನವಿಯವರು ಮಹಿಳೆಯ ಸಾಧ್ಯತೆಗಳನ್ನು ಪುಷ್ಟೀಕರಿಸುತ್ತಾರೆ. ತಾನು ಮನೆಯಾಳು ಎಂಬ ಅರಿವು ಕನ್ನನನ್ನು ಕಾಡಲಾರಂಭಿಸಿ ಚಿಕ್ಕಮ್ಮನವರನ್ನು ವರಿಸಲು ಹಿಂಜರಿಯುತ್ತಾಳೆ.

ಸೋತರೂ ಪರಿಸ್ಥಿತಿಯನ್ನು ಗೆದ್ದ ಚಿಕ್ಕಮ್ಮ ದೇವರು ಮೈಮೇಲೆ ಬಂದಂತೆ ನಟಿಸುತ್ತಾ, ವ್ಯವಸ್ಥೆಯ ಚೌಕಟ್ಟಿನಲ್ಲೇ ಮೌನಿಯಾಗಿ ಉಳಿದುಬಿಡುತ್ತಾಳೆ.

ಅನಕ್ಷರಸ್ಥರೂ ತೋರುವ ಜಾಣ್ಮೆ, ಬುದ್ಧಿಮತ್ತೆ ಮುಖ್ಯವಾಗುತ್ತದೆ.

ಕನಸು

ಸಂಭಾವಿತನ ಮುಖವಾಡದ ಹಿಂದೆ ಅಡಗಿರುವುದು ದೌರ್ಜನ್ಯವೇ. ಮನುಷ್ಯನ ನಿಜವಾದ ಮುಖ ಕ್ರೌರ್ಯತೆ. ನಾಗರಿಕನಾದಂತೆಲ್ಲಾ ಸೌಜನ್ಯ ಮತ್ತು ದೌರ್ಜನ್ಯತೆಯ ಅಂತರ ಕಡಿಮೆಯಾಗುತ್ತಿದೆ. ಅಂತರವೇ ತಪ್ಪಿಹೋದ ದಿನ ಮನುಷ್ಯ, ಮನುಷ್ಯನಾಗಿ ಉಳಿದಿರುವುದಿಲ್ಲ. ಇದೇ ಆಧುನಿಕತೆಯ ವೈಫಲ್ಯತೆ.

ಪ್ರಸ್ತುತ ಕತೆಯ ನಾಯಕ ಅಣ್ಣಯ್ಯ ಹಳ್ಳಿಗೆಲ್ಲ ತಾನೊಬ್ಬನೇ ಇಂಜಿನಿಯರ್ ಎಂಬ ಅಹಂಕಾರ ಉಳಿಸಿಕೊಳ್ಳಲು ಬೇರೆ ಪ್ರತಿಭೆಗಳು ಮೇಲೇಳದಂತೆ ಹೂಡುವ ಹೂಟ, ಮನುಷ್ಯನ ನಯವಂಚಕತನದ ಒಂದು ಮುಖವಾಡ. ಸಹಾಯ ನೀಡುವ ನೆಪದಲ್ಲಿ ಯುವ ಪ್ರತಿಭೆಯನ್ನು ಕೊಲ್ಲುತ್ತಾನೆ. ಎಷ್ಟೋ ವಿದ್ಯಾರ್ಥಿಗಳು ಅವನ ಮನೆಯ ಅಟೆಂಡರ್, ವಾಚ್‌ಮನ್, ಅಡಿಗೆಯವರಾಗಿ ಕೆಲಸದಾಳಾಗಿ ದುಡಿಯುವ ಸನ್ನಿವೇಶ ಸೃಷ್ಟಿ ಮಾಡುತ್ತಾನೆ. ಇಟ್ಸ್ ಎ ಕೈಂಡ್ ಆಫ್ ಎಕ್ಸ್‌ಪ್ಲಾಯಟೇಶನ್. ದೈಹಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ, ಒಬ್ಬನನ್ನೊಬ್ಬನು ಬೇಟೆಯಾಡುವ, ಆಕ್ರಮಣಕಾರಿ ಪ್ರವೃತ್ತಿ ಮಾನವನದು. ಯುವ ಜನಾಂಗದ ಕನಸುಗಳು ಕನಸಾಗಿಯೇ ಉಳಿಯುತ್ತದೆ. ಅಣ್ಣಯ್ಯನ ಮುಖವಾಡದ ಹಿಂದಿನ ನಿಜವಾದ ಮುಖ ಕಾಣುವುದೇ ಇಲ್ಲ. ಚಂದ್ರ ವಿದ್ಯಾವಂತನಾಗಿ ಬರುತ್ತಾನೆ ಎಂಬ ಸಾಕವ್ವನ ಕನಸು, ತನ್ನನ್ನು ಲಗ್ನವಾಗುತ್ತಾನೆ ಎಂಬ ಪಾರುವಿನ ಕನಸು ಭಗ್ನವಾಗಿ ಹೋಗುತ್ತದೆ. ಕನಸಾಗಿಯೇ ಉಳಿಯುತ್ತದೆ. ಅಣ್ಣಯ್ಯನ ಕಪಿಮುಷ್ಟಿಗೆ ಸಿಲುಕಿದ ಚಂದ್ರನ ವಿದ್ಯೆ ಅರ್ಧಚಂದ್ರವಾಗುತ್ತದೆ, ಮೀನಕ್ಕನ ತಂಗಿ ರತ್ನಳನ್ನು ಚಂದ್ರ ಮದುವೆಯಾಗಿ ಎಲ್ಲರ ಜೀವನದ ಅಸ್ತವ್ಯಸ್ತಗಳಿಗೆ ಕಾರಣವಾಗುತ್ತದೆ. 'ಹಳೇಪುಸ್ತಕ ಓದಿ ಓದಿ ಕಡೆಗೆ ನಾನೇ ರದ್ದಿಗೆ ಬಿದ್ಬಿಟ್ಟೆ' ಎಂದು ಚಂದ್ರ ಹೇಳುವ ಮಾತು ಅವನ ಜೀವನದ ದುರಂತ ವ್ಯಂಗ್ಯವೂ ಆಗಿದೆ.

ಜೀರ್ಣ

'ಕನಸು' ಕತೆಯಲ್ಲಿ ಅಭಿವ್ಯಕ್ತವಾದ ಮಾನವನ ಪಾಶವೀಪ್ರವೃತ್ತಿಗಳು ಪ್ರಸ್ತುತ ಕತೆಯಲ್ಲೂ ಮುಂದುವರೆಯುತ್ತದೆ. ಸಮಾಜಸೇವಕಿ ನೆಪದಲ್ಲಿ ಮುಗ್ಧ ಮುತ್ತನನ್ನು ಬಲಿ ತೆಗೆದುಕೊಳ್ಳುವ ಸರಸಳ ವಿಕೃತ ಆಸೆಗಳು ಅಂತ್ಯದಲ್ಲಿ ಸಾಧಿಸಿದ್ದು ಏನನ್ನು?

ಮನುಷ್ಯನ ಮನಃಪಟಲಗಳಲ್ಲಿ ಅಡಗಿರುವ ದುಷ್ಟ ಪ್ರವೃತ್ತಿಗಳನ್ನು ಸರಸಳ ಪಾತ್ರದ ಮೂಲಕ ಕತೆಗಾತಿ ಹೊರಗೆಳೆಯುತ್ತಾಳೆ. ಸರಸ ಒಂದು ಹೆಣ್ಣು ಎಂದು ಅವಳ ರಾಕ್ಷಸೀ ಗುಣಗಳನ್ನು ಲೇಖಕಿ ಮುಚ್ಚಿಡುವುದಿಲ್ಲ; ಹೆಣ್ಣಿನ ಪಾತ್ರಗಳನ್ನು ವೈಭವೀಕರಿಸುವುದಿಲ್ಲ. 'ಸತ್ಯಾಂಶಗಳನ್ನು ಅನಾವರಣಗೊಳಿಸುವುದರಿಂದಲೇ ಜಾಹ್ನವಿಯವರ ಕತೆಗಳು ಪ್ರಶಂಶನೀಯ'.

ತಾನು ಮಾಡಿದ ಅವಘಡಗಳನ್ನು ಸರಸ ಅಧಿಕಾರ, ಪ್ರತಿಷ್ಠೆ, ತೆವಲು ಮುತ್ತನ ಸಾವಿಗೆ ಕಾರಣವಾಯಿತು. ಮುತ್ತನ ಸಾವಿನ ಗಳಿಗೆಯ ತೊಳಲಾಟಗಳು ಸರಸಳನ್ನು ಆವರಿಸಿಕೊಳ್ಳಲಾರಂಭಿಸಿತು. ಆದರೆ ಸಾವೂ ಕೂಡ ಅವಳನ್ನು ನಿರಾಕರಿಸಿತು. ಸಾವಿನಷ್ಟೇ

ಬದುಕೂ ಭೀಕರವೇ ತಾನೇ?

'ಇದ್ದಾವ ಸತ್ಹಾಂಗ

ಸತ್ತಾವ ಗೆದ್ಹಾಂಗ' – ಬೇಂದ್ರೆ

ಮನಸ್ಸಿನಂತೆ ಮಹಾದೇವ:

ಹನ್ನೆರಡನೆ ಶತಮಾನದ ಶರಣ ಸಾಹಿತ್ಯದ ಕಾಯಕದ ಮಹಿಮೆಯನ್ನು, ಮುಖ್ಯ ಆಶಯವಾಗಿ ಇರಿಸಿಕೊಂಡ ಕತೆ, 'ಮನಸ್ಸಿನಂತೆ ಮಹಾದೇವ.'

ಯಾವ ಉದ್ಯೋಗವನ್ನೂ ಮಾಡದೆ ಕುಂಟುನೆಪ ಹೇಳಿ ನುಣುಚಿಕೊಳ್ಳುತ್ತಿದ್ದ ವಿಶಾಲು ನಡೆದರೆ ಕಷ್ಟ, ಕುಳಿತರೆ ಕಷ್ಟ. ಕುಳಿತ ಕಡೆ ಕುಳಿತು, ಕಷ್ಟದ ಅರಿವೇ ಇಲ್ಲದಂತೆ ಬದುಕಿದ್ದಾಳೆ. ಒಂದು ಚೂರೂ ಮೈ ನೋಯಬಾರದು; ನಾಜೂಕಿನಿಂದ, ಸುಖದಲ್ಲೇ ಬೆಳೆದಿದ್ದಾಳೆ; ಸುಖವನ್ನೇ ಅರಸುತ್ತಿದ್ದಾಳೆ. ದುಡಿಮೆಯ ಮಹತ್ವವನ್ನು ಮರೆತಿದ್ದಾಳೆ. ಇಂಥವಳಿಗೆ, ಒಣಮೀನು ಮಾರಿ ಬದುಕುತ್ತಿದ್ದ ಹಣ್ಣು ಮುದುಕಿ ಬೀರಿದ ಪ್ರಭಾವ ಯಾವುದು?

'ನಾನು ದುಡ್ಕಂಡು ತಿಂಬಳೆ ವರ್ತು, ತಿರ್ಕಂಡು ತಿಂಬಳಲ್ಲ' ಕುಂತು ತಿನ್ನೋ ಚಾಳಿಯಲ್ಲ ನನ್ನದು. ಅಜ್ಜಿಯ ಮಾತು, ವಿಶಾಲಿಗೆ ತೋರುದೀಪವಾಯಿತು. ಅಜ್ಜಿಯ ಸ್ವಾಭಿಮಾನ, ದುಡಿಮೆಯ ಧರ್ಮ, ಪರಹಂಗಿಗೆ ಒಳಗಾಗದ ಮನೋಭಾವ, ವಿಶಾಲಿಯ ಮನೋಧರ್ಮವನ್ನು ಬದಲಿಸಿತು. ವಿದ್ಯೆ ಕಲಿಸಲಾಗದ ಪಾಠ, ಅಜ್ಜಿಯ ಬುದ್ಧಿವಾದ ಹೇಳಿಕೊಟ್ಟಿತು.

ಅಜ್ಜಿ ನಾಳೆ ನಮ್ಮ ಮನೇಲಿ ಪೂಜೆ ಬರ್ತೀಯಾ? ಎಂಬ ಪ್ರಶ್ನೆಗೆ ಅವಳು ಕೊಟ್ಟ ಉತ್ತರ ಮನುಕುಲಕ್ಕೆ ಮಾರ್ಗದರ್ಶನ ನೀಡಿದಂತಿದೆ.

'ನನಿಗೆ ನನ್ ದುಡಿಮೇನೆ ಪೂಜೆ; ಬರೋ ಆದಾಯವೇ ಪ್ರಸಾದ.'

ತಮ್ಮ ಬದುಕನ್ನು ತಾವೇ ಸಾಕ್ಷಾತ್ಕರಿಸಿಕೊಳ್ಳುವ ಕಾಯಕರ್ಮಿಗಳು ಅಪರೂಪವೇ!

ನೆಪ

'ನೆಪ' ಇಡೀ ಕತೆಯಲ್ಲಿ ಸುರಿಗೆವ್ವ ಒಂದು ಮಹಾನ್ ಪಾತ್ರವಾಗಿ ಮೈದಳೆದಿದ್ದಾಳೆ. ವಿಮರ್ಶೆಯ ಮಾತೊಂದಿದೆ, 'ಕವಿ ಪಾತ್ರವನ್ನು ಮಾತ್ರ ಸೃಷ್ಟಿಸುತ್ತಾನೆ; ಪಾತ್ರಗಳೇ ಕತೆಯನ್ನು ಸೃಷ್ಟಿಸುತ್ತವೆ'. 'ನೆಪ' ಕತೆಗಿಂತಲೂ, ಕತೆಯ ಪಾತ್ರವೇ ಸುರಿಗೆವ್ವ ಬೃಹತ್ತಾಗಿ ಬೆಳೆದು ನಿಂತಿದೆ. ಸುರಿಗೆವ್ವ ಅಭಿವ್ಯಕ್ತಿಸುವ ವೈಚಾರಿಕ ಪ್ರಜ್ಞೆ, ಹೆಣ್ತನದ ಸಂವೇದನೆ, ಬಾಳಿನುದ್ದಕ್ಕೂ ಅನುಭವಿಸಿದ ಯಾತನೆ, ಕತೆಯ ಮೈಯೊಳಗೆ ನಿವೇದನೆಯಾಗಿದೆ.

ತನ್ನ ಬಾಳಿನ ಘಟನೆಗಳೇ, ಸೊಸೆ ಮಸ್ತಿಯ ಬಾಳಿನಲ್ಲೂ ಪುನರಾವರ್ತನೆ ಆಗತೊಡಗಿದಾಗ

ಸುರಿಗೆವ್ವ ಸೆಟೆದು ನಿಲ್ಲುತ್ತಾಳೆ. ಮಸ್ತಿಯ ಶೋಷಣೆ ಮಾಡಿದ್ದ ಆಕ್ರಮಣಕಾರ ಮಗನೇ ಎಂದು ತಿಳಿದಾಗ, ಸುರಿಗೆವ್ವನಿಗೆ ಪುರುಷ ಸಮಾಜದ ಮೇಲೆ ತಿರಸ್ಕಾರ, ಹೇಯಭಾವನೆ ಮೂಡುತ್ತದೆ.

ಸ್ತ್ರೀ ಶೋಷಣೆ ಮಾಡುವ ಎಲ್ಲ ಪುರುಷರಿಗೂ ಒಂದೊಂದು 'ನೆಪ' ಸುಲಭವಾಗಿ ಕೈಗೆಟುಕುತ್ತದೆ. ಶೋಷಣೆಯ ವಿವಿಧ 'ನೆಪ'ಗಳು ಸುರಿಗೆವ್ವನಿಗೆ ಅರ್ಥವಾಗುವ ಹೊತ್ತಿಗೆ ಮಸ್ತಿ ಕಾಣೆಯಾಗುತ್ತಾಳೆ. 'ಯಾವುದೋ ನೆಪ; ಯಾರದೋ ಸಾವು.'

ಜಗತ್ತಿನ ಹೆಣ್ಣುಬಲಿ ಹೀಗೆ ನಡೆದಿದೆ, ನಿರಂತರ ನಡೆಯುತ್ತಲೇ ಇರುತ್ತದೆ. ಹೊಸ ನೆಪ ಹುಟ್ಟಿಕೊಳ್ಳುತ್ತದೆ.

ಆಶ್ರಿತರು

ನವಜಾಗತೀಕರಣ ಸಂದರ್ಭದಲ್ಲಿ 'ಆಶ್ರಿತರು' ಕತೆ ವಾಸ್ತವವಾದಿ ಸತ್ಯಗಳನ್ನು ಹೊರಗೆಳೆಯುತ್ತದೆ. ಅವಿಭಕ್ತ ಕುಟುಂಬದಲ್ಲಿ ಮಾನವೀಕ ಸಂಬಂಧಗಳ ಗಟ್ಟಿತನ ನೈತಿಕ ಪ್ರಜ್ಞೆಯೊಂದಿಗೆ ಹೆಣೆಯಲ್ಪಟ್ಟಿತ್ತು. ನಗರೀಕರಣದ ನಂತರದಲ್ಲಿ 'ಹಣ' ಎಂಬ ಮಾಯಾವಿಯ ಬೆನ್ನು ಹತ್ತಿದ ಮನುಷ್ಯನಿಗೆ ಆಪ್ತ ಸಂಬಂಧಗಳು ಶಿಥಿಲವಾಗತೊಡಗಿತು. ಮಗ-ಸೊಸೆಯ ನಯವಂಚಕ ಜಾಲಕ್ಕೆ 'ಆದಿತ್ಯ' ಬಲಿಯಾಗುವ ಕತೆ ಆಧುನಿಕ ಅದರಲ್ಲೂ ನಗರ ಸಂಸ್ಕೃತಿಯಲ್ಲಿ ಕಂಡುಬರುವ ಸಾಮಾನ್ಯ ಸಂಗತಿ ಆಗಿದೆ. ಕುಟುಂಬ-ಹಣ-ಮಾನವೀಯತೆ-ಸಂಬಂಧಗಳು ಇವುಗಳ ನಡುವಿನ ತಾಕಲಾಟವನ್ನು ಯಥಾವತ್ತಾಗಿ 'ಆಶ್ರಿತರು' ಕತೆ ಚಿತ್ರಿಸುತ್ತದೆ. ಈ ಸಂಘರ್ಷದಲ್ಲಿ ಸಂಬಂಧಗಳು ಸೋತು ಕಡೆಯಲ್ಲಿ ಗೆಲ್ಲುವುದು ಹಣವೇ. ಜಾಗತೀಕರಣದ ದುಷ್ಪರಿಣಾಮವನ್ನು ಅದಕ್ಕಿಂತ ಹೆಚ್ಚಾಗಿ ಸ್ವಾರ್ಥ ಮನುಷ್ಯರು ಅದನ್ನು ರೂಕ್ಷಗೊಳಿಸುತ್ತಿರುವುದನ್ನು ಕಾಣಬಹುದಾಗಿದೆ. 'ಅಸಹಾಯಕ ವ್ಯಕ್ತಿಯೊಬ್ಬನಿಗೆ ಮತ್ತೊಬ್ಬ ಅಸಹಾಯಕನೇ ಆಶ್ರಿತ' ಆಗಬಲ್ಲ ಕತಾಂತ್ಯದಲ್ಲಿ ಕಾಣುವ ಸತ್ಯ ಆಗಿದೆ.

ಓದಿದ ಮೇಲೆ ಇದು ಬರಿ ಕತೆ ಅಲ್ಲ; ಇದೇ ಸಮಾಜದ ಯಾವುದೋ ಕುಟುಂಬದಲ್ಲಿ ನಡೆದಿರಬಹುದಾದ ಘಟನೆ ಎಂದು ಯಾರಾದರೂ ಊಹಿಸಬಲ್ಲರು.

ಹಾಸ್ಯಾಧಾರಿತ ಕತೆಗಳು ಎಂದರೆ ಮೇಲುನೋಟಕ್ಕೆ ಹಾಸ್ಯಲೇಪನವಿದ್ದರೂ, ಒಳಗೆ ಮಾನವ ಕ್ರೌರ್ಯಗಳು ವಿಧಿತವಾಗಿವೆ. ತನ್ನ ನೋವುಗಳನ್ನು ಬಚ್ಚಿಟ್ಟವೆಂದೇ ಮನುಷ್ಯ ನಗೆಯ ನಟನೆ ಮಾಡುವುದು. 'ನಗು' ಎಲ್ಲ ನೋವುಗಳನ್ನು ಮುಚ್ಚಿಡುವ ಸಾಧನ. ಹಾಸ್ಯದ ಒಳಗೆ ಅಡಗಿರುವ ಮನುಷ್ಯನ ವಿದ್ರೋಹಗಳನ್ನು ಒಡೆಯುವ ಶಕ್ತಿ ಜಾಹ್ನವಿಯವರಿಗೆ ಸಾಧಿತವಾಗಿದೆ.

ಒಬ್ರು ಸುದ್ಯಾಕಿ ಒಬ್ರು ಗದ್ಯಾಕೆ ಸ್ತ್ರೀ ಸಾಧ್ಯತೆಯ ಗುಣಗಳನ್ನು ಹಾಸ್ಯರಸದಲ್ಲಿ ವರ್ಣಿಸಿದ್ದಾರೆ. ನಕ್ಕು ಹುಬ್ಬೇರಿಸುವ ಕತೆ ಇದಾದರೆ, ದೂಪ್ದಳ್ಳಿ ಸೆಕ್ಸಿ ದುರುಗ, ನಗು, ಕೀಟಲೆ, ಹಾಸ್ಯ

ಚಟಾಕಿ, ದುರುಗನಂತಹ ಮುಗ್ಧನೊಬ್ಬನ ಬಲಿಗೆ ಕಾರಣವಾದ ಸನ್ನಿವೇಶವನ್ನು ಹೊಂದಿದೆ. ಈ ಕತೆಯನ್ನು ಸಂಪೂರ್ಣ ಹಾಸ್ಯಕತೆ ಎಂಬ ಗುಂಪಿಗೆ ನಾನು ಸೇರಿಸುತ್ತಿಲ್ಲ, ಜಾಹ್ನವಿಯವರ ಉಳಿದ ಕತೆಗಳಲ್ಲಿರುವ ಗಾಂಭೀರ್ಯ ನಡಿಗೆ ಬದಲಾಗಿ ಹಾಸ್ಯದ ಹಾಸು ಹೊಕ್ಕುಗಳಿವೆ ಎಂದು ತಿಳಿಸುತ್ತೇನೆ ಅಷ್ಟೇ.

ದೂಪ್ದಳ್ಳಿ ಸೆಕ್ಸಿ ದುರುಗ

'ದೂಪ್ದಳ್ಳಿ ಸೆಕ್ಸಿ ದುರುಗ' ಶೀರ್ಷಿಕೆಯೇ ವಿಚಿತ್ರ ಆಕರ್ಷಣೆಯಿಂದ ಸೆಳೆಯುತ್ತದೆ. ಹೆಣ್ಣು ಒಳಿತುಗಳ ಮಹಾಪೂರವಲ್ಲ, ಮನುಷ್ಯ ಸ್ವಭಾವಸಿದ್ಧವಾದ ಕ್ರೌರ್ಯ, ಆಸೆ, ಕಾಮನೆಗಳು ಸ್ತ್ರೀ ಸಹಜವೂ ಆಗಿವೆ. ಹೆಣ್ಣಿನ ಕುಟಿಲತೆಗಳನ್ನು ಜಾಹ್ನವಿಯವರು ಮರೆಮಾಚುವುದಿಲ್ಲ. ಪುರುಷನಿಗೆ ಹೆಣ್ಣಿನ ಬಗ್ಗೆ ಇರುವ ಆಸೆ ಕಾಮನೆಗಳಂತೆ, ಹೆಣ್ಣಿಗೂ ಪುರುಷ ದೇಹದ ಮೇಲೆ ಆಕರ್ಷಣೆ ಇರುವುದು ಸ್ವಾಭಾವಿಕವೇ ಪ್ರಕೃತಿ ನಿಯಮವಿದು. ತನ್ನ ಕಾಮನೆಗಳನ್ನು ಪುರುಷ ಅಭಿವ್ಯಕ್ತಿಸುವಲ್ಲಿ ಆತುರತೆ, ಆಕ್ರಮಣಕಾರಿಯಾಗಿ ಪ್ರಯತ್ನಿಸುತ್ತಾನೆ. ಸ್ತ್ರೀ ನವಿರುತನದಿಂದ ಇಂಗಿತವನ್ನು ಪ್ರಕಟಿಸುತ್ತಾಳೆ. 'ಗ್ರಾಮ್ಯಮುಗ್ಧನಾದ ದುರುಗನನ್ನು ಮಾಡ್ರನ್ ಹುಡುಗಿ ರೇಖಾ ಚೇಷ್ಟೆಗಾಗಿ ಕೆನ್ನೆ ಹಿಂಡಿ ಮೀಸೆ ಎಳೆದು ನಕ್ಕು ಮಜಾಕ್ಕಾಗಿ ಪ್ರಯೋಗ ಶಿಶುವನ್ನಾಗಿ ಮಾಡಿದಳು. ಅವಳ ತುಂಟತನದ ಸ್ಪರ್ಶ, ಅವನಲ್ಲಿ ಯಾವುದೋ ಕಾಮನೆಗಳನ್ನು ಜಾಗೃತಗೊಳಿಸಿದಂತಾಯಿತು. ಪ್ರಚೋದನೆಗೆ ಕಾರಣವಾಯಿತು. ಕೇಂದ್ರ ಸಂಗತಿ ಇಷ್ಟೇ. ಗಂಡು ಹೆಣ್ಣುಗಳ, ಪ್ರೇಮಕಾಮಗಳ ನಡುವಣ ವ್ಯತ್ಯಾಸ ಅತ್ಯಂತ ಸೂಕ್ಷ್ಮವಾದದ್ದು. ದೇಹ ಮನಸ್ಸುಗಳ ನಡುವೆ ಯಾವುದೋ ಸೆಳೆ ಕಾಮದ ಉದ್ದೀಪನಕ್ಕೆ ಕಾರಣವಾಗಿದೆ. ಗಾಢವಾದ ಸಂಬಂಧವೂ ಇದೇ; ಮಾಯೆಯ ಹುಸಿತನವೂ ಇದೇ. ದೇಹ-ಭಾವ-ಕಾಮಗಳ ಕೊಂಡಿ ವಿಚಿತ್ರವೆಂದರೆ ಯಾವ ಸರಳ ಸೂತ್ರಗಳಿಗೂ ಸಿಗಲಾರದು. ಜಗತ್ತಿನ ಬೇರುಗಳು ಅಲುಗಾಡುತ್ತಿರುವುದೇ ಈ ಆಕರ್ಷಣೆಯ ಮಹಾಪೂರದಲ್ಲಿ. ದುರುಗ ಅಮಾಯಕ ಇರಬಹುದು, ಮುಗ್ಧನಿರಬಹುದು, ಅವನ ತಿಳುವಳಿಗೆ ಮುಗ್ಧವಾಗಿರಬಹುದು. ಆದರೆ ದೇಹ ಮುಗ್ಧವಲ್ಲ.

ರೇಖಾ ನೀಡಿದ ಸ್ಪರ್ಶ, ಅದು ಪ್ರಚೋದಿಸಿದ ವಿಚಿತ್ರ ಅಲೆ, ಸಹಜ ಆಕರ್ಷಣೆಯ ಕಿಡಿ ಹೊತ್ತಿಸಿತು ಇಷ್ಟು ಮಾತ್ರ ಸತ್ಯ.

'ಆದರೆ ಕಿಚ್ಚು ಹಚ್ಚಿದ ರೇಖಾಳ ತಿಳುವಳಿಗೆ ಮುಗ್ಧವಲ್ಲ.'

ಮರದೊಳಗೆ ಮಂದಾಗ್ನಿಯ ಕಾಣದಂತಿರಿಸಿದೆ.

ನೀ ಬೆರೆಸುವ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥಾ

ದೇಹ ಮನಸ್ಸುಗಳ ಬೆರಸುವಿಕೆ, ಅದರೊಳಗಣ ಕಿಚ್ಚು ಯಾವುದೋ ಮಾಯೆ ಯಾವುದೋ ಬೆರಗು. ಈ ಕತೆಯೊಳಗಿರುವ ಉಪವೃತ್ತಾಂತ. 'ಹಾಲಿಂಡಸ್ಪೂರು ಪ್ರಕರಣವೇ, ಕತೆಯ

ಬೆಳವಣಿಗೆಗೆ ಕಾರಣ. ಟೂರ್ ಮಾಡುವ ನೆಪದಲ್ಲಿ ಸಾಹುಕಾರರು, ರತ್ನಳಂತಹ ಅಮಾಯಕಳನ್ನು ದುರುಪಯೋಗ ಮಾಡಿಕೊಳ್ಳುವ ಕತೆ, ದುರುಗನೇ ಕತೆ ಹೇಳುವಾಗ ಅವನ ಮುಗ್ಧ ತಿಳುವಳಿಕೆಗೆ ರತ್ನಳ ನಿಜಸ್ಥಿತಿ ಅರ್ಥವಾಗಿರಲಿಲ್ಲ. ಆದರೆ ರೇಖಾ ಅವನ ದೇಹವನ್ನು ಸ್ಪರ್ಶಿಸಿದಾಗ ಸುಪ್ತಮನಸ್ಸು ಜಾಗೃತಗೊಂಡಿತು.

ಅವನು ಮಾಡಿದ್ದು ಒಂದೇ ತಪ್ಪಲ್ಲದ ತಪ್ಪು; ರೇಖಾ ಮಾಡಿದಂತೆ ಅವನೂ ರೇಖಾಳ ಕೆನ್ನೆ ಹಿಂಡಿದ್ದು ರಾದ್ಧಾಂತಕ್ಕೆ ಕಾರಣವಾಯಿತು. ಕೆನ್ನೆ ಹಿಂಡುತ್ತಿದ್ದ ರೇಖಾ ದುರುಗನ ಕೆನ್ನೆಗೆ ಬಾರಿಸಿದಳು. ರೇಖಾಳ ವರ್ತನೆ ಯಾವ ಬಗೆಯದು? ಅವಳ ಒಂದೇ ಏಟು ದುರುಗನ ದುರಂತಕ್ಕೆ ಕಾರಣವಾಯಿತೇ?

ಇಡೀ ಪ್ರಕರಣವನ್ನು ಪ್ರಜ್ಞಾಪೂರ್ವಕವಾಗಿ ಗಮನಿಸುತ್ತಿದ್ದ ನಿರೂಪಕಿಗೆ ದುರುಗನ ಮುಗ್ಧತೆ ಮತ್ತು ರೇಖಾಳ ತಪ್ಪು ತಿಳಿದುಹೋಯಿತು. ಅವನ ಮುಗ್ಧತೆಯೊಂದಿಗೆ ಆಟವಾಡಿದ ರೇಖಾಳದ್ದೇ ನಿಜವಾದ ತಪ್ಪು. ಅವಳು ತಪ್ಪು ಮಾಡುತ್ತಿದ್ದಾಗ ಎಚ್ಚರಿಸದೇ, ನಗುತ್ತಿದ್ದ ನನ್ನದೂ ತಪ್ಪು ಎಂದು ನಿರೂಪಕಿ ಅಪರಾಧಿ ಪ್ರಜ್ಞೆಯಿಂದ ನರಳುವಾಗ ಕತೆ ಅಂತ್ಯ ಕಾಣುತ್ತದೆ.

ಒಬ್ರು ಸುದ್ದ್ಯಾಕೆ– ಒಬ್ರು ಗುದ್ದ್ಯಾಕೆ

ಕತೆಯ ಹೆಸರು ಹಾಸ್ಯವಾಗಿರುವಂತೆ, ಕತೆಯ ಕಥಾನಕತೆಯೂ ಹಾಸ್ಯಪ್ರಧಾನವಾಗಿದೆ. ಪುರುಷರ ಕ್ರೂರದೃಷ್ಟಿಯಿಂದ ತಪ್ಪಿಸಿಕೊಳ್ಳಲು ಕಲ್ಯಾಣಿ ತೋರಿಸುವ ಜಾಣ್ಮೆ, ಅಕ್ಕಸಾಲಿಗ, ಕಮ್ಮಾರನಿಗೆ ಬುದ್ಧಿ ಕಲಿಸಿದ ಪ್ರಸಂಗ, ಮೂವತ್ತು ದಾಟಿದ ಧನಲಕ್ಷ್ಮಿಗೆ ಮದುವೆ ಮಾಡಿಸುವ ಪ್ರಸಂಗ ತೆರೆತೆರೆಯಾಗಿ ಹಾಸ್ಯವನ್ನು ಉಕ್ಕಿಸುತ್ತದೆ. ಕಮ್ಮಾರನ ಮಗಳನ್ನು ಅಕ್ಕಸಾಲಿಗನಿಗೆ ಗಂಟು ಹಾಕುವಲ್ಲಿ ಕಲ್ಯಾಣಿ ಹೂಡಿದ ಉಪಾಯ ಕತೆಯ ಕೇಂದ್ರ ವಸ್ತು. ಈ ಘಟನೆ ಕತೆಯ ಅಂತ್ಯದಲ್ಲಿ ನಾಟಕೀಯವಾಗಿ ಕೊನೆಗೊಳ್ಳುತ್ತದೆ.

ತನ್ನ ಸಮಸ್ಯೆಯನ್ನು ಹೆಣ್ಣು ತಾನಾಗಿಯೇ ಉಪಾಯದಿಂದ ಪರಿಹಾರ ಕಂಡುಕೊಳ್ಳಬಲ್ಲಳು ಎಂಬ ಸತ್ಯವನ್ನು ಕಲ್ಯಾಣಿ ಪಾತ್ರ ತೋರಿಸಿಕೊಡುತ್ತದೆ.

ಇಡೀ ಕತೆ ಒಂದು ಸುಂದರ ಭಾವಗೀತೆಯನ್ನು ಓದಿದ ಅನುಭವವಾಗುತ್ತದೆ.

ಹೋರಾಟ

ಹೆಣ್ಣಿನ ಅಸಹಾಯಕತೆಯನ್ನು ತನ್ನ ಸ್ವಾರ್ಥಕ್ಕಾಗಿ ಅಳವಡಿಸಿಕೊಳ್ಳುವ ಪುರುಷನ ದುಷ್ಟತನವನ್ನು 'ಹೋರಾಟ' ಕತೆ ಧ್ವನಿಪೂರ್ಣವಾಗಿ ಪ್ರತಿಬಿಂಬಿಸುತ್ತದೆ. 'ಹೊಲಸೆಲ್ಲ ಸದ್ದಿಲ್ಲದೆ ಬಂದು ಮೆಲ್ಲನೆ ಮಂದಗತಿಯಲ್ಲಿ ಹರಿಯುತ್ತಿದ್ದ ಹೊಳೆಯಲ್ಲಿ ಲೀನವಾಗುತ್ತಿತ್ತು' ಕತೆಯ ಪ್ರಾರಂಭದ ಮಾತುಗಳು ಇಡೀ ನಾಗರಿಕ ಸಮಾಜದ ವ್ಯವಸ್ಥೆಗೆ ಕನ್ನಡಿ ಹಿಡಿದಂತಿದೆ. 'ಹೋರಾಟ' ಪದದ ಅರ್ಥ ವಿಸ್ತರಣೆ ಮಾಡುತ್ತಾ ಜಾಹ್ನವಿಯವರು ಮೂಲಧ್ವನಿತಾರ್ಥ

ಕಳೆದುಹೋಗಿ ಜಾಳುತನ ತುಂಬಿಕೊಂಡು ಕೆಲಸಕ್ಕೆ ಬಾರದವರು ಹುಯಿಲೆಬ್ಬಿಸುವ ಪೊಳ್ಳು ಘೋಷಣೆ ಎನ್ನುತ್ತಾರೆ. 'ಹೋರಾಟ' ಪದದ ಅರ್ಥವೇ ನೇತ್ಯಾತ್ಮಕಗೊಂಡು ಇಡೀ ಪ್ರಕರಣ ವಿಚಿತ್ರವಾದ ತಿರುವುಗಳನ್ನು ಪಡೆದುಕೊಳ್ಳುತ್ತದೆ.

'ಕೆಟ್ಟು ಕೆರ ಹಿಡಿದಿರುವ ಹುಡುಗೀನ ಇಟ್ಕಂಡು ಅದೇನ್ ಹೋರಾಟ ಮಾಡ್ತೀರಿ? ಸುಮ್ಕೆ ಹುಡ್ಗಿ ಯಾವ್ದಾನ ಕೆರೆನೋ ಬಾವೀನೋ ನೋಡ್ಕೊಳ್ಳಿ' ದೇವರಾಜನ ಈ ಮಾತುಗಳಲ್ಲಿ ಪುರುಷಧೋರಣೆಯ ಅಟ್ಟಹಾಸಗಳು ಕ್ರೌರ್ಯ ಮುಖವಾಡಗಳು ಪ್ರದರ್ಶಿತವಾಗುತ್ತದೆ.

'ಹೋರಾಟ ಮಾಡಿದ್ದಕ್ಕೆ ಅವಳ ಶೋಷಣೆ ವಿಷಯ ಇಡೀ ರಾಜ್ಯಕ್ಕೆ ಸುದ್ದಿ ಪ್ರಚಾರ ಆಯ್ತು.' ಹೆಣ್ಣಿಗೆ ಬೇಕಾಗಿರೋದು ಹೋರಾಟ, ಚಳುವಳಿ, ಹಣ, ಆಸ್ತಿ ಅಲ್ಲ, ನೆಮ್ಮದಿಯ ಬಾಳು.'

ಹೆಣ್ಣಿನ ಭಾವನೆಗಾಗಲೀ, ಆಯ್ಕೆಯಾಗಲೀ ಕಡೆಗೆ ತನ್ನ ದೇಹದ ಮೇಲೂ ಅವಳಿಗೆ ಸ್ವಾತಂತ್ರ್ಯ ನೀಡದ ಪುರುಷನ ದೌರ್ಜನ್ಯವನ್ನು ಜಾಹ್ನವಿಯವರು ಯಥಾವತ್ತಾಗಿ ಹೊರಗೆಳೆದಿದ್ದಾರೆ. ಹೆಣ್ಣಿನ ದೇಹವನ್ನು ಸರಕು ಎಂದು ನಿರ್ಧರಿಸಿಕೊಂಡಿರುವ ಪುರುಷ ಸಮಾಜ ತನ್ನ ಸಂದರ್ಭ ಸವಲತ್ತುಗಳಿಗೆ ತಕ್ಕಂತೆ ಅವಳನ್ನು ಅಪವ್ಯಯಗೊಳಿಸಿದ್ದಾನೆ. ಅನಾದಿಕಾಲದಿಂದಲೂ ಹೆಣ್ಣಿನ ಮೇಲೆ ಲೈಂಗಿಕ ಶೋಷಣೆ ನಡೆಸುವ ದೇವರಾಜ, ಮಾನವೀಯತೆಯನ್ನು ಮರೆತು ನುಣುಚಿಕೊಳ್ಳುತ್ತಾನೆ. ಇಡೀ ಪ್ರಕರಣವನ್ನು ಪಬ್ಲಿಸಿಟಿ ಮಾಡುತ್ತಾ ಸರ್ಕಾರ ಸಂಘಸಂಸ್ಥೆಗಳು ನೀಡಲಿರುವ ಹಣ ಮತ್ತು ಉದ್ಯೋಗದ ದುರಾಸೆಗಾಗಿ ತಾನೇ ಅವಳಿಗೆ ಜೀವನ ಕೊಡುವ 'ಹೀರೋ' ಆಗಿ ಮುಖವಾಡ ಧರಿಸುತ್ತಾನೆ. ಎರಡೂ ತದ್ವಿರುದ್ಧ ಪರಿಸ್ಥಿತಿಯಲ್ಲಿ ಲಕ್ಷ್ಮಿ ಕೇವಲ ಮೂಕ ಬಲಿಪಶು ಆಗುತ್ತಾಳೆ. ಇದೇ ನಮ್ಮ ಘನ ನಾಗರಿಕ ಸಮಾಜದ ನಿಜರೂಪ. ಹೆಣ್ಣಿನ ಎಷ್ಟೋ ಅಳಲುಗಳು ಮೌನರೋದನವಾಗಿ ಉಳಿದುಹೋಗಿದೆ. ಸಮಾಜದ ಓರೆಕೋರೆಗಳನ್ನು 'ಹೋರಾಟ' ವ್ಯಂಗ್ಯವಾಗಿ ಅಷ್ಟೇ ಧ್ವನ್ಯಾತ್ಮಕವಾಗಿ ಪ್ರತಿಬಿಂಬಿಸುತ್ತದೆ.

ಆಸರೆ

ವಿಶ್ವಸೃಷ್ಟಿಯ ರಹಸ್ಯಗಳು ಮನುಜ ಸ್ವಾರ್ಥಕ್ಕೆ ಬಲಿಯಾಗಿ ವಿನಾಶದ ಹಾದಿ ಹಿಡಿದಿದೆ. ಆಧುನಿಕತೆ ನಮ್ಮ ರಾಕ್ಷಸೀಯ ಆಸೆಗಳನ್ನು ಬೆಳೆಸುತ್ತಿದೆ. ಆಸ್ತಿಯ ಕಲ್ಪನೆ ಮನುಷ್ಯನನ್ನು ಕುರುಡಾಗಿಸಿದೆ. ಮಾನವೀಯ ಸಂಬಂಧಗಳು ಶಿಥಿಲಗೊಳ್ಳುತ್ತಿದೆ.

ಚೆಲುವರಾಜನ ಪ್ರೀತಿಯ ಸೆಳೆತಕ್ಕೆ ಬಲಿಯಾದ ಗಂಗಳಿಗೆ, ತಂದೆಯ ಪ್ರೇಮವಾಗಲೀ ಉಪದೇಶವಾಗಲೀ ಅರ್ಥವಾಗಲಿಲ್ಲ. ಧನದಾಹಿ ಚೆಲುವರಾಜ ವಂಗಳನ್ನು ತನ್ನ ಸ್ವಾರ್ಥಕ್ಕಾಗಿ ಬಲಿಪಶು ಮಾಡಿಕೊಳ್ಳುತ್ತಾನೆ. ಮಹಿಳೆಯರು ಒಂದರ್ಥದಲ್ಲಿ ಎಮೋಷನಲ್ ಫೂಲ್ಸ್ ಭಾವುಕತೆ ವಿಷಯ ಬಂದಾಗ ವಿಚಾರಶೂನ್ಯರಾಗುತ್ತಾರೆ. ಎಮೋಷನಲ್ ಬ್ಲಾಕ್ ಮೇಲ್ ಮಾಡುವುದು ಪುರುಷನಿಗೆ ಸುಲಭ. ಗಂಗಳ ಪರಿಸ್ಥಿತಿಯನ್ನು ತನ್ನ ಲಾಭಕ್ಕಾಗಿ

ದುರುಪಯೋಗಪಡಿಸಿಕೊಂಡ ಚೆಲುವರಾಜ ತನ್ನ ಪ್ರೀತಿಯಿಂದ ನಂಬಿಸಿ ಅವಳ ತೋಟವನ್ನು ತನ್ನ ಹೆಸರಿಗೆ ವರ್ಗ ಮಾಡಿಕೊಂಡ. ಮೂಲಭೂತವಾಗಿ ಭೂಮಿಗಾಗಿಯೇ ಅವಳನ್ನು ವರಿಸಿದ್ದು. ಗಂಗಳಿಗೆ ಕೆಲವೇ ದಿನದಲ್ಲಿ ಅವನ ನಿಜರೂಪ ಅರಿವಾಯಿತು. ಮದುವೆಗೆ ಮೊದಲು, ಎಂತಹಾ ಪ್ರೀತಿನವ್ವಾ? ಎಷ್ಟು ಪ್ರೀತಿ ಮಾಡುತ್ತಾನವ್ವಾ? ಎಂಬ ತಂದೆ ಕೇಳಿದ ಪ್ರಶ್ನೆ ಇವಳ ತಲೆಯಲ್ಲಿ ಕುರುಕ್ಷೇತ್ರ ಎಬ್ಬಿಸಿತು.

ತೋಟ ಕಡಿದು ಕಾರ್ಖಾನೆ ಆರಂಭಿಸುವ ಯೋಜನೆ ಚೆಲುವರಾಜನದು. ಮನುಷ್ಯ ದುರಾಸೆಗಳು ಪ್ರಕೃತಿಯ ಒಪ್ಪಂದಗಳನ್ನು ಛಿದ್ರಗೊಳಿಸುತ್ತಿದೆ. ಇಷ್ಟೆಲ್ಲ ಗಂಗಳಿಗೆ ಅರ್ಥವಾದಾಗ ತಡವಾಗಿತ್ತು. 'ಮರ ಬರೀ ಮರ ಅಲ್ಲ, ನಮ್ಮಪ್ಪಯ್ಯನ ಪ್ರಾಣ.' ಮರಗಳನ್ನು ಕೆಡವಿರೋ ನಿಮ್ಮ ಕೆಲ್ಸ ನೀವೇ ನಿಮ್ಮವ್ವಗಳ ಮ್ಯಾಲೆ ಬಲಾತ್ಕಾರ ಮಾಡ್ದಂಗೈತೆ' ಎಂದು ಗಂಗ ಆಕ್ರೋಶದಿಂದ ಜ್ವಾಲಾಮುಖಿಯಂತೆ ಆಸ್ಫೋಟಿಸಿ ಚಪ್ಪಲಿ ಹಿಡಿದು ನಿಂತಳು. ಹೆಣ್ಣು ಸೆಟೆದು ನಿಂತರೆ ಮಾರಿಯಂತೆ ಶಕ್ತಿ ದೇವತೆಯಾಗಬಲ್ಲಳು ಎಂದು ಕತೆಗಾತಿ ಈ ಸನ್ನಿವೇಶದಲ್ಲಿ ತೋರಿಸಿದ್ದಾರೆ. ಗಂಗಳ ವರ್ತನೆ ಅವಳಿಗೆ ಹುಚ್ಚಿ ಎಂಬ ಪಟ್ಟ ಕಟ್ಟಿ ವಂಚನೆ ಮಾಡಲು ಚೆಲುವರಾಜನಿಗೆ ಕಷ್ಟವಾಗಲಿಲ್ಲ. ಪುರುಷ ಸಮಾಜದ ದಬ್ಬಾಳಿಕೆ, ಹೆಣ್ಣಿನ ಶೋಷಣೆಗೆ ಪ್ರಸ್ತುತ ಕತೆ 'ಆಸರೆ' ಉತ್ತಮ ಉದಾಹರಣೆ.

ಭವಿತ್ಯವದ ಸಮಾಜಕ್ಕೆ ಆಶಾಕಿರಣವಾಗಬಲ್ಲ ಆಶಯ ಹೊತ್ತ ಪಾತ್ರ ಗಂಗ, ತಂದೆ ಕಳಿಸಿದ ಎರಡು ಸಸಿಯನ್ನು ನೆಟ್ಟು ಅದೇ ತನ್ನ ಮುಂದಿನ ಬಾಳಿಗೆ 'ಆಸರೆ' ಎಂದು ಕತೆಯ ಅಂತ್ಯದಲ್ಲಿ ಭಾವಪೂರ್ಣವಾಗಿ ಹೇಳುವ ಮಾತುಗಳು ಹೃದಯಸ್ಪರ್ಶಿಯಾಗಿದೆ.

ಹೆಣ್ಣಿನ 'ಆಸರೆ' ಪ್ರಕೃತಿಯ ಮಡಿಲು ಎಂಬ ಕತೆಗಾತಿಯ ಸಂದೇಶ ಅರ್ಥಪೂರ್ಣವಾಗಿದೆ.

'ಒಲವೆಂಬ ಹೊತ್ತಿಗೆಯ

ಹಲಜನ್ಮ ಕಳೆದರೂ ನೀ ತೆರಲಾರೆ ಬರಿ ಅದರ ಅಂಚೆವೆಚ್ಚ.'

'ಕಳ್ಳುಬಳ್ಳಿ' ಕತೆಗಳ ಭಾಷೆ, ತಂತ್ರಜ್ಞತೆ

ಒಂದು ಸಾಹಿತ್ಯ ಜೀವಂತವಾಗಿ ಉಳಿಯುವುದು ಅದರ ಚರ್ಮವಾದ ಭಾಷೆಯಲ್ಲಿ ಪ್ರಾದೇಶಿಕ ಕಸುವನ್ನು ತುಂಬಿದಾಗ ಮಾತ್ರ. ಭಾಷೆಯಲ್ಲಿ ಶಬ್ದಾರ್ಥದಷ್ಟೇ ಜನಾಂಗದ ಸಂಸ್ಕೃತಿಯೂ ಪ್ರವಹಿಸುತ್ತದೆ. ಜಾಹ್ನವಿಯವರ ಭಾಷಾ ಬಳಸು ಗ್ರಾಮೀಣ, ನಗರ ಎರಡೂ ಪರಿಸರದ ಸಮತೆಯನ್ನು ಕಾಯ್ದುಕೊಂಡಿದೆ. ಪಾತ್ರದ, ಸನ್ನಿವೇಶದ ಔಚಿತ್ಯಕ್ಕೆ ತಕ್ಕಂತೆ ಭಾಷಾ ಹೊದಿಕೆ ಸಾಮರಸ್ಯಗೊಳ್ಳುತ್ತದೆ. ನಗರ ಜೀವನದ ಆವರಣದಲ್ಲಿ ಸುಶಿಕ್ಷಿತ ಪಾತ್ರಗಳು ಸಂದರ್ಭೋಚಿತವಾಗಿ ಇಂಗ್ಲಿಷ್ ಭಾಷೆಯನ್ನು ಬಳಸಿಕೊಂಡಿದೆ.

'ನನ್ನ ಮನಸ್ಸಿನ ಆಬ್ಸೆನ್ಸು... ಪ್ರೆಸೆನ್ಸು... ಏರುಪೇರಿಗೆ ಔಟ್ ಆಫ್ ಕಂಟ್ರೋಲ್ ಆಗಿದೆ.' (ಒಳಗುದಿ)

ಮನಸ್ಸಿನ ವಿರೋಧಾಭಾಸಗಳನ್ನು ಸ್ಪಷ್ಟೀಕರಿಸಲು ಇಂಗ್ಲಿಷ್ ಭಾಷಾ ಪ್ರಯೋಗ, ಕತೆಯ ಚೌಕಟ್ಟಿಗೆ ಅನಿವಾರ್ಯವೆನಿಸುತ್ತದೆ. ಓದುಗರಲ್ಲಿ ಶಾಬ್ದಿಕ ನೆಲೆಯ ಅರಿವನ್ನು ಮೂಡಿಸುತ್ತದೆ.

'ನಮ್ಮ ಲೈಫಲ್ಲಿ ಚೇಂಜಿಲ್ಲ, ಚಾರ್ಮಿಲ್ಲ...

ಲೈಫ್ ಎಂಜಾಯ್ ಮಾಡ್ಬೇಕು.' (ವಿಮುಖ)

ಕನ್ನಡ ಪದ ಜೊತೆಜೊತೆಗೆ ಇಂಗ್ಲಿಷ್ ಪದ ಬಳಕೆ ಇಂದು ನಗರದ ಪರಿಸರದ ಸಾಮಾನ್ಯತೆಯೇ ಆಗಿಹೋಗಿದೆ. ಜಾಹ್ನವಿಯವರ ಕತೆಗಳು ಆಡುಭಾಷಿಕ ಗುಣವನ್ನು ಉಳಿಸಿಕೊಂಡಿದೆ. ಮನುಷ್ಯ ಸ್ವಭಾವದಲ್ಲಿಯ ಮೂಲಾಂಶವನ್ನು ಹೊರತೆಗೆಯುವ ಓಜೋಗುಣ ಇವರ ಭಾಷೆಗಿದೆ.

ಕತೆಯ ಭಾಷೆ, ಉಕ್ತಿ ವೈಚಿತ್ರ್ಯಗಳಿಂದಾಗಲೀ ಶಬ್ದಚಮತ್ಕೃತಿಗಳಿಂದಾಗಲೀ, ಆಲಂಕಾರಿಕ ವರ್ಣನೆಗಳಿಗಾಗಲೀ ಜೋತುಬೀಳದೆ ನೇರವಾದ ವೈಚಾರಿಕತೆಯನ್ನು ಮಾತ್ರ ಸಾಂದ್ರೀಕರಣ ಮಾಡುತ್ತದೆ. ಪದಗಳು ತನಗಿಂತ ಶಕ್ತವಾದ ವಿಚಾರಶಕ್ತಿಯನ್ನು ಮೂಡಿಸಿ ತಾನು ಅದರ ಬೆನ್ನ ಹಿಂದೆ ನಿಲ್ಲುತ್ತದೆ. ಬಿಚ್ಚುನುಡಿ, ನೇರಮಾತುಗಳಿಂದ ಗೆಲ್ಲುತ್ತಾರೆ. ಮೂಲಭಾಷೆ, ಪ್ರಾದೇಶಿಕ ಭಾಷೆ, ಗ್ರಾಮೀಣ ಭಾಷೆ, ಇಂಗ್ಲಿಷ್ ಪದಗಳು ಎಲ್ಲವನ್ನೂ ಮಿಳಿತಗೊಳಿಸಿದ್ದಾರೆ. ಕತೆಯ ಭಾಷೆ ಹೊಗಳಿಕೆಯನ್ನು ಬೇಡುವುದಿಲ್ಲ. ಆದರೆ ಧ್ವನಿಶಕ್ತಿ ಆಸ್ಫೋಟಕ ಗುಣವನ್ನು ಹೊಂದಿದೆ. ಆದ್ದರಿಂದಲೇ ವಿಚಾರಗಳಲ್ಲೂ ಸ್ಫೋಟಶಕ್ತಿ ತುಂಬಿದೆ.

ಸ್ತ್ರೀ ಸಂವೇದನೆಯ ಕತೆಗಳು ಎಂದಮಾತ್ರಕ್ಕೆ ಕರುಣಾರಸದಲ್ಲಿ ಅದ್ದಿದಂತೆ ಇರುವುದಿಲ್ಲ. ಹೆಣ್ಣಿನ ಅಸಹಾಯಕ ಪ್ರಸಂಗದಲ್ಲೂ ಅಳುಮುಂಜಿ ಪದಗಳನ್ನು ಉಚ್ಚರಿಸುವುದಿಲ್ಲ. ಇವರ ಪದಗಳು ಓದಿದರೆ ಗುಡುಗುತ್ತದೆ. ಪುಸ್ತಕ ಮುಚ್ಚಿಟ್ಟ ತಕ್ಷಣವೇ ಆರ್ಭಟಿಸಲಾರಂಭಿಸುತ್ತದೆ. ಪದಗಳಿಂದ ಹೊರಗೆ ನಿಂತುಕೊಂಡೇ ಕತೆಯನ್ನು ನಿರ್ದೇಶಿಸುವ ಶಕ್ತಿ ಇವರ ಭಾಷೆಗಿದೆ. ಸಾಂಕೇತಿಕತೆಗೆ ಶರಣಾಗದೆ ನೇರಭಾಷೆ ಬಳಸು ಇದೆ. ಭಾಷೆಯ ಕವಲುಗಳನ್ನು ದುಡಿಸಿಕೊಳ್ಳುವ ಶಕ್ತಿ ಕತೆಗಾರ್ತಿಗಿದೆ.

ಸಾಹಿತ್ಯದ ಓದುವಿಕೆಯ ಅಭಿರುಚಿಗಳು ಬದಲಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ತಮ್ಮನ್ನು ತಬ್ಬಿಕೊಳ್ಳುವ ತಲೆಮಾರೊಂದನ್ನು ಬಿ.ಟಿ.ಜಾಹ್ನವಿಯವರು ಸೃಷ್ಟಿಸಿದ್ದಾರೆ.

ಪಾತ್ರ–ಸೃಷ್ಟಿ–ದೃಷ್ಟಿ

ಜಾಹ್ನವಿಯವರ ಕತೆಗಳು ಅವರೇ ಹೇಳಿಕೊಂಡಂತೆ ಅವುಗಳೇ ಬರೆಯಿಸಿಕೊಂಡವು. ಕತೆಗಾತಿ ವಿಶಿಷ್ಟ ಸಂದರ್ಭದಲ್ಲಿ ಕಂಡ ಅನುಭವಗಳು ಹೆಪ್ಪುಗಟ್ಟಿದ್ದ ತೀವ್ರ ಸಂವೇದನೆಗಳು ಒಂದೊಂದು ಪಾತ್ರಗಳಾಗಿ ಮೈ ತಳೆದಿವೆ. ಮುಕ್ತ ಪ್ರಪಂಚಕ್ಕೆ ಹೇಳಲೇಬೇಕೆಂದುಕೊಂಡ ಅಭಿಪ್ರಾಯಗಳು ಪಾತ್ರಗಳ ಉಸಿರಿನಲ್ಲಿ ಹರಿದಾಡಿದೆ.

ಕತೆಯ ಪಾತ್ರಗಳು ಖಂಡಿತವಾದಿಗಳಂತೆ ಹೇಳಬೇಕಾದ ವಿಚಾರಗಳನ್ನು ಸಿಡಿಲಿನಂತೆ ಆಸ್ಫೋಟಿಸುತ್ತವೆ. ತಮ್ಮ ವಿಚಾರ ಸಾಧ್ಯವಾಗಲೇಬೇಕೆಂಬ ಹಠ ತೊಟ್ಟಂತೆ ವರ್ತಿಸುತ್ತವೆ.

ಮನುಷ್ಯನ ಮೂಲದಲ್ಲಿ ಅಡಗಿರುವ ವಿದ್ರೋಹಗಳನ್ನು ಒಡೆಯುವ ಶಕ್ತಿ ಇವರ ವಿಚಾರಗಳಿಗಿದೆ. ಆದ್ದರಿಂದಲೇ ಪಾತ್ರಗಳು ಒಂದು ಬಗೆಯ ಘರ್ಷಣೆಯನ್ನು ಎದುರಿಸುತ್ತದೆ.

ಪುರುಷ, ಭೋಗಿಸುವ ಹಕ್ಕು ತನ್ನದೇ ಎಂಬ ದುರಹಂಕಾರದಿಂದ ಕೇಂದ್ರಿತವಾಗಿದ್ದಾನೆ. ಮಹಿಳೆಗೆ ಸಮಾನತೆಯನ್ನು ಈಡೇರಿಸಿಕೊಳ್ಳಲು, ಇವರ ಪಾತ್ರಗಳು ಹಠವಾದಿಗಳಂತೆ ವರ್ತಿಸುತ್ತವೆ.

ಲೇಖಕ ಕತೆ ಬರೆಯುವಾಗ ಹುಟ್ಟಿಕೊಂಡ ಪಾತ್ರಗಳಲ್ಲ ಅವು, ಅವರ ಬದುಕಿನ ವಿವಿಧ ಸನ್ನಿವೇಶದಲ್ಲಿ ಕಾಣಿಸಿಕೊಂಡು, ತಮ್ಮ ಸಂವೇದನೆಗಳನ್ನು ನಿವೇದನೆ ಮಾಡಿಕೊಂಡವು. ಅವು ಅನುಭವಿಸಿದ ವಿಚಿತ್ರ ಸಂಕಟಗಳನ್ನು ಕತೆಯಾಗಿ ರೂಪಿಸಬೇಕೆಂದು ಒತ್ತಾಯ ಮಾಡಿದವು. ಜೀವನ ವಿಧಾನಗಳೇ ಕತೆಯಾಗಿ ಮಾರ್ಪಟ್ಟಿರುವುದರಿಂದ ಓದುಗರ ಮೇಲೆ ಅವು ತಮ್ಮ ಅನುಭವವೇ ಅನಿಸಿಬಿಡುವಂತ ತೀವ್ರ ಪರಿಣಾಮ ಉಂಟು ಮಾಡುತ್ತದೆ.

ಬಹುಮುಖಿ ಸಂಸ್ಕೃತಿಯನ್ನು ದಾಖಲಿಸುವ ಜಾಹ್ನವಿಯವರ ಕತೆಗಳು ಅತಿ ಆಧುನಿಕ ನಗರದಿಂದ ಗ್ರಾಮೀಣ ಪರಿಸರದ ವಿವಿಧ ವರ್ಗದ ವಿವಿಧ ಸ್ತರಗಳ ಮಹಿಳೆಯರ ಬದುಕಿನ ಸೂಕ್ಷ್ಮ ವಿವರಗಳನ್ನು ಓರೆಕೋರೆಗಳನ್ನು ದಾಖಲಿಸಿವೆ. ಶ್ರೇಣೀಕೃತ ಸಮಾಜದ ವಿವಿಧ ನೆಲೆಗಳಲ್ಲಿ ಅಡಗಿರುವ ಮಹಿಳೆಯ ಸಮಸ್ಯೆಗಳನ್ನು ಹುಡುಕಿ ಹೊರತೆಗೆದಿದ್ದಾರೆ. ಒಂದೇ ಕುಟುಂಬದಲ್ಲಿ ಇರುವ ಮಹಿಳೆಯರ ಭಿನ್ನ ಮನಸ್ಥಿತಿ, ವಿದ್ಯೆ ಕಲಿತ ಸ್ತ್ರೀಯರಲ್ಲೂ ಇರುವ ಕ್ಷುದ್ರತೆ, ಸಿರಿವಂತ ಸ್ತ್ರೀಯರ ಹುಸಿತನ, ನಾಗರಿಕತೆಯ ಬೆನ್ನ ಹಿಂದೆ ಅಡಗಿರುವ ಕ್ಷುಲ್ಲಕತೆಯನ್ನು ಬಿಡದೆ ಒಪ್ಪಿಕೊಳ್ಳುತ್ತಾರೆ. ಹೆಣ್ಣು ಪಾತ್ರ ಎಂದು ಕನಿಕರಿಸುವುದಿಲ್ಲ; ವೈಭವೀಕರಿಸುವುದಿಲ್ಲ. ರಂಜನೀಯ ಗುಣಗಳನ್ನು ಆರೋಪಿಸುವುದಿಲ್ಲ. ಸಾಮಾನ್ಯತೆಯ ನೆಲೆಯಲ್ಲೇ ವಿವರಿಸುತ್ತಾರೆ. ವಾಸ್ತವವಾದಿ ಕಟುಸತ್ಯಗಳನ್ನು ಒಪ್ಪಿಕೊಳ್ಳುವುದರಿಂದಲೇ ಜಾಹ್ನವಿಯರು ಶ್ರೇಷ್ಠರಾಗುವುದು.

ಅವರು ಕಂಡುಕೊಂಡ ಸ್ತ್ರೀ ಪಾತ್ರಗಳು ನಾವು ಸಂಚರಿಸುವ ಮಾರ್ಗದಲ್ಲಿ ಎಲ್ಲಾದರೂ ಸಿಗುತ್ತವೆ. ಬಸವಿ, ವಿಧವೆಯೋ, ಕಲಿತ ಮಹಿಳೆ, ಸಾಮಾನ್ಯ ಗೃಹಿಣಿ, ಆಧುನಿಕ ಸ್ತ್ರೀ, ಪುಟ್ಟಹುಡುಗಿ, ದಿಟ್ಟಹುಡುಗಿ ಹೀಗೆ ಇವರ ಹಲವು ಮನಸ್ಥಿತಿಯ ಪಾತ್ರಗಳು ಉಜ್ವಲತೆಗಿಂತ ಮಹಿಳೆಯರಿಗೆ ಇರಬೇಕಾದ ಎಚ್ಚರಿಕೆಯನ್ನು ನೀಡುತ್ತದೆ. ಇವರ ಕತೆಯನ್ನು ಎಚ್ಚರವಂತ ಮಹಿಳೆಯೊಬ್ಬಳು ಅಡಗಿದ್ದಾಳೆ. ಪುರುಷ ಸಮಾಜ ವಿಧಿಸಿದ್ದ ಸೀಮಾರೇಖೆಯನ್ನು ದಾಟಲು ಪ್ರಯತ್ನಿಸಿರುವ ಇವರ ಪಾತ್ರಗಳು ಸ್ತ್ರೀ ಸಾಧ್ಯತೆಯ ಹೊಸ ಸವಾಲುಗಳನ್ನು ಉತ್ತರಿಸುತ್ತದೆ. ಉಳಿದೆಲ್ಲ ಸ್ತ್ರೀ ಲೇಖಕಿಯರಂತೆ ತಮ್ಮ ಪಾತ್ರಗಳನ್ನು ಓಲೈಸುವುದಿಲ್ಲ, ವೈಭವೀಕರಿಸುವುದಿಲ್ಲ. ಬದಲಾಗಿ ಹೆಣ್ಣಿನ ಮನೋ ವೈಕಲ್ಯತೆಗಳ ದೌರ್ಬಲ್ಯಗಳನ್ನು, ಜಾಳುತನವನ್ನು, ಆತ್ಮದ ಬೀಗುವಿಕೆಯನ್ನು ಸಹಜವಾಗಿ ಒಪ್ಪಿಕೊಳ್ಳುತ್ತಾರೆ. 'ಸ್ತ್ರೀ ಮನಸ್ಥಿತಿ ಅಸಮತೋಲನಗಳ ಸಮತೋಲ' ಎಂಬ ಸೈದ್ಧಾಂತಿಕ ನಿಲುವು ತಳೆಯುತ್ತಾರೆ.

ಬಿ.ಟಿ.ಜಾಹ್ನವಿಯರವ ವಿಚಾರ–ವಿನ್ಯಾಸ

ಬದುಕಿನ ಮೂಲಸೆಲೆಯಿಂದ ಹೊರಟ ಇವರ ಕತೆಗಳು 'ಜೀವನಕ್ಕಾಗಿಯೇ ಕಲೆ' ಎಂಬ ವಾದವನ್ನು ಪುಷ್ಟೀಕರಿಸುತ್ತದೆ. ಕಥಾನಕತೆಯಲ್ಲಿ ಕೃತಕತೆ, ಸಾಂಕೇತಿಕತೆ, ವರ್ಣನಾತ್ಮಕತೆ ಇರುವುದೇ ಇಲ್ಲ.

ಸ್ತ್ರೀ ಸಂವೇದನಾ ಕತೆಗಳನ್ನು ರಚಿಸಿದ್ದರೂ ಭಾವಾತಿರೇಕಕ್ಕೆ ಒಳಗಾಗದ ಸಂಯಮವಿದೆ. ಭಾವ–ವಿಚಾರಗಳನ್ನು ಸಾಧಾರಣೀಕರಣಗೊಳಿಸುವ ಸಹಜತೆ ಇವರ ಕಥಾನಕತೆಯ ಸ್ವಭಾವವಾಗಿರುವುದರಿಂದ ಇವರ ಕತೆಗಳು, ಕತೆಗಳಷ್ಟೇ ಅಲ್ಲ ಯಾರದೋ ಬದುಕಿನ ಪುಟಗಳ ಸಾಲುಗಳು.

ಒಬ್ಬ ಕವಿ ಎದುರಿಸುವ ಬಹುಮುಖ್ಯ ಸಮಸ್ಯೆಯೆಂದರೆ ಯುಗಪ್ರಜ್ಞೆಯ ಸೆಳವು. ನಿರ್ಧಿಷ್ಟಕಾಲ ಪರಂಪರೆಯ ಮೌಲ್ಯಗಳಿಗೆ ತನ್ನ ವಿಚಾರಗಳನ್ನು ಪರಿಮಿತಿಗೊಳಿಸಿಕೊಳ್ಳುವಿಕೆ. ಯುಗದ ಅವಾಂತರದಲ್ಲಿ ವೈಯಕ್ತಿಕ ಪ್ರತಿಭೆ ಮಾಸಿಹೋಗುವ ಅಪಾಯವಿದೆ. ಆ ರೀತಿ ಒತ್ತಡವೊಂದು ಕವಿಯ ಸೃಜನತೆಯ ಮೇಲೆ ಸೃಷ್ಟಿಯಾಗಿಬಿಡುತ್ತದೆ. ಯುಗದ ಆಶಯಗಳನ್ನು ಒಪ್ಪಿಕೊಳ್ಳದಿರುವ ಕವಿ ಗುಂಪಿನಿಂದ ಹೊರಗುಳಿಯುತ್ತಾನೆ. ಅಂತಹ ವಲಯಪ್ರಜ್ಞೆಯೊಂದು ಆವರಿಸಿಕೊಂಡಿರುತ್ತದೆ.

ನವ್ಯಪ್ರಾಕಾರದ ಬಹುಮುಖ್ಯ ಲಕ್ಷಣ ಎಂದರೆ ಪಾಶ್ಚಾತ್ಯೀಕರಣದ ಪ್ರಭಾವ. ದೇಸಿತನದ ಮೂಲತ್ವ ಕಳೆದುಹೋಗುವ ಅಪಾಯವನ್ನು 90ರ ದಶಕದ ಸಾಹಿತ್ಯ ಎದುರುಗೊಂಡಿತ್ತು. ಅಂತಹ ಒತ್ತಡಗಳಿಗೆ ಸಿಲುಕದೆ ಜಾಹ್ನವಿಯವರು ನವ್ಯದ ಬಹುಮುಖ್ಯ ಸಂಗತಿಗಳಿಂದ ಅತಿ ಸಾಂಕೇತಿಕತೆ, ಅಸಂಗತ ತತ್ವ, ಮಾರ್ಮಿಕತೆ, ಅಮೂರ್ತತೆ, ಸಿನಿಕತೆ, ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗದೆ, ವೈಯಕ್ತಿಕ ಸಂವೇದನೆಗಳನ್ನು ಅಷ್ಟೇ ನೈಜವಾಗಿ ಅಭಿವ್ಯಕ್ತಿಸಿದ್ದಾರೆ. ಪ್ರಧಾನವಾಹಿನಿ ಹೇಳುವ ಮುಖ್ಯಧಾರೆಗೆ ಶರಣಾಗದೆ ತನ್ನ ಕಣ್ಣಿನಿಂದ ಜಗತ್ತನ್ನು ನೋಡುತ್ತಾರೆ.

ಜಾಹ್ನವಿಯರು ಆಧುನಿಕತೆಯ ಆಲೋಚನೆಗಳು ಶುದ್ಧ ಭಾರತೀಯ ಪರಿಸರವನ್ನು ಬದಲಾಯಿಸುವುದಿಲ್ಲ. ದೇಸಿ ಸಂವಿಧಾನದಲ್ಲಿ ಆಧುನಿಕತೆಯ ಎಳೆಗಳ ಅನುಸಂಧಾನದೊಡನೆ ಒಳಮಾರ್ಗವನ್ನು ಕಂಡುಕೊಳ್ಳುತ್ತಾರೆ. ರಸ, ಔಚಿತ್ಯ, ವಕ್ರೋಕ್ತಿ, ಅಲಂಕಾರ ಮೀಮಾಂಸೆಗಳ ಪರಿಕರವಿಲ್ಲದೆಯೂ ಕತೆಗಳಲ್ಲಿ ಪರಿಣಾಮಕಾರಿ ಕುತೂಹಲ ಮೂಡಿಸುತ್ತಾರೆ. ಒಬ್ಬ ಲೇಖಕನ ಮುಖ್ಯ ಜವಾಬ್ದಾರಿ ಎಂದರೆ 'ಅಭಿರುಚಿಯ ನಿರ್ಮಾಣ' ಆಗಿದೆ. ಮಾರ್ಕ್ ಶೋರರ್ ಹೇಳುವಂತೆ, 'ತಂತ್ರವೆಂದರೆ ಲೇಖಕನ ಸಾಮಗ್ರಿಯಾದ ಅನುಭವವನ್ನು, ಅಭಿವ್ಯಕ್ತಿಸಲು ಒತ್ತಾಯಿಸುವ ಸಾಧನ.' ಈ ಸಾಧನ ಕವಿಯ ಅನುಭವ, ವಿಚಾರವನ್ನು ಉಜ್ವಲಗೊಳಿಸುತ್ತದೆ. ಅದು ಭಾಷಾ ತಂತ್ರಜ್ಞತೆಯನ್ನು ಹುಡುಕಿ ಹೋಗುವ ಪ್ರಮೇಯವಿಲ್ಲದೆ ತಾನಾಗಿಯೇ ಒಲಿದು ಬರುತ್ತದೆ.

ಸತ್ಯಾಂಶವೆಂದರೆ ಇವರ ಕತೆಗಳಿಗೆ ಹೆಚ್ಚಿನ ವಿಮರ್ಶೆಗಳು ದೊರಕಲಿಲ್ಲ. ಅದು ದೊಡ್ಡ ಕೊರತೆಯೂ ಅಲ್ಲ. ವಿಮರ್ಶೆಗಳೇ ಸಾಹಿತ್ಯದ ನಿಯಮಗಳಲ್ಲ. ಉತ್ತಮ ಸಾಹಿತ್ಯ ಕೆಲಕಾಲ ಮರೆಯಾದಂತೆ ಕಂಡರೂ ಸದಾ ಇಲ್ಲಿಯೇ ಸಂಚರಿಸುತ್ತಲೇ ಇರುತ್ತದೆ. ಇವರ ಕತೆಗಳಿಗ ಸಮಾಜವನ್ನು ವಿಮರ್ಶಿಸುವ ಗುಣವಿದೆ. ಇವರ ಕೃತಿಗಳನ್ನು ಸ್ವತಂತ್ರ ಎಂದು ನಂಬಲು ಇನ್ನೊಂದು ಆಧಾರವಿದೆ. ಅದೆಂದರೆ ಪುರುಷ ಸಾಹಿತ್ಯದ ಅನುಕರಣೆ ಮಾಡುವುದಿಲ್ಲ.

ಮಹಿಳಾ ಸಾಹಿತ್ಯದ ಉಜ್ವಲತೆ ಎಂದರೆ ಹೊಸಹೊಸ ಜ್ಞಾನಗಳನ್ನು ತನ್ನೊಂದಿಗೆ ಸೇರಿಸಿಕೊಳ್ಳುವುದು. ಬದಲಾಗುತ್ತಿರುವ ಸಮಾಜದ ಎಲ್ಲ ಸ್ಥಿತ್ಯಂತರಗಳಲ್ಲಿ ಮಹಿಳೆಯ ಸ್ಥಾನವನ್ನು ಮತ್ತು ಕರ್ತವ್ಯವನ್ನು ತಿಳಿಸಿ ಹೇಳುತ್ತದೆ. ಇದು ಸಂಸ್ಕೃತಿಯ ಗತಿಶೀಲತೆಯೂ ಹೌದು.

ಕತೆಗಳಾಚೆ ಇವರು ಬದುಕಿನ ಸ್ಥಿರತೆಗಳನ್ನು ನಮ್ಮ ಅನುಭವಕ್ಕೆ ತಂದುಕೊಡುವ ಇವರ ಕತೆಗಳು ಕನ್ನಡ ಸಾಹಿತ್ಯದಲ್ಲಿ ನವ್ಯೋತ್ತರ ಋತುವೊಂದನ್ನು ಸೃಷ್ಟಿಸಿದೆ.

ಅಧ್ಯಾಯ – 6

ಸಮಾರೋಪ

ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವ!

ಏರಿಲ್ಲದ ಘಾಯದಲಿ ನೊಂದೆನವ್ವ

ಸುಖವಿಲ್ಲದ ದಾವತಿ ಗೊಂಡೆನವ್ವ!

ಚೆನ್ನಮಲ್ಲಿಕಾರ್ಜುನ ದೇವಂಗೊಲಿದು

ಬಾರದ ಭವಂಗಳಲಿ ಬಂದೆನವ್ವ!

'ಪಾವಿತ್ರ್ಯತೆ ಎಂಬ ನೀತಿ ಹೆಣ್ಣಿಗೆ ಮಾತ್ರ ಅನ್ವಯಿಸುತ್ತದೆಯೇ, ಅದು ಹೆಣ್ಣಿನ ಚರ್ಮದಲ್ಲಿದೆಯೇ?' – ಡಾ.ಎಚ್.ಎಸ್. ಅನುಪಮಾ ಅವರ ತಾತ್ವಿಕ ಪ್ರಶ್ನೆ, ಜಾಹ್ನವಿಯವರ ಮೂಲಭೂತ ಪ್ರಶ್ನೆಯೂ ಆಗಿದೆ.

ಲೌಕಿಕದಿಂದ ವಿಮುಖಳಾಗಿ ಅಗಮ್ಯತೆಯತ್ತ ಹೊರಟ 'ಅಕ್ಕ' ಯಾವ ಚೆನ್ನಮಲ್ಲಿಕಾರ್ಜುನನ ಹುಡುಕಾಟಕ್ಕೆ ಪ್ರಯತ್ನಿಸಿದ್ದಳು? ಮಿಗುವಿಕೆ ಎಂದರೆ ಮೀರುವಿಕೆ ಎಂಬರ್ಥವೇ? ಎಲ್ಲ ಗಡಿಗಳಾಚೆ ಸಾವಿಲ್ಲದ, ಕೇಡಿಲ್ಲದ ಪುರುಷ ಸಂಬಂಧವನ್ನು ಪಡೆಯಲು ಪ್ರಯತ್ನಿಸಿದ್ದಳೇ? ಲೌಕಿಕತೆಯ 'ಕೇಡು'ಗಳನ್ನು ನಿರಾಕರಿಸಿ, ಸೀಮೆಯಿಲ್ಲದ ನಿಸ್ಸೀಮನನ್ನು ಹುಡುಕಿಕೊಳ್ಳುವ ಅವಳ ಮನಸ್ಥಿತಿಯಲ್ಲಿ ಮಹಿಳೆಯರ ಸಮಸ್ಯೆಗೆ ಉತ್ತರವಿದೆ. ಪ್ಲೆಟೋನಿಕ್ ಅಥವಾ ಭ್ರಾಮಕತೆಯಲ್ಲಿ ಮಾನ್ಯ ಪುರುಷನ ಅಸ್ತಿತ್ವ ಅಡಗಿದೆಯೇ? ಸ್ತ್ರೀ–ಪುರುಷ ಸಂಬಂಧಗಳನ್ನು 'ಸ್ವಚ್ಛಂದತೆ'ಯ ಚೌಕಟ್ಟಿನಲ್ಲಿ ನಿರೂಪಿಸಲು ಪ್ರಯತ್ನಿಸಿದ ಅವಳ ಹೋರಾಟದಲ್ಲಿ 'ಸ್ತ್ರೀ ಸ್ವಾತಂತ್ರ್ಯ' ದ ಎಳೆಗಳನ್ನು ಕಾಣಬಹುದಾಗಿದೆ. 12ನೇ ಶತಮಾನಕ್ಕಾಗಲೇ ಬಂಧನಗಳಾಚೆಗಿನ ಬದುಕಿನ, ಅಮೂರ್ತ ಚೆನ್ನಮಲ್ಲಿಕಾರ್ಜುನನ ಹುಡುಕಾಟ, ನನ್ನ ಸಂಶೋಧನೆಯ ಹುಡುಕಾಟವೂ ಆಗಿದೆ. ಇಂತಹ ಪ್ರಗತಿಪರ ಧೋರಣೆಗಳು; ಆಲೋಚನೆಗಳಲ್ಲಿ ಮಾತ್ರ ಉಳಿದುಹೋಗುವುದೋ ನಿತ್ಯ ಬದುಕಿನ ಸ್ವೀಕರಣೆಯಾಗಿ ಬಂದಾಗ ಹೆಣ್ಣಿನ ಆಯ್ಕೆ ಯಾವುದು? ಬಿ.ಟಿ.ಜಾಹ್ನವಿಯವರ ಕತೆಗಳಲ್ಲಿ ಹೆಣ್ಣಿನ ದಿಟ್ಟ ಹೆಜ್ಜೆಗಳ ಗುರುತುಗಳಿವೆ. 'ಸಹಿಷ್ಣುತೆ' ಲಕ್ಷಣ ಹೊರಗಿನಿಂದ ಬಂದ ಒತ್ತಾಯವಾಗದೆ ಅವಳ ಜಾಯಮಾನದ ಬೇರುಗಳಲ್ಲೇ ಅಡಗಿ ಹೋಗಿದೆಯೇ? ಕಡೆಗೂ ಸ್ತ್ರೀ ಅರ್ಥವಾಗದ ಪ್ರಶ್ನೆಯೇ ಆಗುತ್ತಾಳೆ. ಪುರುಷನಷ್ಟೇ ಅಲ್ಲದೇ, ಸ್ತ್ರೀ ಕೂಡ ತಾನೇ ಏರ್ಪಡಿಸಿಕೊಂಡಿರುವ ವರ್ತುಲ ಒಂದಿದೆ. ತನ್ನ ಅಸ್ತಿತ್ವಕ್ಕಾಗಿ ಅವಿರತ ಹೋರಾಟ ನಡೆಸುತ್ತಲೇ ಇದ್ದಾಳೆ.

'ಸ್ತ್ರೀ ಜಾಥಾ' ಕ್ಕೆ ಅಂತ್ಯಕಾಲ ಸನ್ನಿಹಿತವಾಗಿದೆ. ಹೆಣ್ಣಿನ ಅನಿಶ್ಚಯತೆ, ಅನಿರ್ಧಾರತೆಯ ಪ್ರಶ್ನೆಗಳಿಗೆ ಬಿ.ಟಿ.ಜಾಹ್ನವಿಯವರ ಜಾಗರೂಕತೆಯು ಸಂದೇಶ ನೀಡುತ್ತದೆ. 'ಬಿ.ಟಿ.ಜಾಹ್ನವಿಯವರ ಕತೆಗಳಲ್ಲಿ ಎಚ್ಚರದ ಮಹಿಳೆಯೊಬ್ಬಳು ಅಡಗಿದ್ದಾಳೆ.'

ಅಧ್ಯಾಯ – 7

ಅನುಬಂಧ

ಬಿ.ಟಿ.ಜಾಹ್ನವಿಯವರೊಡನೆ ಒಂದು ಸಂದರ್ಶನ

ಒಂದು ಸಾಹಿತ್ಯ ಕೃತಿಯನ್ನು ಅರ್ಥೈಸಿಕೊಳ್ಳಲು ಲೇಖಕರ ಸ್ವಯಂ ಅಭಿಪ್ರಾಯಗಳನ್ನು ಗಮನಿಸಬೇಕಾಗುತ್ತದೆ. ಕತೆಗಳನ್ನು ನಾವು ಓದಿದಾಗ ಕಂಡುಬಂದ ವಿಚಾರಗಳು, ಸಾಹಿತಿಯ ಕಣ್ಣಿನಿಂದ ನೋಡುವುದಕ್ಕೂ ಒಂದು ಸೂಕ್ಷ್ಮ ಅಂತರ ಇದ್ದೇ ಇರುತ್ತದೆ. ಕತೆಯೊಂದು ಸೃಜಿಸುವಂತೆ ಮಾಡಿದ ಒತ್ತಡ ಸ್ಫೂರ್ತಿ, ಅನುಭಾವಿತನ ಲೇಖಕನದ್ದೇ ಸ್ವಂತದ್ದಾಗಿರುತ್ತದೆ. ಓದುಗನ ಮೇಲೆ ಬೀರುವ ಪರಿಣಾಮ ಇನ್ನೊಂದು ಬದಿಯದು. ಕವಿಯ ಸ್ವಂತ ಚಿಂತನೆಗಳನ್ನು ಅವರ ಮಾತಿನಲ್ಲೇ ಕೇಳಿದಾಗ, ವಿಮರ್ಶೆಯ ಆಸಕ್ತಿ ಹೊರಳುಮಾರ್ಗವನ್ನು ಹಿಡಿಯುತ್ತದೆ. ವಿಮುಖ, ಕಳ್ಳುಬಳ್ಳಿ ಕತೆಗಳನ್ನು ಓದಿದಾಗ, ಬಿ.ಟಿ.ಜಾಹ್ನವಿಯವರ ಮೂಲ ಅಭಿಪ್ರಾಯಗಳನ್ನು ಕೇಳಲೇಬೇಕೆಂಬ ಕುತೂಹಲ ಉಂಟಾಯಿತು.

ಅವರನ್ನು ದೂರಸಂಪರ್ಕದಿಂದ ಸಂದರ್ಶಿಸಿದಾಗ ದೊರೆತ ವಿಷಯಗಳಿವು:

ಸಂಶೋಧಕಿ: ನಿಮ್ಮ ಕತೆಗಳ ಸ್ತ್ರೀ ಪಾತ್ರಗಳು ಕೈಗೊಳ್ಳುವ ನಿರ್ಧಾರ, ವರ್ತನಾಶೀಲ ಬದುಕಿನಲ್ಲಿ ಸಾಧ್ಯವಿದೆಯೇ?

ಲೇಖಕಿ: ನೋಡಿ, ನಾವೆಲ್ಲಾ ಒಂಥರಾ ಚೌಕಟ್ಟಿನೊಳಗೇ ಬದುಕುತ್ತಿದ್ದೇವೆ. ಸಮಾಜ ಕೂಡ ಒಂದು ಇಮೇಜ್ ಸೃಷ್ಟಿಮಾಡಿದೆ. 'ಹೆಣ್ಣು ಹೀಗೆ ಇರಬೇಕು; ಗಂಡು ಹಾಗೇ ಇರಬೇಕು' ಎಂದು. ಅಂತಹ ಒತ್ತಾಯಗಳನ್ನು ನಾವು ಬಗ್ಗುಬಡಿಯಬೇಕು. ಹೆಣ್ಣೊಬ್ಬಳು ಮುಕ್ತವಾಗಿ ಮಾತನಾಡುವಂತಿಲ್ಲ. ಅದರಲ್ಲೂ ಲೈಂಗಿಕ ವಿಚಾರಗಳನ್ನು ವ್ಯಕ್ತಪಡಿಸುವಂತಿಲ್ಲ. ಹೆಣ್ಣಿನ ವಿಚಾರದಲ್ಲಿ ಗಂಡು ಕುರುಡನಾಗಿದ್ದಾನೆ. ಹೆಣ್ಣು ತನ್ನ 'ಬೇಕು'ಗಳನ್ನು ತಾನೇ ಪೂರೈಸಿಕೊಳ್ಳಬೇಕಾಗಿದೆ.

ನೋಡಿ, ಈ ಕಥೆ ಪರಂಪರೆಯೇ ಭಿನ್ನವಾಗಬೇಕಾಗಿದೆ! ನನ್ನ ಸುತ್ತಮುತ್ತ ಪರಿಸರದಲ್ಲಿ ನಾನೇ ಹೋಗಿ ಪ್ರಯತ್ನಿಸಿ, ವಿಚಾರಿಸಿ, ಮುಕ್ತ ಭೇಟಿ ಮಾಡಿ ಕತೆಯಾಗಿಸಿದ್ದೇನೆ. ನನ್ನ 'ಬೇಕು'ಗಳನ್ನು ನಾನು ಈಡೇರಿಸಿಕೊಂಡಿದ್ದೇನೆ.

'ನಾನು ಹೇಳಿರುವ ಆಧುನಿಕ ಎನ್ನಿಸುವ ವಿಚಾರಗಳನ್ನು ಎಲ್ಲೂ ಓದಿರಲಿಲ್ಲ. ಯಾವ ಕತೆಗಳಲ್ಲೂ ಹಿಂದೆ ಓದಿಲ್ಲ.'

ಪುರುಷ ಸಮಾಜದ ಒಪ್ಪಿಗೆ ನನಗೆ ಬೇಕಿಲ್ಲ, ಸರಿ–ತಪ್ಪು ನನಗೆ ಗೊತ್ತಿದೆ. ಔಟ್ ಆಫ್ ವೇ ಹೋಗಲು ನಾನು ಸಿದ್ಧ. ಬೇರೆಯವರಿಗೆ ಯಾಕೆ ಸಾಧ್ಯವಿಲ್ಲ? ನಾವು ಸಾಧ್ಯ ಮಾಡಬೇಕು.

ಕತೆಯ ಮೂಲಕ ಹೇಳಿರುವ ಸತ್ಯಗಳು ಕೇವಲ ಸಿದ್ಧಾಂತ ಆಗಕೂಡದು.

ಸಂಶೋಧಕಿ: ಆಧುನಿಕತೆ ಎಂಬ ಸ್ವರೂಪಕ್ಕೆ ನಿಮ್ಮ ವಿಶೇಷ ಅರ್ಥ ಏನು?

ಲೇಖಕಿ: ಈಗ ಪ್ರತಿಯೊಬ್ಬರ ಬಳಿ ಮೊಬೈಲ್ ಬಂದಿದೆ. ಕಂಪ್ಯೂಟರ್ ಇದೆ. ಅದನ್ನು ಇಟ್ಕೊಂಡು ನಾವು ಏನ್ ಮಾಡ್ತೀವಿ ಹೇಳಿ? ಅದೇ ಹಳೇ ಸಂಗತಿಗಳನ್ನು ಮಾತನಾಡುತ್ತೇವೆ. ಅವರ್ ಮನೇಲಿ ಹಾಗೆ; ಇವರ ಮನೇಲಿ ಹೀಗೆ...

ಬೆಲೆ ಬಾಳುವ ವಸ್ತುಗಳಿಂದ ಅಲ್ಲ. ನಮ್ಮ ಮೈಂಡ್ ಸೆಟ್ ಬದಲಾಗಬೇಕು, ಅದೇ ಆಧುನಿಕತೆ. ಬ್ಯಾಂಕ್ ಬ್ಯಾಲೆನ್ಸ್ ಮುಖ್ಯ ಅಲ್ಲ, ನಮ್ಮ ದೃಷ್ಟಿಕೋನ ಬದಲಾಗಬೇಕು. ಆಧುನಿಕತೆ ಎಂದರೆ, ಆಸೆಪಡೋದು ಅಲ್ಲ; ಇಚ್ಛಾಶಕ್ತಿಯನ್ನು ಕಾಪಾಡೋದು.

ಸಂಶೋಧಕಿ: ನಂತರ ನೀವು ಕತೆಗಳನ್ನು ಬರೆಯೋದು ನಿಲ್ಲಿಸಿದ್ದು ಏಕೆ? ಬಲವಾದ ಕಾರಣವಿದೆಯೇ?

ಲೇಖಕಿ: ಹಾಗೇನಿಲ್ಲ, ವೈಯಕ್ತಿಕ ಕಾರಣ. ಪತ್ರಿಕೆಗಳು ಪ್ರತಿಕ್ರಿಯೆ ನೀಡಲಿಲ್ಲ. ಸಾಕಷ್ಟು ವಿಮರ್ಶೆ ಬರಲಿಲ್ಲ, ಸ್ವಲ್ಪ ಬೇಸರ ಎನಿಸಿತು. ಪ್ರಚೋದಿಸುವ ವಸ್ತು ಇಲ್ಲ ಎಂದಲ್ಲ; ಪ್ರೋತ್ಸಾಹಿಸುವ ಪತ್ರಿಕೆ ಇರಲಿಲ್ಲ.

ನಾನು ಕತೆ ಬರೀಬೇಕೂಂತ ಬರೆಯಲಿಲ್ಲ. ಅವೇ ಬರೆಸಿಕೊಂಡವು. ಅಂತಹಾ ತೀವ್ರತೆ ನನ್ನನ್ನು ಬರೆಯುವಂತೆ ಮಾಡಿತು. ಎಲ್ಲವನ್ನೂ ನಾನು 'ಟಚ್' ಮಾಡಿದ್ದೇನೆ. ಹಳ್ಳಿ, ನಗರ, ಮಾಡರ್ನ್ ಸೊಸೈಟಿ, ಅರ್ಬಾನ್ ಸೊಸೈಟಿ ಎಲ್ಲವನ್ನೂ ಖುದ್ದು ನೋಡಿ ಬರೆದೆ. ದಲಿತರೊಳಗೆ ಇರಬಹುದಾದ ಸಂಗತಿಗಳನ್ನು ಬರೆದೆ, ಅದಕ್ಕೆ ವಿರೋಧವೂ ಬಂತು. ಸಮಾಜಕ್ಕೆ ನನ್ನ ಕತೆ ಸಂದೇಶ ಕೊಟ್ಟಿದೆ. ನಾನು ಚಿಪ್ಪಿನಲ್ಲೇ ಉಳಿದೆ. ನೋ ಪ್ರಾಬ್ಲಮ್, ಇಟ್ಸ್ ಆಲ್‌ರೈಟ್!

ಸಂಶೋಧಕಿ: ಪಾಲಿಟಿಕ್ಸ್ ಏಕೆ ಬಿಟ್ಟಿರಿ? ರಾಜಕೀಯ ಕ್ಷೇತ್ರ ನೀವು ಮುಟ್ಟಲಿಲ್ಲ.

ಲೇಖಕಿ: ಹೌದು, ಪಾಲಿಟಿಕ್ಸ್ ಗೊತ್ತಿಲ್ಲ. ಸಾಮಾನ್ಯ ವಿಚಾರಗಳು ಬೇಕಾದಷ್ಟಿವೆ. ಇವು ಕಾಡಿದಷ್ಟು ರಾಜಕೀಯ ಸಂಗತಿಗಳು ನನಗೆ ಮುಖ್ಯ ಎನ್ನಿಸಲಿಲ್ಲ. ನನಗೆ ಲಂಕೇಶ್ ಒಳ್ಳೇ ಬ್ರೇಕ್ ಕೊಟ್ಟರು. ಓದಿ, ಬರೆಸಿದ್ದಾರೆ. ಬರೀಬೇಕೂಂತ ಒತ್ತಾಯ ಹಾಕಿದ್ದಾರೆ. ಪ್ರೋತ್ಸಾಹ ಕೊಟ್ಟರು, ಎನರ್ಜಿ ಇತ್ತು ಬರೆದೆ. ಬೇರೆ ವಿಮರ್ಶಕರ ಪ್ರತಿಕ್ರಿಯೆ 'ನಿಲ್.' ಸಾಹಿತ್ಯ ಇಷ್ಟ, ಬರೆದೆ. ರಾಜಕೀಯ ಬಿಟ್ಟುಬಿಟ್ಟೆ.

ಸಂಶೋಧಕಿ: 'ದೂಪ್ದಳ್ಳಿ ಸೆಕ್ಸಿ ದುರುಗ' ನಾಟಕ ಆಗ್ತಿದೆ ಅಂತ ಕೇಳ್ದೆ.

ಲೇಖಕಿ: ಹೌದು, ಒಳ್ಳೇ ನಾಟಕೀಯತೆ ಇದೆ. ರಂಗಪ್ರಯೋಗ ಆಗಬಹುದು.

ಸಂಶೋಧಕಿ: ಕಥಾ ಸಾಹಿತ್ಯಕ್ಕೆ ನಿಮ್ಮ ಮುಂದಿನ ಕೊಡುಗೆ ಏನು?

ಲೇಖಕಿ: ಕತೆ ಬರೆಯಲೇಬೇಕು ಅನ್ನಿಸಿದರೆ ಬರೆಯುತ್ತೇನೆ. ಸದ್ಯಕ್ಕೆ ಇಲ್ಲ, ಬೇರೆ ಕಾರ್ಯಗಳಲ್ಲಿ ತೊಡಗಿದ್ದೇನೆ.

'my attitude will always be based on how you treat me'

ಆಕರ ಗ್ರಂಥಗಳು

1. ಕಳೆದುಕೊಂಡವಳು ಮತ್ತು ಇತರ ಕತೆಗಳು – ಬಿ.ಟಿ.ಜಾಹ್ನವಿ

2. ಕಳ್ಳುಬಳ್ಳಿ ಸಮಗ್ರ ಕಥಾ ಸಂಕಲನ – ಬಿ.ಟಿ.ಜಾಹ್ನವಿ

ಪರಾಮರ್ಶನ ಗ್ರಂಥಗಳು

1. 'ಮಹಿಳೆ' ಚರಿತ್ರೆ– ಪುರಾಣ – ಡಾ.ರಾಮಲಿಂಗಪ್ಪ ಟಿ. ಬೇಗೂರು

2. 'ಹೆಣ್ಣು' ಸಂಕರ ಕಾಲದ ಆತ್ಮಪ್ರಜ್ಞೆ – ಡಾ.ಎಚ್.ಎಸ್. ಅನುಪಮಾ

3. 'ನವಿಲು' ಪತ್ರಿಕೆಯ ಲೇಖನಗಳು – ಸಂಪಾದಕರು, ವಿ.ಆರ್. ಕಾರ್ಪೆಂಟರ್

4. ಶಕ್ತಿ ಶಾರದೆಯ ಮೇಳ – ಡಿ.ಆರ್. ನಾಗರಾಜ್

5. ಕನ್ನಡ ಕಥಾ ಸಾಹಿತ್ಯ : ಸಣ್ಣಕಥೆ – ಜಿ.ಎಸ್. ಅಮೂರ

6. ಕಳ್ಳುಬಳ್ಳಿ ಮುನ್ನುಡಿ ಲೇಖನ – ಹೆಚ್.ಎಸ್. ರಾಘವೇಂದ್ರರಾವ್

7. ಪರಂಪರೆ – ಮಹಿಳಾ ಸಾಹಿತ್ಯ ಬಿಡಿಲೇಖನ – ಹೆಚ್.ಎಸ್. ರಾಘವೇಂದ್ರರಾವ್